ಬುಧವಾರ, ಮೇ 26, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 146 | ಪುಟ 10
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಆಕ್ಸಿಟೆಕ್ ಅಭಿವೃದ್ಧಿಪಡಿಸಿರುವ ಈ ಕುಲಾಂತರಿ ಸೊಳ್ಳೆಗಳು ಮುಂದಿನ 12 ವಾರಗಳಲ್ಲಿ ಸುಮಾರು 12 ಸಾವಿರ ಸೊಳ್ಳೆಗಳನ್ನು ಉತ್ಪತ್ತಿ ಮಾಡುವ ನಿರೀಕ್ಷೆ ಇದೆ.

ಆಳ-ಅಗಲ
ಕೋವಿಡ್ ಪ್ರಕರಣ ಇಳಿಕೆಯ ಆಶಾಕಿರಣ

ವಿಜಯೇಂದ್ರ ವಿರುದ್ಧ ಕ್ರಮ ಏನು: ಹೈಕೋರ್ಟ್ ಪ್ರಶ್ನೆ 9
ಮೇಕೆದಾಟು: ಪರಿಶೀಲನೆಗೆ ಎನ್‌ಜಿಟಿ ಸಮಿತಿ 8

ಸೆನ್ಸೆಕ್ಸ್	ನಿಫ್ಟಿ	₹/$
50,634 ▼	15,203 ▲	72.77 ▲

ಸಿಬಿಐ ನಿರ್ದೇಶಕರಾಗಿ ಸುಬೋಧ್ ನೇಮಕ

ನವದೆಹಲಿ (ಪಿಟಿಐ): ಹಿರಿಯ ಐಪಿಎಸ್ ಅಧಿಕಾರಿ ಸುಬೋಧ್ ಕುಮಾರ್ ಜೈಸ್ವಾಲ್ ಅವರನ್ನು ಸಿಬಿಐ ನಿರ್ದೇಶಕರನ್ನಾಗಿ ನೇಮಿಸಿ ಸಿಬ್ಬಂದಿ ಸಚಿವಾಲಯ ಮಂಗಳವಾರ ಆದೇಶ ಹೊರಡಿಸಿದೆ.

ಇವರ ಅಧಿಕಾರದ ಅವಧಿ ಎರಡು ವರ್ಷಗಳು. ಮಹಾರಾಷ್ಟ್ರ ಕೇಡರ್‌ನ 1985 ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಜೈಸ್ವಾಲ್, ಪ್ರಸ್ತುತ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಮಹಾನಿರ್ದೇಶಕರಾಗಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

24,72,973 ▲	ಒಟ್ಟು ಸೋಂಕಿತರು (24,50,215 ನಿನ್ನೆಯ ವಿವರ)
4,24,381 ▼	ಸಕ್ರಿಯ ಪ್ರಕರಣಗಳು
20,22,172 ▲	ಗುಣಮುಖರಾದವರು
26,399 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	22,758 ▼
ಗುಣಮುಖ	38,224 ▲
ಸಾವು	588 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ತೊಲಗಿಸಲು ಮೌಢ್ಯದ ಮೊರೆ

ಕೊರೊನಾ ಸೋಂಕು ಹರಡುವುದನ್ನು ನಿಯಂತ್ರಿಸಲು ಸರ್ಕಾರ ವಿವಿಧ ಮಾರ್ಗಸೂಚಿಗಳನ್ನು ಹೊರಡಿಸಿ, ಲಾಕ್‌ಡೌನ್ ಜಾರಿಗೊಳಿಸಿದೆ. ಆದರೆ, ರಾಜ್ಯದ ಕೆಲ ಭಾಗಗಳಲ್ಲಿ ಜನರು ಮತ್ತು ಜನಪ್ರತಿನಿಧಿಗಳು ಮೌಢ್ಯದ ಮೊರೆ ಹೋಗಿದ್ದಾರೆ. ಚಾಮರಾಜನಗರದಲ್ಲಿ ಕೊರೊನಾ ಮಾರಮ್ಮ ದೇವಿಯನ್ನು ಪ್ರತಿಷ್ಠಾಪಿಸಿದ್ದರೆ, ಬಳ್ಳಾರಿಯಲ್ಲಿ ಟ್ರ್ಯಾಕ್ಟರ್ ತುಂಬುವಷ್ಟು ಅಕ್ಕಿ, ಬೇಳೆ ಬೇಯಿಸಿ ಚೆಲ್ಲಲಾಗಿದೆ. ಬೆಳಗಾವಿಯಲ್ಲಿ ಶಾಸಕರ ನೇತೃತ್ವದಲ್ಲಿ ಓಣಿಗಳಲ್ಲಿ ಹೊಗೆ ಹಾಕುವ ಕಾರ್ಯ ನಡೆದಿದೆ... ಹೀಗೇ, ರಾಜ್ಯದ ವಿವಿಧೆಡೆಯ ಮೌಢ್ಯ ಆಚರಣೆ ಕುರಿತ ವರದಿ ಇಲ್ಲಿದೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ/ಚಾಮರಾಜನಗರ: ಬಳ್ಳಾರಿ ಜಿಲ್ಲೆಯ ಡಿ. ಕಗ್ಗಲ್ ಗ್ರಾಮಸ್ಥರು ಕೊರೊನಾ ಹೋಗಲಾಡಿಸಲು ಒಂದು ಟ್ರ್ಯಾಕ್ಟರ್ ತುಂಬುವಷ್ಟು ಅಕ್ಕಿ, ಬೇಳೆ ಬೇಯಿಸಿ ಮೊಸರಿನೊಂದಿಗೆ ಕಲಸಿ, ಸುಂಕ್ಲಮ್ಮ ಮತ್ತು ಮಾರಮ್ಮ ದೇವಿಗೆ ಪೂಜೆ ಸಲ್ಲಿಸಿ ಗ್ರಾಮದ ಸುತ್ತ ಶುಕ್ರವಾರ ಚೆಲ್ಲಿದ್ದಾರೆ.

ಕೆಲವು ದಿನಗಳ ಹಿಂದೆ ಬಳ್ಳಾರಿಯ ಕೊಳಗಲ್ ಗ್ರಾಮದಲ್ಲೂ ಇದೇ ರೀತಿ ಅನ್ನ ಚೆಲ್ಲಿದ ಪ್ರಸಂಗ ನಡೆದಿದೆ.

ಚಾಮರಾಜನಗರದ ಗಂಗಾಮತಸ್ಥರ ಬೀದಿಯ ಜನರು 'ಕೊರೊನಾ ಮಾರಮ್ಮ' ದೇವಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸುತ್ತಿದ್ದು, ಮಂಗಳವಾರ ಕೋಳಿಗಳನ್ನು ಬಲಿ ನೀಡಿದ್ದಾರೆ. ಕೆಲದಿನಗಳಿಂದ ಇಲ್ಲಿ ವಿಶೇಷ ಪೂಜೆ ನಡೆಯುತ್ತಿದ್ದು, ಎಂಟನೇ ದಿನವಾದ ಮಂಗಳವಾರ ಎಲ್ಲರ ಮನೆಗಳ ಮುಂದೆ ರಂಗೋಲಿ ಬಿಡಿಸಿ, ಬಲಿ ಅನ್ನ ಅರ್ಪಿಸಲಾಯಿತು.

'ಲೋಕಕಲ್ಯಾಣಕ್ಕಾಗಿ ಕೋಳಿ ಬಲಿ ನೀಡಲಾಗಿದೆ. ಎಲ್ಲರಿಗೂ ಒಳ್ಳೆಯದಾಗಲಿ ಎಂಬ ಆಶಯದಿಂದ ಪೂಜೆ ನೆರವೇರಿಸಲಾಗಿದೆ. ಈ ರೀತಿ ಮಾಡಿ ಎಂದು ನಮಗೆ ಯಾರೂ ಹೇಳಿಲ್ಲ. ಇದು ನಮ್ಮೆಲ್ಲರ ನಂಬಿಕೆ' ಎನ್ನುತ್ತಾರೆ ಸ್ಥಳೀಯರಾದ ಶ್ರೀನಿವಾಸ್.

ಜೋಡಿ ಕೋಳಿ ಬಲಿ (ಮಂಡ್ಯ ವರದಿ): ಮಳವಳ್ಳಿ ಮತ್ತು ನಾಗಮಂಗಲ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಕೊರೊನಾ ಸೋಂಕನ್ನು ಗ್ರಾಮಸ್ಥರು 'ಪಟ್ಟಲದಮ್ಮ', 'ದಂಡಿನಮಾರಮ್ಮ' ಎಂದು ಪರಿಗಣಿಸಿದ್ದಾರೆ. ಮೂರು ದಾರಿ ಕೂಡುವ ಸ್ಥಳದಲ್ಲಿ ದೇವಿಯ ಗದ್ದುಗೆ ಮಾಡಿ, ಮೂರು ಕಲ್ಲುಗಳನ್ನಿಟ್ಟು ಪೂಜಿಸಿ ಜೋಡಿ ಕೋಳಿಗಳನ್ನು ಬಲಿ ಕೊಡುತ್ತಿದ್ದಾರೆ.

ಶಾಸಕರಿಂದ ಹೋಮ–ಹವನ!

ಬೆಳಗಾವಿ: ಕೊರೊನಾ ಸೋಂಕು ನಿಯಂತ್ರಿಸಲು, ಇಲ್ಲಿನ ದಕ್ಷಿಣ ಮತಕ್ಷೇತ್ರದ ಓಣಿ–ಓಣಿಗಳಲ್ಲಿ ವಾತಾವರಣ ಶುದ್ಧೀಕರಣ ಕಾರ್ಯಕ್ಕೆ ಶಾಸಕ ಅಭಯ ಪಾಟೀಲ ಹೊಗೆ ಹಾಕುವ ಕಾರ್ಯಕ್ರಮಕ್ಕೆ ಮೊರೆ ಹೋಗಿದ್ದಾರೆ. ಸ್ಥಳೀಯರು ಈ ಕಾರ್ಯಕ್ಕೆ ಕೈಜೋಡಿಸಿದ್ದಾರೆ.

ಹೊಸೂರ ಪ್ರದೇಶದಲ್ಲಿ ಒಂದೇ ದಿನ 50 ಕಡೆಗಳಲ್ಲಿ ಈ ಕಾರ್ಯಕ್ರಮ ನಡೆದಿದ್ದು, ಓಣಿಗಳೆಲ್ಲವೂ ಹೊಗೆ ತುಂಬಿಕೊಂಡಿದ್ದವು. ಮನೆಗಳ ಮುಂದೆ ಅಗ್ನಿಕುಂಡ ಇಟ್ಟು ಅದರಲ್ಲಿ ಹಾಗೂ ಕೈಗಾಡಿಯಲ್ಲಿ ಬೆರಣಿ (ಕುಳ್ಳು), ಕರ್ಪೂರ, ತುಪ್ಪ, ಗುಗ್ಗಳ, ಬೇವಿನ ಎಲೆಗಳು, ಅಕ್ಕಿ ಕಾಳುಗಳು, ಲವಂಗ ಮೊದಲಾದವುಗಳನ್ನು ಹಾಕಿ ಬೆಂಕಿ ಹಚ್ಚಿದರು.

'ಸನಾತನ ಹಿಂದೂ ಸಂಸ್ಕೃತಿ ಇದಾಗಿದೆ. ವಾತಾವರಣ ಶುದ್ಧಿಯ ಉದ್ದೇಶಕ್ಕಾಗಿ ಕೈ ಗಾಡಿ ಸಿದ್ಧಪಡಿಸಲಾಗಿದೆ. ಕೆಲವರು ಎಳೆದುಕೊಂಡು ಹೋಗುತ್ತಾ ಹೊಗೆ ಹರಡುತ್ತಾರೆ. ಇದರಲ್ಲಿ ಮೌಢ್ಯವೇನಿಲ್ಲ. ವಾತಾವರಣ ಶುದ್ಧಿಗಾಗಿ ಜೂನ್ 15ರವರೆಗೂ ಇದು ಮುಂದುವರಿಯಲಿದೆ. ಜನರು ಸ್ವಯಂಪ್ರೇರಣೆಯಿಂದ ಭಾಗವಹಿಸಿದ್ದಾರೆ' ಎನ್ನುತ್ತಾರೆ ಅವರು.

ದೇವರ ಕುದುರೆ!: ಗೋಕಾಕ ತಾಲ್ಲೂಕಿನ ಕೊಣ್ಣೂರ–ಮರಡಿಮಠದಲ್ಲಿ ಕೊರೊನಾ ಸೋಂಕು ಹರಡದಂತೆ ಪ್ರಾರ್ಥಿಸಿ ಸುಕ್ಷೇತ್ರ ಮರಡಿಮಠದ ಕಾಡಸಿದ್ದೇಶ್ವರ 'ದೇವರ ಕುದುರೆ ಶೌರ್ಯ'ನನ್ನು ಗ್ರಾಮದಲ್ಲಿ ಸಂಚರಿಸಲು ಬಿಡಲಾಗಿತ್ತು. ಐದು ಸೋಮವಾರ ದೇವರ ಪ್ರಾರ್ಥನೆಗೆ ಗ್ರಾಮಸ್ಥರು ನಿರ್ಧರಿಸಿದ್ದರು. ಕೆಲವೇ ದಿನಗಳಲ್ಲಿ ಆ ಕುದುರೆ ಮೃತಪಟ್ಟಿತ್ತು. ಅದರ ಅಂತಿಮ ಯಾತ್ರೆಯಲ್ಲಿ ಲಾಕ್‌ಡೌನ್ ನಡುವೆಯೂ ನೂರಾರು ಮಂದಿ ಪಾಲ್ಗೊಂಡಿದ್ದರು.

ಬೆಳಗಾವಿಯ ದಕ್ಷಿಣ ಮತ ಕ್ಷೇತ್ರದಲ್ಲಿ 'ವಾತಾವಾರಣ ಶುದ್ಧಿ'ಗಾಗಿ ಶಾಸಕ ಅಭಯ ಪಾಟೀಲ ನೇತೃತ್ವದಲ್ಲಿ ನಡೆದ ಹೋಮ–ಹವನ ಕಾರ್ಯಕ್ರಮದ ನೋಟ ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ದೇವಸ್ಥಾನದ ಆವರಣಕ್ಕೆ ನೀರು: ಅಥಣಿ ತಾಲ್ಲೂಕಿನ ತೆಲಸಂಗದಲ್ಲಿ ಕೊರೊನಾ ನಿಯಂತ್ರಣಕ್ಕೆಂದು ಜನರು (ಪುರುಷರು) ನಸುಕಿನಲ್ಲಿ ತಣ್ಣೀರಿನಲ್ಲಿ ಉಡುಗೆ ಸಮೇತ ಮಿಂದು ಬಿಂದಿಗೆಗಳಲ್ಲಿ ನೀರು ತಂದು ಗ್ರಾಮದ ದೇವಸ್ಥಾನಗಳನ್ನೆಲ್ಲಾ ಸುತ್ತಿ ನೀರು ಹಾಕಿದ್ದಾರೆ.

ಹೋತ ಬಲಿ ಕೊಡಲು ಕರೆ!: ರಾಯಬಾಗ ತಾಲ್ಲೂಕಿನ ಅಲಕನೂರ ಗ್ರಾಮದ ಕರಿಸಿದ್ದೇಶ್ವರ ದೇವರಿಗೆ ಅಮಾವಾಸ್ಯೆ ದಿನ 21 ಹೋತಗಳನ್ನು ಬಲಿ ಕೊಡಬೇಕು ಎಂದು ಆ ದೇವಸ್ಥಾನದ ಅರ್ಚಕ ನಾಗಪ್ಪ ಕಟ್ಟಿಕಾರ ಕರೆ ನೀಡಿದ್ದಾರೆ.

ಕೊರೊನಾ ಸೋಂಕು ಹೋಗಲಾಡಿಸಲು, ಚಾಮರಾಜನಗರದ ಗಂಗಾಮತಸ್ಥರ ಬೀದಿಯಲ್ಲಿ ಮಂಗಳವಾರ ಮಹಿಳೆಯರು ಪ್ರಾರ್ಥಿಸಿದರು

ವೀರಭದ್ರೇಶ್ವರ ದೇವರಿಗೆ 'ಶಾಂತಿ'

ಕಲಬುರ್ಗಿ: ಚಿಂಚೋಳಿ ತಾಲ್ಲೂಕಿನ ಚಿಮ್ಮಈದಲಾಯಿ ಗ್ರಾಮದಲ್ಲಿ ಕೊರೊನಾ ಹಾಗೂ ಇತರ ಕಾರಣಗಳಿಂದಾಗಿ ಕೆಲ ದಿನಗಳಲ್ಲಿ 17 ಸಾವುಗಳು ಸಂಭವಿಸಿದ್ದವು. ಗ್ರಾಮದೇವರಾದ ವೀರಭದ್ರೇಶ್ವರ ಮುನಿಸಿಕೊಂಡಿದ್ದೇ ಇದಕ್ಕೆ ಕಾರಣ ಇರಬಹುದು ಎಂಬ ನಂಬಿಕೆಯಿಂದ ಗ್ರಾಮಸ್ಥರು ದೇವಸ್ಥಾನದಲ್ಲಿ ಪೂಜಾ ಕೈಂಕರ್ಯವನ್ನು ಈಚೆಗೆ ನೆರವೇರಿಸಿದ್ದಾರೆ.

ಪ್ರತಿ ಬಾರಿ ವೀರಭದ್ರೇಶ್ವರ ಜಾತ್ರೆಯು ಯುಗಾದಿ ದಿನ ಆರಂಭವಾಗಿ ತಿಂಗಳ ಕಾಲ ನಡೆಯುತ್ತದೆ. ಆದರೆ, ಈ ಬಾರಿ ಜಾತ್ರೆ ನಡೆಯದ ಕಾರಣ ದೇವರು ಮುನಿಸಿಕೊಂಡಿದ್ದಾನೆ ಎಂಬ ನಂಬಿಕೆಯಿಂದ, ಪೂಜೆ, ಅಭಿಷೇಕ ನೆರವೇರಿಸಿ 'ಶಾಂತಿ' ಮಾಡಿದ್ದಾರೆ.

ಕೋವಿಡ್ ಓಡಿಸಲು ಗಡಿ ದುರ್ಗವ್ವನ ಪೂಜೆ

ದಾವಣಗೆರೆ: ಹರಿಹರ ತಾಲ್ಲೂಕಿನ ಕಡರನಾಯಕನಹಳ್ಳಿಯಲ್ಲಿ 21 ದಿನಗಳಲ್ಲಿ 23 ಮಂದಿ ಮೃತಪಟ್ಟಿರುವುದರಿಂದ ಆತಂಕಗೊಂಡಿದ್ದ ಗ್ರಾಮಸ್ಥರು, 'ಮಾರಿ'ಯನ್ನು ಊರಿನ ಗಡಿಯಾಚೆ ಕಳುಹಿಸುವ ಗಡಿ ದುರ್ಗವ್ವನ ಪೂಜೆ ನೆರವೇರಿಸಿದ್ದಾರೆ.

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಝುಣ ಝುಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ

ಭಾರಿ ಚಂಡಮಾರುತ ಎದುರಿಸಲು ರಾಜ್ಯಗಳು ಸಜ್ಜು • 11 ಲಕ್ಷಕ್ಕೂ ಹೆಚ್ಚು ಜನರ ಸ್ಥಳಾಂತರ

ಪೂರ್ವ ಕರಾವಳಿಗೆ 'ಯಸ್' ಕಳವಳ

ಭುವನೇಶ್ವರ/ಕೋಲ್ಕತ್ತ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ಸೃಷ್ಟಿಯಾಗಿರುವ 'ಯಸ್' ಚಂಡಮಾರುತವು ಒಡಿಶಾದ ಭದ್ರಕ್ ಜಿಲ್ಲೆಯ ಧಾಮ್ರ ಬಂದರು ಸಮೀಪದಲ್ಲಿ ಬುಧವಾರ ಬೆಳಿಗ್ಗೆ ಭೂಪ್ರದೇಶಕ್ಕೆ ಅಪ್ಪಳಿಸಬಹುದು ಎಂದು ಅಂದಾಜಿಸಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ, ಪೂರ್ವ ಕರಾವಳಿಯಲ್ಲಿರುವ ಒಡಿಶಾ ಮತ್ತು ಪಶ್ಚಿಮ ಬಂಗಾಳದ ಲಕ್ಷಾಂತರ ಜನರನ್ನು ಸುರಕ್ಷಿತ ಪ್ರದೇಶಕ್ಕೆ ಕಳುಹಿಸಲಾಗಿದೆ.

ನೆರೆಯ ಜಾರ್ಖಂಡ್‌ಗೂ ಮುನ್ನೆಚ್ಚರಿಕೆ ನೀಡಲಾಗಿದ್ದು, ಚಂಡಮಾರುತದ ಪರಿಣಾಮ ಎದುರಿಸಲು ಸಿದ್ಧತೆ ನಡೆಸಲಾಗಿದೆ.

ಧಾಮ್ರ ಹಾಗೂ ಚಾಂದ್‌ಬಾಲಿ ಮಧ್ಯೆ ಚಂಡಮಾರುತವು ಭೂಸ್ಪರ್ಶ ಮಾಡಬಹುದು ಎಂದು ಹೇಳಲಾಗಿದೆ. ಕಡಲ ತೀರದ ಅನೇಕ ಪ್ರದೇಶಗಳಲ್ಲಿ ಈಗಾಗಲೇ ಭಾರಿ ಮಳೆ ಆರಂಭವಾಗಿದೆ. ಅದು ಮುಂದುವರಿಯಲಿದೆ. ಈ ಪ್ರದೇಶಗಳಲ್ಲಿ ಮಂಗಳವಾರ ಮಧ್ಯರಾತ್ರಿಯ ವೇಳೆಗೆ ಗಂಟೆಗೆ 80 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ತಿಳಿಸಿದ್ದಾರೆ.

ಚಂಡಮಾರುತ ಭೂಸ್ಪರ್ಶ ಮಾಡುವುದಕ್ಕೂ ಆರುಗಂಟೆ ಮುನ್ನ ಮತ್ತು ಆರುಗಂಟೆಗಳ ನಂತರದ ಅವಧಿಯಲ್ಲಿ ಭಾರಿ ಪರಿಣಾಮ ಉಂಟುಮಾಡಲಿದೆ. ದೊಡ್ಡ ದೊಡ್ಡ ಮರಗಳು, ವಿದ್ಯುತ್ ಕಂಬಗಳು ನೆಲಕ್ಕುರುಳುವ ಅಪಾಯವಿದೆ. ಚಾಂದ್‌ಬಾಲಿ ಜಿಲ್ಲೆಯಲ್ಲಿ ಗರಿಷ್ಠ ಹಾನಿಯಾಗುವ ಸಾಧ್ಯತೆ ಇದೆ ಎಂದು ಮಹಾಪಾತ್ರ ಮುನ್ನೆಚ್ಚರಿಕೆ ನೀಡಿದ್ದಾರೆ.

ಜನರ ಸ್ಥಳಾಂತರ: ಪಶ್ಚಿಮ ಬಂಗಾಳ ಮತ್ತು ಒಡಿಶಾದ ತೀರಪ್ರದೇಶದ ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸುವ ಕೆಲಸ ಭರದಿಂದ ಸಾಗಿದೆ. ಈಗಾಗಲೇ 11 ಲಕ್ಷಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸಲಾಗಿದೆ. ಚಂಡಮಾರುತವು ಭೂಮಿಗೆ ಅಪ್ಪಳಿಸುವುದಕ್ಕೂ ಮುನ್ನ ಇನ್ನಷ್ಟು ಜನರನ್ನು ಸ್ಥಳಾಂತರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಒಂಬತ್ತು ಲಕ್ಷಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ. ರಾಜ್ಯದಲ್ಲಿ 4,000 ಆಹಾರ ಕೇಂದ್ರಗಳನ್ನು ತೆರೆಯಲಾಗಿದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದರೆ, ಚಂಡಮಾರುತ ಅಪ್ಪಳಿಸಲಿರುವ ಪ್ರದೇಶದ ಸುಮಾರು 2 ಲಕ್ಷ ನಿವಾಸಿಗಳನ್ನು ಸ್ಥಳಾಂತರಿಸಿರುವುದಾಗಿ ಒಡಿಶಾ ಸರ್ಕಾರ ಹೇಳಿದೆ.

ಎನ್‌ಡಿಆರ್‌ಎಫ್‌ನ 112 ತಂಡ: ಐದು ರಾಜ್ಯಗಳು ಹಾಗೂ ಅಂಡಮಾನ್ ನಿಕೋಬಾರ್‌ನಲ್ಲಿ 'ಯಸ್' ಪರಿಣಾಮ ಉಂಟಾಗಲಿದ್ದು, ಸುರಕ್ಷತೆಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) 112 ತುಕಡಿಗಳನ್ನು ನಿಯೋಜಿಸಲಾಗಿದೆ. ಇದರಲ್ಲಿ 52 ತಂಡಗಳನ್ನು ಒಡಿಶಾಕ್ಕೆ ಹಾಗೂ 45 ತಂಡಗಳನ್ನು ಪಶ್ಚಿಮ ಬಂಗಾಳಕ್ಕೆ ಕಳುಹಿಸಲಾಗಿದೆ. ಉಳಿದ ತಂಡಗಳು ಆಂಧ್ರಪ್ರದೇಶ, ತಮಿಳುನಾಡು, ಜಾರ್ಖಂಡ್ ಹಾಗೂ ಅಂಡಮಾನ್ ನಿಕೋಬಾರ್‌ನಲ್ಲಿ ನಿಯೋಜನೆಗೊಂಡಿವೆ.

ಪಶ್ಚಿಮ ಬಂಗಾಳ ಹಾಗೂ ಒಡಿಶಾದಲ್ಲಿ ಈವರೆಗೆ ಯಾವ ಚಂಡಮಾರುತದ ಸಂದರ್ಭದಲ್ಲೂ ಇಷ್ಟೊಂದು ತುಕಡಿಗಳನ್ನು ನಿಯೋಜಿಸಿರಲಿಲ್ಲ ಎಂದು ಎನ್‌ಡಿಆರ್‌ಎಫ್‌ನ ಮಹಾನಿರ್ದೇಶಕ ಎಸ್.ಎನ್. ಪ್ರಧಾನ್ ಟ್ವೀಟ್ ಮಾಡಿದ್ದಾರೆ.

ಸೇನಾ ತುಕಡಿಗಳು: ಭಾರತೀಯ ಸೇನೆಯು ಎಲ್ಲಾ ರೀತಿಯ ಸಂದರ್ಭಗಳನ್ನು ಎದುರಿಸಲು ಸನ್ನದ್ಧವಾಗಿರುವ 17 ತುಕಡಿಗಳನ್ನು ಪಶ್ಚಿಮ ಬಂಗಾಳದಲ್ಲಿ ನಿಯೋಜಿಸಿದೆ. 'ರಾಜ್ಯ ಸರ್ಕಾರದ ಮನವಿಗೆ ಸ್ಪಂದಿಸಿ ಈ ತುಕಡಿಗಳನ್ನು ನಿಯೋಜಿಸಲಾಗಿದೆ' ಎಂದು ಸೇನೆಯ ಪ್ರಕಟಣೆ ತಿಳಿಸಿದೆ.

ನೆರವು ನೀಡಲು ರಾಹುಲ್ ಮನವಿ: ಚಂಡಮಾರುತದಿಂದ ಹಾನಿಗೆ ಒಳಗಾಗುವವರಿಗೆ ಎಲ್ಲಾ ರೀತಿಯ ನೆರವು ನೀಡುವಂತೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಪಕ್ಷದ ಕಾರ್ಯಕರ್ತರಲ್ಲಿ ಮನವಿ ಮಾಡಿದ್ದಾರೆ.



ಯಸ್ ಚಂಡಮಾರುತದ ಕಾರಣದಿಂದ ಪಶ್ಚಿಮ ಬಂಗಾಳದ ಪೂರ್ವ ಮೇದಿನಿಪುರದಲ್ಲಿ ಕಡಲು ಮಂಗಳವಾರ ಪ್ರಕ್ಷುಬ್ಧಗೊಂಡಿತ್ತು –ಪಿಟಿಐ ಚಿತ್ರ

ಮುಖ್ಯಾಂಶಗಳು

- ಎನ್‌ಡಿಆರ್‌ಎಫ್‌ನ 112 ತಂಡಗಳ ನಿಯೋಜನೆ
- ಸೇನೆಯ 12 ತುಕಡಿಗಳು ಪಶ್ಚಿಮ ಬಂಗಾಳಕ್ಕೆ ರವಾನೆ
- ಪಶ್ಚಿಮ ಬಂಗಾಳದಲ್ಲಿ 4,000 ಆಹಾರ ಕೇಂದ್ರಗಳು ಸಜ್ಜು

ಕ್ಷಿಪಣಿ ಕೇಂದ್ರ ರಕ್ಷಣೆಗೆ ಕ್ರಮ

ಒಡಿಶಾದ ಚಾಂಡಿಪುರ ಮತ್ತು ಅಬ್ದುಲ್ ಕಲಾಂ ದ್ವೀಪದಲ್ಲಿರುವ ಡಿಆರ್‌ಡಿಒದ ಕ್ಷಿಪಣಿ ಉಡಾವಣಾ ಕೇಂದ್ರಗಳಿಗೂ ಚಂಡಮಾರುತದಿಂದ ಹಾನಿಯಾಗುವ ಸಂಭವವಿದ್ದು, ಅವುಗಳ ರಕ್ಷಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಾಂಡಿಪುರದಲ್ಲಿ ಮೂರು ಕ್ಷಿಪಣಿ ಲಾಂಚ್‌ಪ್ಯಾಡ್‌ಗಳು ಹಾಗೂ ಅಬ್ದುಲ್ ಕಲಾಂ ದ್ವೀಪದಲ್ಲಿ ಒಂದು ಕ್ಷಿಪಣಿ ಉಡಾವಣಾ ಕೇಂದ್ರವಿದೆ. ಇದಲ್ಲದೆ ಎರಡು ಪ್ರತ್ಯೇಕ ನಿಯಂತ್ರಣ ಕೊಠಡಿಗಳೂ ಇಲ್ಲಿವೆ. ಚಂಡಮಾರುತವು ಇಲ್ಲಿ ಹೆಚ್ಚಿನ ಹಾನಿ ಉಂಟುಮಾಡುವ ಸಾಧ್ಯತೆ ಇದೆ ಎಂದು ನಿರೀಕ್ಷಿಸಲಾಗಿದೆ.

'ಇಲ್ಲಿನ ನಿಯಂತ್ರಣ ಕೊಠಡಿ ಹಾಗೂ ಬ್ಲಾಕ್‌ಹೌಸ್‌ಗಳನ್ನು ಗಂಟೆಗೆ 400 ಕಿ.ಮೀ. ವೇಗದ ಗಾಳಿಯನ್ನೂ ತಡೆದುಕೊಳ್ಳುವಂತೆ ವಿನ್ಯಾಸಗೊಳಿಸಲಾಗಿದೆ. ಉಳಿದಂತೆ, ಹಾನಿಯನ್ನು ಸಾಧ್ಯವಾದಷ್ಟು ಕಡಿಮೆ ಮಾಡುವ ರೀತಿಯಲ್ಲಿ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಯಾವುದೇ ಸ್ಥಿತಿಯನ್ನು ಎದುರಿಸಲು ನಾವು ಸನ್ನದ್ಧರಾಗಿದ್ದೇವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಾಯಕತ್ವ ಬದಲಾವಣೆಗೆ ಶಾಸಕಾಂಗ ಸಭೆ ನಾಂದಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ಜಿಲ್ಲೆ ತೋರಣಗಲ್‌ನಲ್ಲಿ ಜಿಂದಾಲ್ ಕಂಪನಿಗೆ 3,677 ಎಕರೆ ಭೂಮಿ ಪರಭಾರೆ ಮಾಡಿರುವುದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸರ್ಕಾರವನ್ನು ಇನ್ನಷ್ಟು ಇಕ್ಕಟ್ಟಿಗೆ ಸಿಲುಕಿಸಿದೆ.

ಈ ಸಂಬಂಧ ಚರ್ಚೆ ನಡೆಸಲು ಕೂಡಲೇ ಶಾಸಕಾಂಗ ಪಕ್ಷದ ಸಭೆ ಕರೆಯಬೇಕು ಎಂದು ಶಾಸಕರು ಒತ್ತಡ ಹೇರಲು ಆರಂಭಿಸಿದ್ದಾರೆ. ಕೋವಿಡ್ ನಿರ್ವಹಣೆಯಲ್ಲಿ ಸರ್ಕಾರದ ವೈಫಲ್ಯ, ಹೆಚ್ಚುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕೆಂಬ ವಿಷಯದಲ್ಲಿ ಕೂಡ ಶಾಸಕರು ಒಗ್ಗೂಡುತ್ತಿರುವುದು ಪಕ್ಷದಲ್ಲಿನ ಹೊಸ ಬೆಳವಣಿಗೆಯಾಗಿದೆ. ಪಕ್ಷ ಮತ್ತು ಸರ್ಕಾರದಲ್ಲಿನ ಈ ವಿದ್ಯಮಾನ ಮುಖ್ಯಮಂತ್ರಿ ಬದಲಾವಣೆಯ ವಿಚಾರವನ್ನು ಮುನ್ನೆಲೆಗೆ ತಂದಿದೆ.

ಲಾಕ್‌ಡೌನ್ ಮುಗಿದ ಬಳಿಕ, ಅಂದರೆ ಜೂನ್ 7 ರ ಬಳಿಕ ಶಾಸಕಾಂಗ ಪಕ್ಷದ ಸಭೆ ನಡೆಯುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

'ಬಿಜೆಪಿ ರಾಷ್ಟ್ರೀಯ ಮುಖಂಡರೊಬ್ಬರ ಜತೆಗೆ ನಂಟು ಹೊಂದಿರುವ ಕೆಲವು ಸಚಿವರು ಸದ್ಯವೇ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಿದ್ದಾರೆ. ಈ ಮೂಲಕ ನಿಮ್ಮ ಎಲ್ಲ ನಿರ್ಧಾರಗಳು ಸರಿಯಿಲ್ಲ, ಅದಕ್ಕೆ ಪಕ್ಷದ ಬೆಂಬಲ ಇಲ್ಲ ಎಂಬ ಸ್ಪಷ್ಟ ಸಂದೇಶವನ್ನು ಯಡಿಯೂರಪ್ಪ ಅವರಿಗೆ ನೀಡಲು ವರಿಷ್ಠರು ಬಯಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಶಾಸಕರ ಆಕ್ಷೇಪ: ಸಚಿವ ಸಂಪುಟದ ನಿರ್ಧಾರವನ್ನು ಪ್ರಶ್ನಿಸಿ ಕೆಲವು ಶಾಸಕರು ಮುಖ್ಯಮಂತ್ರಿಯವರಿಗೆ ಈಗಾಗಲೇ ಪತ್ರ ಬರೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಈ ಹಿಂದೆ ಜೆಡಿಎಸ್– ಕಾಂಗ್ರೆಸ್ ಮೈತ್ರಿ ಸರ್ಕಾರದ ಅವಧಿಯಲ್ಲಿ ಜಿಂದಾಲ್‌ಗೆ ಭೂಮಿ ಪರಭಾರೆ ಮಾಡುವುದನ್ನು ವಿರೋಧಿಸಿ ಹೋರಾಟ ನಡೆಸಲಾಗಿತ್ತು. ಈಗ ಹೇಗೆ ಅದಕ್ಕೆ ಒಪ್ಪಿಗೆ ನೀಡಿದ್ದೀರಿ' ಎಂದು ಪತ್ರದಲ್ಲಿ ಪ್ರಶ್ನಿಸಿದ್ದರು.

'ಶಾಸಕಾಂಗ ಪಕ್ಷದ ಸಭೆ ಕರೆದು ನಮಗೆ ಪರಭಾರೆ ಮಾಡಲು ಕಾರಣಗಳನ್ನು ಮನವರಿಕೆ ಮಾಡಿಕೊಡಬೇಕೆಂದು ಪಟ್ಟು ಹಿಡಿಯುತ್ತೇವೆ. ಇದು ನಮ್ಮ ಮುಖ್ಯ ಅಜೆಂಡಾ' ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಬಿಜೆಪಿ ಶಾಸಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

9ನೇ ಪುಟ ನೋಡಿ

ದೆಹಲಿಯತ್ತ ಬಿಜೆಪಿ ಶಾಸಕರು?

ನವದೆಹಲಿ: ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯ ಮಾತುಗಳು ಶುರುವಾದ ಬೆನ್ನಲ್ಲೇ, ರಾಷ್ಟ್ರ ರಾಜಧಾನಿಯಲ್ಲಿ ಚಟುವಟಿಕೆಗಳು ಬಿರುಸುಗೊಂಡಿವೆ.

ಸೋಮವಾರ ಸಂಜೆ ದೆಹಲಿಗೆ ಬಂದಿರುವ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್, ಶಾಸಕ ಅರವಿಂದ ಬೆಲ್ಲದ ಮತ್ತಿತರರು ಕರ್ನಾಟಕ ಭವನಕ್ಕೆ ಬಾರದೇ ಹೋಟೆಲ್‌ನಲ್ಲಿ ತಂಗಿದ್ದಾರೆ. ವೈಯಕ್ತಿಕ ಕೆಲಸಕ್ಕೆ ಬಂದಿರುವುದಾಗಿ ಅವರು ಹೇಳಿಕೊಂಡಿದ್ದಾರೆ.

ಆದರೆ, ಪಕ್ಷದ ವರಿಷ್ಠರನ್ನು ಭೇಟಿ ಮಾಡಿರುವ ಅವರು, ರಾಜ್ಯದ ರಾಜಕೀಯ ಕುರಿತು ಮಹತ್ವದ ಚರ್ಚೆ ನಡೆಸಿದ್ದಾರೆ ಎಂದು ಬಿಜೆಪಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ. ಮಂಗಳವಾರ ಸಂಜೆಯ ವೇಳೆಗೆ 20 ಜನ ಶಾಸಕರು ದೆಹಲಿಗೆ ದೌಡಾಯಿಸಿದ್ದು, ಇನ್ನಷ್ಟು ಶಾಸಕರು ಬುಧವಾರ ಬರಲಿದ್ದಾರೆ ಎಂದು ತಿಳಿದುಬಂದಿದೆ.

ಖಾಸಗಿ ಲಸಿಕೆ ಕೇಂದ್ರಗಳಲ್ಲಿ ₹ 2 ಸಾವಿರದವರೆಗೂ ಮಾರಾಟ

ಜನಸಾಮಾನ್ಯರಿಗೆ ದುಬಾರಿಯಾದ ಲಸಿಕೆ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಕೋವಿಡ್ ಮರಣ ಪ್ರಮಾಣ ಹೆಚ್ಚಿದ ಬೆನ್ನಲ್ಲೇ ಕೋವಿಡ್ ಲಸಿಕೆಗೆ ಬೇಡಿಕೆ ಮತ್ತಷ್ಟು ಹೆಚ್ಚಿದೆ. ಇದನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಕೆಲವು ಖಾಸಗಿ ಆರೋಗ್ಯ ಕೇಂದ್ರಗಳು ಪ್ರತಿ ಡೋಸ್ ಲಸಿಕೆಯನ್ನು ₹ 2 ಸಾವಿರದವರೆಗೂ ಮಾರಾಟ ಮಾಡಲಾರಂಭಿಸಿವೆ.

ಮೇ 1ರಿಂದ 18ರಿಂದ 44 ವರ್ಷದವರಿಗೆ ಲಸಿಕೆ ವಿತರಣೆ ಆರಂಭಿಸಲಾಗಿತ್ತು. ಆದರೆ, ತಯಾರಿಕಾ ಕಂಪನಿಗಳು ಬೇಡಿಕೆಯಷ್ಟು ಲಸಿಕೆ ಪೂರೈಸದ ಕಾರಣ ಸರ್ಕಾರಿ ವ್ಯವಸ್ಥೆಯಡಿ 18ರಿಂದ 44 ವರ್ಷದವರಿಗೆ ಲಸಿಕೆ ವಿತರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತ ಮಾಡಲಾಗಿದೆ. 45 ವರ್ಷ ಮೇಲ್ಪಟ್ಟವರಿಗೆ ಎರಡನೇ ಡೋಸ್‌ಗೆ ಆದ್ಯತೆ ನೀಡಲು ಸರ್ಕಾರ ಸೂಚಿಸಿದೆ. ಹಾಗಾಗಿ 18 ವರ್ಷ ಮೇಲ್ಪಟ್ಟವರು ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ಪಡೆಯಲು ಮುಗಿಬೀಳುತ್ತಿದ್ದು, ಬೇಡಿಕೆ ಹೆಚ್ಚಾಗಿದೆ. ಈ ವಯೋಮಾನದವರು ಸಾವಿರಾರು ರೂಪಾಯಿ ಪಾವತಿಸಿ ಲಸಿಕೆ ಪಡೆದುಕೊಳ್ಳಲಾರಂಭಿಸಿದ್ದಾರೆ.

ಸದ್ಯ 'ಕೋವಿಶೀಲ್ಡ್' ಹಾಗೂ 'ಕೋವ್ಯಾಕ್ಸಿನ್' ಲಸಿಕೆ ನೀಡಲಾಗುತ್ತಿದೆ. ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಸಂಸ್ಥೆಯು ಪ್ರತಿ ಡೋಸ್ 'ಕೋವಿಶೀಲ್ಡ್' ಲಸಿಕೆಗೆ ಸರ್ಕಾರಕ್ಕೆ ₹ 300 ಹಾಗೂ ಖಾಸಗಿ ಆರೋಗ್ಯ ಕೇಂದ್ರಗಳಿಗೆ ₹ 600 ನಿಗದಿ ಮಾಡಿದೆ. ಅದೇ ರೀತಿ, ಹೈದರಾಬಾದ್‌ನ ಭಾರತ್ ಬಯೋಟೆಕ್ ಸಂಸ್ಥೆಯು 'ಕೋವ್ಯಾಕ್ಸಿನ್' ಲಸಿಕೆಯನ್ನು ಸರ್ಕಾರಗಳಿಗೆ ₹ 400 ಹಾಗೂ ಖಾಸಗಿ ಆರೋಗ್ಯ ಕೇಂದ್ರಗಳಿಗೆ ಗರಿಷ್ಠ ₹1,200 (ಪ್ರತಿ ಡೋಸ್‌ಗೆ) ಗೊತ್ತುಪಡಿಸಿದೆ.

ನಗರದ ಬಹುತೇಕ ಖಾಸಗಿ ಆಸ್ಪತ್ರೆಗಳು ಕಂಪನಿಯಿಂದ ಖರೀದಿಸಿ ನೀಡುವ 'ಕೋವಿಶೀಲ್ಡ್' ಲಸಿಕೆಗೆ ₹ 850 ಹಾಗೂ 'ಕೋವ್ಯಾಕ್ಸಿನ್' ಲಸಿಕೆಗೆ ₹ 1,250 ಪಡೆಯುತ್ತಿವೆ. ನಿರ್ವಹಣಾ ಶುಲ್ಕದ ಹೆಸರಿನಲ್ಲಿ ಕೆಲವೆಡೆ ಹೆಚ್ಚುವರಿಯಾಗಿ ₹ 200 ನಿಗದಿಪಡಿಸಲಾಗಿದೆ.

ಖಾಸಗಿ ಲಸಿಕಾ ಕೇಂದ್ರಗಳಿಗೆ ಕೇಂದ್ರ ಸರ್ಕಾರವು ಪೂರೈಕೆ ಮಾಡಿದ ಲಸಿಕೆಗೆ (ಒಂದು ಡೋಸ್) ಗರಿಷ್ಠ ₹ 250 ಮಾತ್ರ ಪಡೆಯಬೇಕು.

3ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಲಸಿಕೆ ಪಡೆಯಲು ಫಲಾನುಭವಿಗಳು ಸರದಿಯಲ್ಲಿ ನಿಂತಿರುವುದು – ಪ್ರಜಾವಾಣಿ ಚಿತ್ರ

ಸರ್ಕಾರವು ಖಾಸಗಿ ಆಸ್ಪತ್ರೆಗಳಿಗೆ ಪೂರೈಸಿದ ಲಸಿಕೆಗೆ ಗರಿಷ್ಠ ₹ 250 ಮಾತ್ರ ಪಡೆಯಬೇಕು. ಕಂಪನಿಯಿಂದ ನೇರವಾಗಿ ಖರೀದಿಸಿದರೂ ದರವು ಪಾರದರ್ಶಕವಾಗಿರಬೇಕು
ಡಾ.ಜಿ. ಶ್ರೀನಿವಾಸ್, ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ

ಖಾಸಗಿಯಾಗಿ ಖರೀದಿಸಿದಾಗ ಪೂರೈಕೆದಾರರು ಒಬ್ಬೊಬ್ಬರಿಗೆ ಒಂದೊಂದು ದರಕ್ಕೆ ಲಸಿಕೆ ನೀಡುತ್ತಾರೆ. ಅಗತ್ಯ ಪ್ರಮಾಣದ ಲಸಿಕೆ ದಾಸ್ತಾನು ಇಲ್ಲ
ಡಾ. ಪ್ರಸನ್ನ ಎಚ್.ಎಂ., ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ

ಬಿಜೆಪಿ ಶಾಸಕ ಸತೀಶ್ ರೆಡ್ಡಿ ಆಪ್ತ ಸೆರೆ

ಹಾಸಿಗೆ ಬ್ಲಾಕಿಂಗ್ ಪ್ರಕರಣ: ಸಿಸಿಬಿ ಪೊಲೀಸರಿಂದ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರ ಹೆಸರಿನಲ್ಲಿ ಹಾಸಿಗೆಗಳನ್ನು ಬ್ಲಾಕ್ ಮಾಡಿಸಿ ಮಾರುತ್ತಿದ್ದ ಪ್ರಕರಣ ಸಂಬಂಧ ಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಶಾಸಕ ಸತೀಶ್ ರೆಡ್ಡಿ ಆಪ್ತ ಎನ್ನಲಾದ ಬಾಬು (34) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಬಾಬು

'ರೂಪೇನ ಅಗ್ರಹಾರದ ಬಾಬು ಈ ಪ್ರಕರಣದ ಪ್ರಮುಖ ಆರೋಪಿ. ಬಿಜೆಪಿ ಕಾರ್ಯಕರ್ತನೂ ಹೌದು. ಖಾಸಗಿ ಆಸ್ಪತ್ರೆಗಳ ಅಧಿಕಾರಿಗಳು, ವಾರ್‌ರೂಮ್ ಸಿಬ್ಬಂದಿ ಹಾಗೂ ಈಗಾಗಲೇ ಬಂಧಿಸಿರುವ ಆರೋಪಿಗಳ ಜೊತೆ ಒಡನಾಟ ಇಟ್ಟುಕೊಂಡಿದ್ದ. ಈ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಿ ಬಂಧಿಸಲಾಗಿದೆ' ಎಂದು ಸಿಸಿಬಿ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಂಗಳವಾರ ತಿಳಿಸಿದರು.

'ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಶಾಸಕರ ಪರವಾಗಿ ಬಾಬು ಕೆಲಸ ಮಾಡುತ್ತಿದ್ದ. ಬಿಯು ಸಂಖ್ಯೆ ಪಡೆಯುವ ಸೋಂಕಿತರಿಗೆ ಸರ್ಕಾರದಿಂದ ಚಿಕಿತ್ಸೆ ಕೊಡಿಸಲೆಂದು ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಮೀಸಲಿರಿಸಲಾಗಿತ್ತು. ಅವುಗಳನ್ನು ಬ್ಲಾಕ್ ಮಾಡಿಸಿ ಸಹಚರರ ಮೂಲಕ ಅನ್ಯರಿಗೆ ಮಾರಾಟ ಮಾಡಿಸುತ್ತಿದ್ದ' ಎಂದೂ ವಿವರಿಸಿದರು.

'ಈ ಕೃತ್ಯದಿಂದ ಬಾಬು ಲಕ್ಷಾಂತರ ರೂಪಾಯಿ ಗಳಿಸಿದ್ದಾನೆ. ಅದಕ್ಕೆ ಪೂರಕ ದಾಖಲೆ ಸಂಗ್ರಹಿಸಲಾಗಿದೆ. ಆರೋಪಿಯನ್ನು ಕೋರ್ಟ್‌ಗೆ ಹಾಜರುಪಡಿಸಿ ಕಸ್ಟಡಿಗೆ ಪಡೆಯಲಾಗಿದೆ' ಎಂದೂ ಹೇಳಿದರು.

9ನೇ ಪುಟ ನೋಡಿ

ಸತೀಶ್ ರೆಡ್ಡಿ ವಿಚಾರಣೆ ಸಾಧ್ಯತೆ

ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಎಂ.ಸತೀಶ್ ರೆಡ್ಡಿ, ಎಲ್.ಎ.ರವಿಸುಬ್ರಹ್ಮಣ್ಯ ಹಾಗೂ ಉದಯ್ ಗರುಡಾಚಾರ್ ಅವರು ದಕ್ಷಿಣ ವಲಯದ ವಾರ್‌ರೂಮ್‌ಗೆ ಭೇಟಿ ನೀಡಿ ಹಾಸಿಗೆ ಬ್ಲಾಕಿಂಗ್ ದಂಧೆ ಬಗ್ಗೆ ಮಾತನಾಡಿದ್ದಲ್ಲದೇ, 'ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದ್ದರು.

ಇದೀಗ ಸತೀಶ್ ರೆಡ್ಡಿ ಅವರ ಆಪ್ತನನ್ನೇ ಬಂಧಿಸಲಾಗಿದೆ. ಜೊತೆಗೆ ಆರೋಪಿ ಬಾಬು, ಸತೀಶ್ ರೆಡ್ಡಿ ಹೆಸರು ಹೇಳಿಯೇ ಹಲವರನ್ನು ಸಂಪರ್ಕಿಸಿದ್ದ ಮಾಹಿತಿ ಸಿಸಿಬಿಗೆ ಸಿಕ್ಕಿದೆ. ಬಾಬು ಜೊತೆಗಿನ ಸಂಬಂಧದ ಬಗ್ಗೆ ಹೇಳಿಕೆ ಪಡೆಯಲು ಸತೀಶ್ ರೆಡ್ಡಿ ಅವರನ್ನು ಸಿಸಿಬಿ ಪೊಲೀಸರು ವಿಚಾರಣೆ ನಡೆಸುವ ಸಾಧ್ಯತೆ ಇದೆ.

ವಿಚಾರಣೆ ಎದುರಿಸಿದ್ದ ದಿನವೇ 'ಕೋವಿಡ್'

ಪ್ರಕರಣ ಸಂಬಂಧ ಬಂಧಿತಳಾಗಿದ್ದ ನೇತ್ರಾವತಿ, 'ಸೋಂಕಿತ ನೀಡಿದ್ದ ಹಣವನ್ನು ಬಾಬುಗೆ ಕೊಟ್ಟಿದ್ದೆ' ಎಂದಿದ್ದಳು. ಬಳಿಕ ಸಿಸಿಬಿ ಪೊಲೀಸರು ಮೇ 7ರಂದು ಬಾಬುನನ್ನು ವಿಚಾರಣೆಗೆ ಒಳಪಡಿಸಿದ್ದರು. ಆ ವಿಚಾರಣೆ ನಂತರ ಮನೆಗೆ ಹೋಗಿದ್ದ ಬಾಬು, 'ನನಗೆ ಸೋಂಕು ತಗುಲಿದೆ' ಎಂದು ಆಸ್ಪತ್ರೆಗೆ ಸೇರಿದ್ದ. ಬಾಬು ಗುಣಮುಖವಾಗಿದ್ದು, ಇದು ಗೊತ್ತಾಗುತ್ತಿದ್ದಂತೆ ಸಿಸಿಬಿ ಪೊಲೀಸರು ಆತನನ್ನು ಬಂಧಿಸಿದ್ದಾರೆ. ಈ ಮೂಲಕ ಬಂಧಿತರ ಸಂಖ್ಯೆ 11 ಕ್ಕೆ ಏರಿದೆ.

ರೈತರಿಂದ ಇಂದು 'ಕರಾಳ ದಿನ'

ನವದೆಹಲಿ (ಪಿಟಿಐ): ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆಗೆ ಆರು ತಿಂಗಳು ಸಂದಿದ್ದು, ಇದರ ಅಂಗವಾಗಿ ಬುಧವಾರ (ಮೇ 26) 'ಕರಾಳ ದಿನ' ಆಚರಿಸಲಾಗುತ್ತಿದೆ.

ಆರು ತಿಂಗಳು ಕಳೆದರೂ ಸರ್ಕಾರದಿಂದ ಸೂಕ್ತ ಸ್ಪಂದನೆ ಸಿಗದ ಕಾರಣ ಸರ್ಕಾರದ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದೆ. ದೆಹಲಿಯ ಟಿಕ್ರಿ, ಸಿಂಘು, ಗಾಜಿಪುರ ಗಡಿಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ರೈತರು ಸೇರಿದ್ದಾರೆ. ರೈತರ ಈ ಪ್ರತಿಭಟನೆಗೆ 10ಕ್ಕೂ ಹೆಚ್ಚು ರಾಜಕೀಯ ಪಕ್ಷಗಳು ಬೆಂಬಲ ಸೂಚಿಸಿವೆ.

ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳು ಉದ್ಯಮಿಗಳಿಗೆ ನೆರವು ನೀಡುವಂತಿವೆ ಎಂದು ಆರೋಪಿಸಿರುವ ರೈತರು ಕಾಯ್ದೆಗಳನ್ನು ಹಿಂಪಡೆಯಲು ಆಗ್ರಹಿಸಿದ್ದಾರೆ. ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಖಾತರಿ ಪಡಿಸುವುದು ರೈತರ ಬೇಡಿಕೆಗಳಲ್ಲಿ ಪ್ರಮುಖವಾಗಿದೆ.

ಉತ್ತಮ ಮುಂಗಾರು ನಿರೀಕ್ಷೆ • 77 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಗೆ ಸಿದ್ಧತೆ • 103 ಲಕ್ಷ ಟನ್ ಉತ್ಪಾದನೆ ಗುರಿ

ಮುಂಗಾರು ಪೂರ್ವ ಮಳೆ: ಕೃಷಿಗೆ ಸಜ್ಜಾದ ಇಳೆ

• ಎಸ್‌. ರವಿಪ್ರಕಾಶ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಈ ಬಾರಿ ಮುಂಗಾರು ಪೂರ್ವ ಮಳೆ ವಾಡಿಕೆಗಿಂತ ಅಧಿಕವಾಗಿದ್ದು, ಜೂನ್ ಮೊದಲ ವಾರವೇ ಕಾಲಿಡುವ ಮುಂಗಾರಿನಲ್ಲೂ ಉತ್ತಮ ಮಳೆ ಸುರಿಯುವ ಲಕ್ಷಣಗಳಿವೆ. ಇದರಿಂದಾಗಿ ಕೋವಿಡ್ ಮಧ್ಯೆಯೂ ರಾಜ್ಯದಲ್ಲಿ ಕೃಷಿ ಚಟುವಟಿಕೆ ಗರಿಗೆದರಿದೆ.

ಈ ವರ್ಷ ಸುಮಾರು 103 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆಗೆ ಗುರಿ ಹಾಕಿಕೊಂಡಿದ್ದು, ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಿ, ಕೃಷಿ ಚಟುವಟಿಕೆಗಳನ್ನು ನಡೆಸಲು ರೈತರಿಗೆ ಉತ್ತೇಜನ ಕೃಷಿ ಇಲಾಖೆ ಸಿದ್ಧತೆ ನಡೆಸಿದೆ. 77 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಗೆ ಅನುಗುಣವಾಗಿ ಬಿತ್ತನೆ ಬೀಜವನ್ನು ದಾಸ್ತಾನು ಇಟ್ಟುಕೊಳ್ಳಲಾಗಿದೆ. ರಸಗೊಬ್ಬರವೂ ಅಗತ್ಯಕ್ಕೆ ತಕ್ಕಷ್ಟು ದಾಸ್ತಾನು ಇಟ್ಟುಕೊಳ್ಳಲಾಗಿದೆ.

ಹಿಂದಿನ ವರ್ಷದಂತೆ ಈ ವರ್ಷವೂ 'ಲಾ ನಿನಾ' ಹವಾಮಾನ ಪರಿಣಾಮ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗಿದೆ. ಇದರ ಪರಿಣಾಮ ರಾಜ್ಯದ ದಕ್ಷಿಣ ಒಳನಾಡಿನ ಚಾಮರಾಜನಗರ, ಮೈಸೂರು, ಮಂಡ್ಯ, ದಾವಣಗೆರೆ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬಿತ್ತನೆ ಕಾರ್ಯ ಆರಂಭವಾಗಿದೆ.

ಹುಬ್ಬಳ್ಳಿ ಹೊರವಲಯದ ಹೆಬ್ಬಳ್ಳಿ ರಸ್ತೆ ಸಮೀಪದ ಹೊಲವೊಂದರಲ್ಲಿ ಮಂಗಳವಾರ ಉಳುಮೆಯಲ್ಲಿ ತೊಡಗಿದ್ದ ರೈತರು. ಪ್ರಜಾವಾಣಿ ಚಿತ್ರ

ಭಾರತೀಯ ಹವಾಮಾನ ಇಲಾಖೆಯ ಮಾಹಿತಿಯ ಪ್ರಕಾರ, ಮುಂಗಾರು ಪೂರ್ವ ಅವಧಿಯಲ್ಲಿ 10 ಜಿಲ್ಲೆಗಳಲ್ಲಿ ಅತ್ಯಧಿಕ, 13 ಜಿಲ್ಲೆಗಳಲ್ಲಿ ಅಧಿಕ, 4 ಜಿಲ್ಲೆಗಳಲ್ಲಿ ಸಾಮಾನ್ಯ ಮತ್ತು 3 ಜಿಲ್ಲೆಗಳಲ್ಲಿ ಕೊರತೆ ಕಂಡು ಬಂದಿದೆ. ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿಯ ಪ್ರಕಾರ, ಮಾರ್ಚ್‌ನಲ್ಲಿ 4 ಮಿ.ಮೀ, ಏಪ್ರಿಲ್‌ನಲ್ಲಿ 49 ಮಿ.ಮೀ ಮತ್ತು ಮೇ ತಿಂಗಳಿನಲ್ಲಿ ಈವರೆಗೆ 82 ಮಿ.ಮೀ ಮಳೆಯಾಗಿದೆ. ಒಟ್ಟು 134 ಮಿ,ಮೀ ಮಳೆಯಾಗಿದ್ದು, ವಾಡಿಕೆಗಿಂತ ಶೇ 63 ರಷ್ಟು ಅಧಿಕ ಮಳೆಯಾಗಿದೆ.

77 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ: ರಾಜ್ಯದಲ್ಲಿ ಮುಂಗಾರು ಪೂರ್ವ ಉತ್ತಮ ಮಳೆಯಾಗಿರುವುದರಿಂದ 77 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲು ಗುರಿ ಹಾಕಿಕೊಳ್ಳಲಾಗಿದೆ. ಈಗಾಗಲೇ ಚಾಮರಾಜನಗರ, ಮೈಸೂರು, ಮಂಡ್ಯ, ದಾವಣಗೆರೆ, ತುಮಕೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ 1.44 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆ ಆಗಿದೆ ಎಂದು ಕೃಷಿ ಇಲಾಖೆ ನಿರ್ದೇಶಕ ಬಿ.ವೈ.ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಿತ್ತನೆ ಬೀಜ ಮತ್ತು ರಸಗೊಬ್ಬರಕ್ಕೆ ಕೊರತೆ ಇಲ್ಲ. ದಾಸ್ತಾನು ಇದೆ. ಎಲ್ಲ ರೈತ ಸಂಪರ್ಕ ಕೇಂದ್ರಗಳ ಮೂಲಕ ಸಹಾಯಧನದಲ್ಲಿ ಬಿತ್ತನೆ ಬೀಜ ವಿತರಣೆ ಕಾರ್ಯ ಆರಂಭಿಸಲಾಗಿದೆ. ಕೋವಿಡ್ ಮಾರ್ಗಸೂಚಿ ಕಡ್ಡಾಯವಾಗಿ ಪಾಲಿಸುವ ಮೂಲಕ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಬಹುದು ಎಂದು ಹೇಳಿದರು.

ರೈತರಿಗೆ ಯಾವುದೇ ಸಂದರ್ಭದಲ್ಲಿ ತೊಂದರೆ ಆದರೂ ಅವರ ನೆರವಿಗಾಗಿ 'ಅಗ್ರಿವಾರ್ ರೂಂ' ಇದೆ. ಬೆಳಿಗ್ಗೆ 8 ರಿಂದ ರಾತ್ರಿ 8ರವರೆಗೆ ಕಾರ್ಯನಿರ್ವಹಿಸುತ್ತದೆ. ಈ ಸಂದರ್ಭದಲ್ಲಿ ಅವರು ಅಗತ್ಯ ಮಾಹಿತಿಗಳನ್ನು ಪಡೆದುಕೊಳ್ಳಬಹುದು ಎಂದೂ ಶ್ರೀನಿವಾಸ್ ತಿಳಿಸಿದರು.

ಈ ವರ್ಷದ ಕೃಷಿ ನೋಟ

- **77** ಲಕ್ಷ ಹೆಕ್ಟೇರ್ ಬಿತ್ತನೆ ಪ್ರದೇಶದ ಗುರಿ
- **1.44** ಲಕ್ಷ ಹೆಕ್ಟೇರ್ ಈವರೆಗೆ ಬಿತ್ತನೆ ಆದ ವಿಸ್ತೀರ್ಣ

ಜೂನ್‌ನಲ್ಲಿ ಉತ್ತಮ ಮಳೆ

'ಈ ಮುಂಗಾರಿನಲ್ಲಿ ಜೂನ್ ತಿಂಗಳಿನಲ್ಲಿ ಉತ್ತಮ ಮಳೆಯಾಗಲಿದ್ದು, ಜುಲೈ ಮತ್ತು ಆಗಸ್ಟ್‌ನಲ್ಲಿ ಕಡಿಮೆ ಆಗಲಿದೆ. ಮತ್ತೆ ಸೆಪ್ಟಂಬರ್‌ನಲ್ಲಿ ಉತ್ತಮ ಮಳೆಯಾಗಲಿದೆ ಎಂದು ವರದಿಯೊಂದು ಹೇಳಿದೆ. ಈ ರೀತಿ ಆದರೆ ಕಷ್ಟ. ಈ ವಾರದ ಕೊನೆಯಲ್ಲಿ ಮತ್ತೊಂದು ವರದಿ ಬರಲಿದ್ದು, ಅದರಲ್ಲಿ ಮುಂಗಾರಿನ ಸ್ಪಷ್ಟ ಚಿತ್ರಣ ಸಿಗಲಿದೆ' ಎಂದು ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ನಿವೃತ್ತ ನಿರ್ದೇಶಕ ಡಾ.ಶ್ರೀನಿವಾಸರೆಡ್ಡಿ ತಿಳಿಸಿದರು.

ಬೇಡಿಕೆ– ಪೂರೈಕೆ

ಕೃಷಿ ಸಾಮಗ್ರಿ	ಬೇಡಿಕೆ	ಪೂರೈಕೆ	ದಾಸ್ತಾನು
ಬಿತ್ತನೆ ಬೀಜ	6 ಲಕ್ಷ ಕ್ವಿಂಟಲ್	6,549 ಕ್ವಿಂಟಲ್	5.93 ಲಕ್ಷ ಕ್ವಿಂಟಲ್
ರಸಗೊಬ್ಬರ	26.47 ಲಕ್ಷ ಟನ್	4.66 ಲಕ್ಷ ಟನ್	12.16 ಲಕ್ಷ ಟನ್

ಸುದ್ದಿ 2 ನಿಮಿಷ

'ಪಿಎಸ್‌ಐ ಅರ್ಜುನ್ ಅವರನ್ನು ಜೈಲಿಗೆ ಕಳುಹಿಸಿ'

ಬೆಂಗಳೂರು: 'ವಿಚಾರಣೆ ನೆಪದಲ್ಲಿ ದಲಿತ ಯುವಕನನ್ನು ಠಾಣೆಗೆ ಕರೆದೊಯ್ದು ಮೂತ್ರ ನೆಕ್ಕಿಸಿರುವ ಚಿಕ್ಕಮಗಳೂರು ಜಿಲ್ಲೆ ಗೋಣಿಬೀಡು ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಅರ್ಜುನ್ ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಬೇಕು. ಅವರನ್ನು ಸೇವೆಯಿಂದಲೇ ವಜಾಗೊಳಿಸಬೇಕು' ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಒತ್ತಾಯಿಸಿದ್ದಾರೆ.

ಈ ಸಂಬಂಧ ಹನುಮಂತಯ್ಯ, ರಾಜ್ಯಸಭಾ ಸದಸ್ಯ ಸಯ್ಯದ್ ನಾಸೀರ್ ಹುಸೇನ್, ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ಹಾಗೂ ವಿಧಾನಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕರು ಹಾಗೂ ಪೊಲೀಸ್ ಮಹಾನಿರೀಕ್ಷಕರಿಗೆ ಮಂಗಳವಾರ ಮನವಿ ನೀಡಿದ್ದಾರೆ.

'ಕಿರುಗುಂದ ಗ್ರಾಮದ ಕೆ.ಎಲ್. ಪುನೀತ್ ಜೊತೆ ಅರ್ಜುನ್ ಅಮಾನುಷವಾಗಿ ನಡೆದುಕೊಂಡಿದ್ದಾರೆ. ಘಟನೆಯ ಬಗ್ಗೆ ಮಾಹಿತಿ ಸಿಕ್ಕ ಮೇಲೂ ಮೌನವಹಿಸಿದ್ದ ಚಿಕ್ಕಮಗಳೂರು ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಅಕ್ಷಯ್ ಎಂ.ಹಾಕೆ ಅವರನ್ನು ಹೊಣೆಗಾರರನ್ನಾಗಿಸಿ ಅಮಾನತುಗೊಳಿಸಬೇಕು. ಘಟನೆಯ ವೇಳೆ ಕರ್ತವ್ಯದಲ್ಲಿದ್ದ ಕಾನ್‌ಸ್ಟೆಬಲ್ ಮೇಲೂ ಎಫ್‌ಐಆರ್ ದಾಖಲಿಸಬೇಕು' ಎಂದು ಆಗ್ರಹಿಸಿದ್ದಾರೆ.

ಬೀದಿ ಬದಿ ವ್ಯಾಪಾರಿಗಳ ಪ್ರತಿಭಟನೆ

ಬೆಂಗಳೂರು: ಬೀದಿ ಬದಿ ವ್ಯಾಪಾರದ ಅವಧಿ ವಿಸ್ತರಣೆ, ಪರಿಹಾರ ಮೊತ್ತ ಹೆಚ್ಚಳ ಹಾಗೂ ಪೊಲೀಸ್ ದೌರ್ಜನ್ಯ ತಡೆಯಲು ಒತ್ತಾಯಿಸಿ ಬೀದಿ ಬದಿ ವ್ಯಾಪಾರಿಗಳು ಕೆಲಸದ ಸ್ಥಳದಲ್ಲೇ ಮಂಗಳವಾರ ಪ್ರತಿಭಟನೆ ನಡೆಸಿದರು.

'ಲಾಕ್‌ಡೌನ್ ಬಳಿಕ ಜೀವನ ನಿರ್ವಹಣೆ ಮಾಡುವುದು ಬೀದಿ ಬದಿ ವ್ಯಾಪಾರಿಗಳಿಗೆ ಕಷ್ಟವಾಗಿದೆ. ಕೋವಿಡ್ ನಿಯಂತ್ರಿಸುವಲ್ಲಿ ವಿಫಲವಾದ ಸರ್ಕಾರ, ಜನರ ಮೇಲೆ ಲಾಕ್‌ಡೌನ್ ಹೇರಿಕೆ ಮಾಡಿದೆ. ರಾಜಕಾರಣಿಗಳು, ಅಧಿಕಾರಿಗಳಿಗೆ ಯಾವುದೇ ತೊಂದರೆ ಇಲ್ಲ. ಅವರ ವೇತನಕ್ಕೆ ಕುತ್ತು ತಂದುಕೊಂಡಿಲ್ಲ. ಪ್ರಜೆಗಳಿಗೆ ಶಿಕ್ಷೆ ನೀಡಲಾಗಿದೆ' ಎಂದು ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದರು.

'ಕಾರ್ಮಿಕ ಕಾಯ್ದೆ ಪ್ರಕಾರ ಕನಿಷ್ಠ ವೇತನ ತಿಂಗಳಿಗೆ ₹12,057 ಇದೆ. ಈ ಸಂದರ್ಭದಲ್ಲಿ ಎರಡು ತಿಂಗಳಿಗೆ ₹2 ಸಾವಿರ ಪರಿಹಾರ ಘೋಷಣೆ ಮಾಡಿರುವುದು ನ್ಯಾಯವೇ' ಎಂದು ಪ್ರಶ್ನಿಸಿದರು. ಕನಿಷ್ಠ ₹15 ಸಾವಿರ ಪರಿಹಾರ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

'ಹಣ್ಣು ತರಕಾರಿ ವ್ಯಾಪಾರದ ಅವಧಿಯನ್ನು ಕನಿಷ್ಠ ಮಧ್ಯಾಹ್ನ 2 ಗಂಟೆ ತನಕ ವಿಸ್ತರಿಸಬೇಕು. ಪ್ರಧಾನ ಮಂತ್ರಿ ಸ್ವಾನಿಧಿ ಯೋಜನೆಯಡಿ ನೀಡಿರುವ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು. ಮನೆ ಮಾಲೀಕರು ತಿಂಗಳ ಬಾಡಿಗೆಗೆ ಒತ್ತಾಯ ಮಾಡದಂತೆ ಆದೇಶ ಹೊರಡಿಸಬೇಕು' ಎಂದು ಒತ್ತಾಯಿಸಿದರು.

ಸ್ವಾಭಿಮಾನಿ ಪುಸ್ತಕ ಬಹುಮಾನ ಪ್ರಕಟ

ಬೆಂಗಳೂರು: ಸ್ವಾಭಿಮಾನಿ ಕರ್ನಾಟಕ ವೇದಿಕೆ ನೀಡುವ 'ಸ್ವಾಭಿಮಾನಿ ಪುಸ್ತಕ ಬಹುಮಾನ' ಪ್ರಕಟವಾಗಿದ್ದು, ಡಾ. ಮಿರ್ಜಾ ಬಷೀರ್ ಅವರ 'ಹಾರುವ ಹಕ್ಕಿ ಮತ್ತು ಇರುವೆ' ಕಥಾ ಸಂಕಲನ ಸೇರಿದಂತೆ ಐದು ಕೃತಿಗಳು ಆಯ್ಕೆಯಾಗಿವೆ.

ಮಂಜುಳಾ ಹಿರೇಮಠ ಅವರ 'ಗಾಯಗೊಂಡವರಿಗೆ' ಕವನ ಸಂಕಲನ, ಸ್ಮಿತಾ ಅಮೃತರಾಜ್ ಅವರ 'ಒಂದು ವಿಳಾಸದ ಹಿಂದೆ' ಪ್ರಬಂಧ ಸಂಕಲನ, ಜಾಣಗೆರೆ ವೆಂಕಟರಾಮಯ್ಯ ಅವರ 'ಜಲ ಯುದ್ಧ' ಕಾದಂಬರಿ, ಕಾ.ತ. ಚಿಕ್ಕಣ್ಣ ಅವರ 'ಕಣ್ಣಂಚಿನ ನೆರಳು' ಕೃತಿಯು ಬಹುಮಾನಕ್ಕೆ ಭಾಜನವಾಗಿದೆ.

ವೇದಿಕೆಯು 20ನೇ ವಾರ್ಷಿಕೋತ್ಸದ ಪ್ರಯುಕ್ತ ಏರ್ಪಡಿಸಿದ್ದ ಸ್ಪರ್ಧೆಗೆ 2020ರಲ್ಲಿ ಪ್ರಕಟವಾದ 150ಕ್ಕೂ ಅಧಿಕ ಕೃತಿಗಳು ಬಂದಿದ್ದವು. ಅದರಲ್ಲಿ ಐದು ಪುಸ್ತಕಗಳನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ತಲಾ ₹ 5 ಸಾವಿರ ನಗದು ಬಹುಮಾನ ಒಳಗೊಂಡಿದೆ.

ವಿಮರ್ಶಕ ಎಸ್.ಆರ್. ವಿಜಯಶಂಕರ, ಲೇಖಕ ದ್ವಾರನಕುಂಟೆ ಪಾತಣ್ಣ ಹಾಗೂ ಪತ್ರಕರ್ತ ರಘುನಾಥ ಚ.ಹ. ತೀರ್ಪುಗಾರರಾಗಿದ್ದರು. ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಲಕ್ಷ್ಮಮ್ಮ (93 ವರ್ಷ)
(ದಿವಂಗತ ಅಪ್ಪಯಣ್ಣನವರ ಧರ್ಮಪತ್ನಿ, ಕೇತಮಾರನಹಳ್ಳಿ ಬೆಂಗಳೂರು)
ಇವರು ದಿನಾಂಕ 25–5–2021, ಮಂಗಳವಾರ ಸಂಜೆ 6.45 ಘಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇಂತಿ ದುಃಖತಪ್ತ ಕುಟುಂಬಸ್ಥರು

ಮೆಟ್ರೊ 2ನೇ ಹಂತ: ವಿಸ್ತರಿತ ಮಾರ್ಗದ ವೀಕ್ಷಣೆ ನಡೆಸಿದ ಯಡಿಯೂರಪ್ಪ

ಕೆಂಗೇರಿ ಮಾರ್ಗ: ಜುಲೈನಲ್ಲಿ ಸಂಚಾರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದ ಮೈಸೂರು ರಸ್ತೆ ವಿಸ್ತರಿತ ಮಾರ್ಗವು ಜುಲೈನಲ್ಲಿ ಪ್ರಯಾಣಿಕರ ಸಂಚಾರಕ್ಕೆ ಮುಕ್ತವಾಗಲಿದೆ. 7.53 ಕಿ.ಮೀ. ಉದ್ದದ ಈ ಮಾರ್ಗ ನಾಯಂಡಹಳ್ಳಿ ನಿಲ್ದಾಣದಿಂದ ಕೆಂಗೇರಿಗೆ ಸಂಪರ್ಕ ಕಲ್ಪಿಸಲಿದೆ. ಬೈಯಪ್ಪನಹಳ್ಳಿಯಿಂದ ಕೆಂಗೇರಿಗೆ ₹56 ಹಾಗೂ ಕೆಂಗೇರಿಯಿಂದ ರೇಷ್ಮೆ ಸಂಸ್ಥೆಗೆ ಪ್ರಯಾಣಿಸಲು ₹ 60 ದರ ನಿಗದಿ ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಮಂಗಳವಾರ ನೂತನ ಸಂಚಾರ ಮಾರ್ಗದ ವೀಕ್ಷಣೆ ನಡೆಸಿದ ಬಳಿಕ ಮಾತನಾಡಿದರು.

'ಈ ಯೋಜನೆಗೆ ₹1,560 ಕೋಟಿ ವೆಚ್ಚ ಮಾಡಲಾಗಿದೆ. ಭೂಸ್ವಾಧೀನಕ್ಕೆ ₹360 ಕೋಟಿ ವ್ಯಯಿಸಲಾಗಿದೆ. ಈ ಮಾರ್ಗದಿಂದಾಗಿ ಪೂರ್ವ–ಪಶ್ಚಿಮ ಕಾರಿಡಾರ್ ಮಾರ್ಗದ ಉದ್ದವು 18.1 ಕಿ.ಮೀ.ಗೆ ಹೆಚ್ಚಿದೆ' ಎಂದರು.

'ಈ ಮಾರ್ಗದಲ್ಲಿ ರೈಲಿನ ಪರೀಕ್ಷಾರ್ಥ ಓಡಾಟ ಪೂರ್ಣಗೊಂಡಿದೆ. ನಾಯಂಡಹಳ್ಳಿ, ರಾಜರಾಜೇಶ್ವರಿನಗರ, ಜ್ಞಾನಭಾರತಿ ನಿಲ್ದಾಣಗಳಲ್ಲಿ ವಾಹನ ನಿಲುಗಡೆ ಸೌಲಭ್ಯ ಕಲ್ಪಿಸಲಾಗಿದೆ. ಕೆಂಗೇರಿ ಬಸ್ ನಿಲ್ದಾಣದಲ್ಲಿ ಎರಡು ಅಂತಸ್ತಿನ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಈ ನಿಲ್ದಾಣ ಬಿಟ್ಟು ಉಳಿದೆಡೆ ಪ್ರಯಾಣಿಕರು ರಸ್ತೆ ದಾಟಲು ಪಾದಚಾರಿ ಮಾರ್ಗ ಬಳಸಬಹುದು. ವಿಸ್ತರಿತ ಮಾರ್ಗದಿಂದಾಗಿ ಪ್ರತಿದಿನ ಸರಾಸರಿ 75 ಸಾವಿರ ಮಂದಿಗೆ ಅನುಕೂಲವಾಗಲಿದೆ' ಎಂದು ತಿಳಿಸಿದರು.

'ಕೆಂಗೇರಿಯಿಂದ ಚಲ್ಲಘಟ್ಟದವರೆಗಿನ ವಿಸ್ತರಿತ ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದೆ. ಇದು 2022ರ ಮಾರ್ಚ್ ಅಂತ್ಯದ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಈ ಯೋಜನೆಯನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲು ನಮ್ಮ ಸರ್ಕಾರ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದೆ' ಎಂದರು.

ಮುಖ್ಯಮಂತ್ರಿ ಬಿ.ಎಸ್‌ಯಡಿಯೂರಪ್ಪ ನೂತನ ಮಾರ್ಗದ ಪರಿವೀಕ್ಷಣೆ ನಡೆಸಿದರು –ಪ್ರಜಾವಾಣಿ ಚಿತ್ರ

ಟೀಂಲೀಸ್ ಸರ್ವೀಸಸ್ ಲಿಮಿಟೆಡ್
TeamLease® Putting India to Work
6ನೇ ಮಹಡಿ, ಬಿಎಂಟಿಸಿ ವಾಣಿಜ್ಯ ಸಂಕೀರ್ಣ, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು, ಕರ್ನಾಟಕ – 560095, ಭಾರತ
ದೂರವಾಣಿ: +91 80 68243000, ಫ್ಯಾಕ್ಸ್: +91 80 68243001
corporateaffairs@teamlease.com | www.teamleasegroup.com

ನಿರ್ದೇಶಕರುಗಳ ಸಭೆಯ ನೋಟೀಸು

ಈ ಮೂಲಕ ನೋಟೀಸು ನೀಡಲಾಗುತ್ತಿರುವುದೇನೆಂದರೆ, ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್ (ಎಲ್‌ಒಡಿಆರ್), 2015, ನಿಬಂಧನೆಗಳ 47(1)(ಎ)ರ ನಿಬಂಧನೆಯ ಅನುಸಾರ, ಕಂಪನಿಯ ನಿರ್ದೇಶಕರುಗಳ ಸಭೆಯನ್ನು ಬುಧವಾರ, ಜೂನ್ 09, 2021 ರಂದು ಭಾರತೀಯ ಕಾಲಮಾನ ಬೆಳಗ್ಗೆ 9:30 ಗಂಟೆಗೆ 31, ಮಾರ್ಚ್ 2021 ರಂದು ತ್ರೈಮಾಸಿಕ ಮತ್ತು ವರ್ಷಕ್ಕೆ ಕೊನೆಗೊಂಡ ಒಗ್ಗೂಡಿತ ಪರಿಶೋಧಿತ, ಪ್ರತ್ಯೇಕಿತ ಆರ್ಥಿಕ ಫಲಿತಾಂಶಗಳನ್ನು ಮತ್ತು ಇತರ ಅಂಶಗಳ ಜೊತೆಯಲ್ಲಿ ಪರಿಗಣಿಸುವ ಸಲುವಾಗಿ ನಡೆಸಲಾಗುತ್ತದೆ.

ನಿರ್ದೇಶಕರುಗಳ ಸಭೆಯ ನೋಟೀಸಿನ ಮಾಹಿತಿಯು ಕಂಪನಿಯ ವೆಬ್‌ಸೈಟ್ www.teamleasegroup.com ನಲ್ಲಿ ಹಾಗೂ ಬಿಎಸ್‌ಇ ಲಿಮಿಟೆಡ್ ವೆಬ್‌ಸೈಟ್ www.bseindia.com ಮತ್ತು ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ಇಲ್ಲಿ ಕೂಡ ಲಭ್ಯವಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/–
ಅಲಕ ಚಂದ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲೈಯನ್ಸ್ ಆಫೀಸರ್

ಸ್ಥಳ: ಬೆಂಗಳೂರು
ದಿನಾಂಕ: ಮೇ 25, 2021

ಶೀರೂರು ಮಠ: ಅರ್ಜಿ ಮಾರ್ಪಡಿಸಲು ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಡುಪಿಯ ಶೀರೂರು ಮಠದ ನೂತನ ಪೀಠಾಧಿಪತಿಯನ್ನಾಗಿ ಅಪ್ರಾಪ್ತರನ್ನು ನೇಮಕ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿ ಮಾರ್ಪಡಿಸಿ ಸಲ್ಲಿಸಲು ಅರ್ಜಿದಾರರಿಗೆ ಹೈಕೋರ್ಟ್ ಅನುಮತಿ ನೀಡಿದೆ.

ಮಠದ ಭಕ್ತರಾಗಿರುವ ಸಮಿತಿ ಕಾರ್ಯದರ್ಶಿ ಪಿ. ಲಾತವ್ಯ ಆಚಾರ್ಯ ಸೇರಿ ನಾಲ್ವರು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಇದು ಸಂಪೂರ್ಣ ಖಾಸಗಿ ವ್ಯಾಜ್ಯ ಆಗಿರುವ ಕಾರಣ ಸಾರ್ವಜನಿಕ ಹಿತಾಸಕ್ತಿ ವ್ಯಾಪ್ತಿಯಲ್ಲಿ ವಿಚಾರಣೆಗೆ ಪರಿಗಣಿಸಲು ಆಗುವುದಿಲ್ಲ' ಎಂದು ಹೇಳಿತು.

'16 ವರ್ಷದ ಬಾಲಕನನ್ನು ಪೀಠಾಧಿಪತಿಯಾಗಿ ನೇಮಕ ಮಾಡಲಾಗಿದೆ. ಬಾಲಕನನ್ನು ಬಲವಂತವಾಗಿ ಸನ್ಯಾಸಿ ಮಾಡಲಾಗಿದೆ. 18 ವರ್ಷ ತುಂಬದೇ ಇರುವವರು ನೀಡುವ ಸಮ್ಮತಿಗೂ ಮಾನ್ಯತೆ ಇಲ್ಲ. ಪ್ರಕರಣದಲ್ಲಿ ಅಪ್ರಾಪ್ತರ ಹಕ್ಕುಗಳ ಉಲ್ಲಂಘನೆಯಾಗಿದೆ' ಎಂದು ವಿವರಿಸಿದರು. 'ಅರ್ಜಿಯಲ್ಲಿರುವ ಮನವಿಗಳನ್ನು ತಿದ್ದುಪಡಿ ಮಾಡಲಾಗುವುದು. ಅದಕ್ಕೆ ಅವಕಾಶ ನೀಡಬೇಕು' ಎಂದು ಅರ್ಜಿದಾರರ ಪರ ವಕೀಲ ಡಿ.ಆರ್. ರವಿಶಂಕರ್ ಕೋರಿದರು.

'ಅರ್ಜಿಯಲ್ಲಿ ಅಪ್ರಾಪ್ತರ ಹಕ್ಕುಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಸರ್ಕಾರ ಈ ವಿಚಾರದಲ್ಲಿ ಮೂಕ ಪ್ರೇಕ್ಷಕನಾಗಬಾರದು. ತಿದ್ದುಪಡಿ ಅರ್ಜಿ ಸಲ್ಲಿಸಲು ಅವಕಾಶ ನೀಡಿ' ಎಂದು ತಿಳಿಸಿದ ಪೀಠ, ಜೂ.2ಕ್ಕೆ ವಿಚಾರಣೆ ಮುಂದೂಡಿತು.

'ಶೀರೂರು ಮಠದ ಆಡಳಿತಾತ್ಮಕ, ಆರ್ಥಿಕ, ಆಧ್ಯಾತ್ಮಿಕ ಹಾಗೂ ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದಂತೆ ನಿಯಂತ್ರಣ ಸಾಧಿಸಲು ಸೋದೆ ಮಠಕ್ಕೆ ಅಧಿಕಾರ ಇಲ್ಲ. ಹೀಗಿದ್ದರೂ, ಸೋದೆ ಮಠದ ವಿಶ್ವವಲ್ಲಭ ತೀರ್ಥ ಸ್ವಾಮೀಜಿ ಮಧ್ಯ ಪ್ರವೇಶ ಮಾಡಿರುವುದು ಕಾನೂನು ಬಾಹಿರ' ಎಂದು ಅರ್ಜಿದಾರರು ದೂರಿದ್ದರು.

ನಗರದಲ್ಲಿ ಇಂದು

ಅತ್ಯಾಧುನಿಕ ಮೊಬೈಲ್ ವೇರಿಯಬಲ್ ಮೆಸೇಜಿಂಗ್ ಸಿಸ್ಟಂ ಲೋಕಾರ್ಪಣೆ ಹಾಗೂ ಸಂಚಾರ ಪೊಲೀಸರಿಗೆ ಸುರಕ್ಷಾ ಪರಿಕರಗಳ ವಿತರಣೆ: ಗೃಹಸಚಿವ ಬಸವರಾಜ ಬೊಮ್ಮಾಯಿ, ಸ್ಥಳ–ಪುರಭವನ ಎದುರು, ಬೆಳಿಗ್ಗೆ 10.45

'ದೆಹಲಿ ಹೋರಾಟದ ಚಾರಿತ್ರಿಕ ಮಹತ್ವ, ಕೊರೋನೋತ್ತರ ರೈತ ಹೋರಾಟ ಹಾಗೂ ಕರ್ನಾಟಕದಲ್ಲಿ ಮುಂದೇನು?' ಕುರಿತು ವೆಬಿನಾರ್: ಭಾಗವಹಿಸುವವರು–ಯೋಗೇಂದ್ರ ಯಾದವ್, ಬಡಗಲಪುರ ನಾಗೇಂದ್ರ, ಎಚ್.ಆರ್.ಬಸವರಾಜಪ್ಪ, ಕೋಡಿಹಳ್ಳಿ ಚಂದ್ರಶೇಖರ್, ಕುರುಬೂರು ಶಾಂತಕುಮಾರ್, ನೂರ್ ಶ್ರೀಧರ್, ವಿ.ಗಾಯತ್ರಿ, ಚಾಮರಸ ಪಾಟೀಲ, ನಾಗರತ್ನ ಪಾಟೀಲ, ನಳಿನಿ ಗೌಡ, ಟಿ.ಯಶವಂತ, ಆಯೋಜನೆ–ಅನ್ನದ ಋಣ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಬುದ್ಧ ಜಯಂತಿ ಹಾಗೂ ಪ್ರಬುದ್ಧ ಭಾರತ ನಿರ್ಮಾಣ ಕುರಿತು ರಾಜ್ಯಮಟ್ಟದ ಸಂವಾದ: ಉದ್ಘಾಟನೆ–ಎಂ.ವೆಂಕಟಸ್ವಾಮಿ, ಅಧ್ಯಕ್ಷತೆ–ಎಚ್.ಆರ್. ಸುರೇಂದ್ರ, ಆಯೋಜನೆ–ಸಮತಾ ಸೈನಿಕ ದಳ, ಸ್ಥಳ–ನಾಗಸೇನಾ ವಿದ್ಯಾಲಯ, ಸದಾಶಿವನಗರ, ಬೆಳಿಗ್ಗೆ 11.30

60 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರ ಉದ್ಘಾಟನೆ–ವಸತಿ ಸಚಿವ ವಿ.ಸೋಮಣ್ಣ, ಸ್ಥಳ–ಇಂಡಿಯಾ ಕ್ಯಾಂಪಸ್ ಕ್ರೂಡ್, ಹೆಣ್ಣೂರು ಮುಖ್ಯರಸ್ತೆ, ಸೇಂಟ್ ಥಾಮಸ್ ಟೌನ್, ಕಾಚರಕನಹಳ್ಳಿ, ಬೆಳಿಗ್ಗೆ 11

'ದೆಹಲಿ ಗಡಿಗಳಲ್ಲಿ ಆರು ತಿಂಗಳು ರೈತರ ಸತತ ಹೋರಾಟ:ಮುಂದೇನು?' ಚರ್ಚೆ: ಮಾತನಾಡುವವರು–ಪುರುಷೋತ್ತಮ ಬಿಳಿಮಲೆ, ಜೆ.ಸಿ. ಬಯ್ಯಾರೆಡ್ಡಿ, ಬಡಗಲಪುರ ನಾಗೇಂದ್ರ, ಆಯೋಜನೆ–ಜನಶಕ್ತಿ ಮೀಡಿಯಾ, ರಾತ್ರಿ 9 (ಆನ್‌ಲೈನ್ ಕಾರ್ಯಕ್ರಮ)

ಪುರುಷೋತ್ತಮ ಬಿಳಿಮಲೆ

ಕನ್ನಡ ಚಿಂತನ ಮಾಲೆ: ವಿಷಯ–ಶರಣ ಸಾಹಿತ್ಯ ಮರು ಚಿಂತನೆ, ಉದ್ಘಾಟನೆ–ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಅತಿಥಿಗಳು–ಸಾಹಿತಿ ಎಚ್.ಎಸ್.ಶಿವಪ್ರಕಾಶ್, ಡಾ.ಸಜ್ಜನ ಶಿವ, ಅಧ್ಯಕ್ಷತೆ–ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್, ಆಯೋಜನೆ–ಶೇಷಾದ್ರಿಪುರ ಸಂಜೆ ಪದವಿ ಕಾಲೇಜಿನ ಕನ್ನಡ ಸಾಹಿತ್ಯ ವೇದಿಕೆ, ಸಂಸ್ಕೃತಿ–ಸಂಗಮ ಸಾಹಿತ್ಯ ಸೇವಾ ಪ್ರತಿಷ್ಠಾನ, ಸಿದ್ಧಗಂಗಾ ಹ್ಯುಮಾನಿಟೇರಿಯನ್ ಮಿಷನ್, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Wanted

WANTED
• HR / ADMN
• ACCOUNTANT
• SECREATARY AND
• OFFICE ASSISTANTS
TO WORK IN REPUTED SECURITY AND MANPOWER SERVICES OFFICE @ R.T. NAGAR
(Must be experienced & also welcome for retired Army/Navy/Air Force/Police)
CONTACT @ 9845996744
raghu_sgr2@yahoo.co.in

General

GOLDEN OPPORTUNITY for Unemployed Techies, Teachers, Retired Bankers, Homemakers on Fixed Income with Huge Incentives. Dial:9341838235

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

REAL ESTATE SELLING

Commercial Land

General

COMMERCIAL LAND 2 Acres is available for JOINT VENTURE TO CONSTRUCT MEGA TRADE CENTER 220000 Square Feet. Developer can Avail Project Loan on Property. Contact 7676770503

EDUCATIONAL

Admission

DIRECT FINAL B.Tech/ M.Tech/Diploma/MBA/MCA/ M.Sc/BBA/BCA/B.Sc/B.Com/ B.Ed.Recog by UGC/Govt. Asha Institute. Bangalore-560085. 9448460103/ 7093438248.

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information Contact:
9880856233
9731810277
9886213331

'ದೀಕ್ಷಾ' ಆ್ಯಪ್‌ನಲ್ಲಿ ಪಿಯು 'ಪರೀಕ್ಷಾ ಅಭ್ಯಾಸ'

ಬೆಂಗಳೂರು: ರಾಜ್ಯ ಪದವಿಪೂರ್ವ ಶಿಕ್ಷಣ ಇಲಾಖೆ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗಾಗಿ ರೂಪಿಸಿದ 'ಪರೀಕ್ಷಾ ಅಭ್ಯಾಸ' ಕಾರ್ಯಕ್ರಮ ಇನ್ನು ಮುಂದೆ ಕೇಂದ್ರ ಸರ್ಕಾರದ 'ದೀಕ್ಷಾ' ಆ್ಯಪ್‌ನಲ್ಲಿ ಲಭ್ಯವಾಗಲಿದೆ.

ಆ್ಯಪ್‌ಗೆ ಅಳವಡಿಸಿದ ಪರೀಕ್ಷಾ ಅಭ್ಯಾಸ ಕಾರ್ಯಕ್ರಮವನ್ನು ಮಂಗಳವಾರ ಬಿಡುಗಡೆ ಮಾಡಿ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್, 'ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗೆ ಆತ್ಮವಿಶ್ವಾಸದಿಂದ ಸಿದ್ಧರಾಗಲು ಈ ಆ್ಯಪ್ ಸಹಕಾರಿ ಆಗಲಿದೆ' ಎಂದರು.

'ಇದೇ ರೀತಿಯಲ್ಲಿ 10ನೇ ತರಗತಿಯ ಮಕ್ಕಳಿಗೆ ಪರೀಕ್ಷಾ ಸಿದ್ಧತೆಗೆ ಡಿಎಸ್‌ಇಆರ್‌ಟಿ ರೂಪಿಸಿರುವ 'ಫೋಕಸ್' ಎಂಬ ಪುನರ್ಮನನ ಕಾರ್ಯಕ್ರಮ ಕೂಡಾ ದೀಕ್ಷಾದಲ್ಲಿ ಪ್ರಸ್ತುತಪಡಿಸಲಾಗಿದೆ. ಪ್ರತಿಯೊಂದು ವಿಷಯಕ್ಕೆ ಇ- ಪಠ್ಯಪುಸ್ತಕ, ಕನಿಷ್ಠ ಎರಡು ಮಾದರಿ ಪ್ರಶ್ನೆಪತ್ರಿಕೆಗಳು, ವಿವರಾಣಾತ್ಮಕ ವಿಡಿಯೊಗಳು, ಅಧ್ಯಾಯವಾರು ಅಭ್ಯಾಸ ಪ್ರಶ್ನೋತ್ತರಗಳು ಅದರಲ್ಲಿ ಸಿಗಲಿವೆ. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗುವುದಕ್ಕೆ ಸಹಾಯ ಮಾಡಲು ಪಿಸಿಎಂಬಿ ವಿಷಯಕ್ಕೆ ಸುಮಾರು ಒಂಬತ್ತು ಸಾವಿರ ಬಹುಆಯ್ಕೆ ಪ್ರಶ್ನೆಗಳನ್ನು ಅಧ್ಯಾಯವಾರು ಒದಗಿಸಲಾಗಿದೆ' ಎಂದರು.

ಏನಿದು ದೀಕ್ಷಾ ಆ್ಯಪ್ ಪ್ರೋಗ್ರಾಂ: ದೀಕ್ಷಾ ಪೋರ್ಟಲ್ ಅನ್ನು https://diksha.gov.in/ ಇಲ್ಲಿ ನೋಡಬಹುದು. ಆಂಡ್ರಾಯಿಡ್ ಫೋನ್‌ಗಳಲ್ಲಿ ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ಲೋಡ್ ಮಾಡಿಕೊಳ್ಳಬಹುದು ಅಥವಾ ಈ ಲಿಂಕ್ (http://bit.ly/KA-diksha) ಒತ್ತಿ ದೀಕ್ಷಾ ಆ್ಯಪ್ ಡೌನ್ಲೋಡ್ ಮಾಡಿಕೊಳ್ಳಬಹುದು. ಬಳಿಕ ಆ್ಯಪ್ ಅಥವಾ ಪೋರ್ಟಲ್‌ನಲ್ಲಿ ಬೇಕಿರುವ ಮಂಡಳಿ, ಮಾಧ್ಯಮ, ಭಾಷೆ ಮತ್ತು ತರಗತಿಗಳನ್ನು ಆಯ್ಕೆ ಮಾಡಬೇಕು. 1ರಿಂದ 12ನೇ ತರಗತಿಗಳಿಗೆ ಪಠ್ಯಾಂಶಗಳು, ಅಂದರೆ ಇ-ಪಠ್ಯಪುಸ್ತಕಗಳು (ಇಟಿಬಿ), ವಿವರಣಾತ್ಮಕ ಪಠ್ಯಾಂಶಗಳು, ಕಲಿಕಾ ಸಂಪನ್ಮೂಲಗಳು, ಅಭ್ಯಾಸ ಪ್ರಶ್ನೆಗಳು, ಪ್ರಶ್ನೆ ಕೋಶ ಮತ್ತು ಶಿಕ್ಷಕರಿಗೆ ಪಾಠ ಯೋಜನೆ ಇನ್ನಿತರ ಸಂಪನ್ಮೂಲಗಳನ್ನು ಈ ಪೋರ್ಟಲ್‌ನಲ್ಲಿ ಅಳವಡಿಸಲಾಗಿದೆ.

10ನೇ ತರಗತಿಯ ವಿದ್ಯಾರ್ಥಿಗಳು ಪರೀಕ್ಷೆಗೆ ಸಿದ್ಧರಾಗುವುದಕ್ಕೆ ಸಹಾಯವಾಗಲೆಂದು ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ವಿಷಯಗಳ ಪ್ರತಿ ಅಧ್ಯಾಯಕ್ಕೆ ಸುಮಾರು 30 ಪ್ರಶ್ನೆಗಳನ್ನು ಸೇರಿಸಲಾಗಿದೆ. ದ್ವಿತೀಯ ಪಿಯುಸಿಯ ಪಿಸಿಎಂಬಿ ವಿಷಯಗಳಿಗೆ, ಪ್ರತಿ ಅಧ್ಯಾಯಕ್ಕೂ 80ರಿಂದ 100 ಪ್ರಶ್ನೆಗಳನ್ನು ಅಪ್ಲೋಡ್ ಮಾಡಲಾಗಿದೆ. ಪಠ್ಯಾಂಶಗಳನ್ನು 'ದೀಕ್ಷಾ' ಪೋರ್ಟಲ್‌ಗೆ ಅಪ್ಲೋಡ್ ಮಾಡಲು ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಹಾಯ ಮಾಡಿದ್ದಾರೆ.

ವಿನಯ ಕುಲಕರ್ಣಿ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲಾ ಪಂಚಾಯತಿ ಸದಸ್ಯರಾಗಿದ್ದ ಯೋಗೀಶಗೌಡ ಹತ್ಯೆ ಪ್ರಕರಣದ ಆರೋಪಿ ವಿನಯ ಕುಲಕರ್ಣಿಗೆ ಜಾಮೀನು ಮಂಜೂರು ಮಾಡಲು ನಿರಾಕರಿಸಿರುವ ಹೈಕೋರ್ಟ್, ಅರ್ಜಿ ವಜಾಗೊಳಿಸಿದೆ.

ವಿನಯ ಕುಲಕರ್ಣಿ

'ಘಟನೆ ನಡೆದ ಭಾಗದಲ್ಲಿ ಆರೋಪಿ ಪ್ರಭಾವಿ ವ್ಯಕ್ತಿ ಆಗಿರುವ ಕಾರಣ ಸಾಕ್ಷ್ಯ ನಾಶ ಮಾಡುವ ಸಾಧ್ಯತೆ ಇದೆ. ಜಾಮೀನು ಕೋರಿ ಪದೇ ಪದೇ ಅರ್ಜಿ ಸಲ್ಲಿಸುತ್ತಿರುವ ವಿನಯ ಕುಲಕರ್ಣಿ, ಅರ್ಜಿ ಪರಿಗಣಿಸಲು ಪೂರಕವಾದ ಯಾವುದೇ ಹೊಸ ಅಂಶಗಳನ್ನು ಒದಗಿಸಿಲ್ಲ' ಎಂದು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿದೆ.

'ಹತ್ಯೆ ಪ್ರಕರಣದಲ್ಲಿ ವಿನಯ ಕುಲಕರ್ಣಿ ಒಳಸಂಚು ರೂಪಿಸಿರುವ ಬಗ್ಗೆ ಬಲವಾದ ಸಾಕ್ಷ್ಯಗಳಿವೆ. ಜಾಮೀನು ಮಂಜೂರು ಮಾಡಿದರೆ ಅವು ನಾಶವಾಗುವ ಸಾಧ್ಯತೆ ಇದೆ' ಎಂದು ಸಿಬಿಐ ಪರ ವಕೀಲ ಪಿ. ಪ್ರಸನ್ನಕುಮಾರ್ ವಾದ ಮಂಡಿಸಿದರು.

'ಸಿಬಿಐ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದೆ. ಅರ್ಜಿದಾರರಿಗೂ ಈ ಹತ್ಯೆ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ. ಜಾಮೀನು ಮಂಜೂರು ಮಾಡಬೇಕು' ಎಂದು ಅರ್ಜಿದಾರರ ಪರ ವಕೀಲ ಶಶಿಕಿರಣ ಶೆಟ್ಟಿ ಮನವಿ ಮಾಡಿದರು.

2016ರ ಜೂನ್ 15ರಂದು ಯೋಗೀಶಗೌಡ ಹತ್ಯೆಯಾಗಿತ್ತು. 2020 ನವೆಂಬರ್ 5ರಂದು ವಿನಯ ಕುಲಕರ್ಣಿ ಬಂಧನವಾಗಿತ್ತು. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ಅರ್ಜಿ ವಜಾಗೊಳಿಸಿದ್ದರಿಂದ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

'ಆ. 15 ಕ್ಕೆ ಬಡವರಿಗೆ 5,000 ಮನೆ ಹಂಚಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಬಡವರಿಗಾಗಿ ನಿರ್ಮಿಸುತ್ತಿರುವ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆಯಡಿ ಈಗಾಗಲೇ ಪೂರ್ಣಗೊಂಡಿರುವ 5 ಸಾವಿರ ಮನೆಗಳನ್ನು ಅರ್ಹರಿಗೆ ಇದೇ ಆಗಸ್ಟ್ 15ರಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಸ್ತಾಂತರಿಸಲಿದ್ದಾರೆ' ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಈ ವಸತಿ ಯೋಜನೆಗೆ ಸಂಬಂಧಿಸಿದಂತೆ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸರ್ಕಾರಿ ಜಮೀನು ಮಂಜೂರಾತಿ ಹಾಗೂ ಹಸ್ತಾಂತರ ಕುರಿತಂತೆ ಮಂಗಳವಾರ ನಡೆದ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯೋಜನೆಯ ಮೊದಲನೇ ಹಂತದಲ್ಲಿ 313 ಎಕರೆ ಸರ್ಕಾರಿ ಜಮೀನಿನಲ್ಲಿ 46,499 ಬಹುಮಹಡಿ ವಸತಿಗೃಹಗಳ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ. 45,148 ಮನೆಗಳ ನಿರ್ಮಾಣಕ್ಕೆ ಕಾರ್ಯಾದೇಶ ನೀಡಲಾಗಿದೆ' ಎಂದರು.

ವಿ.ಸೋಮಣ್ಣ

'41,011 ಬಹುಮಹಡಿ ಮನೆಗಳ ನಿರ್ಮಾಣದ ಕಾಮಗಾರಿ ಆರಂಭಿಸಲಾಗಿದ್ದು, ಈ ಪೈಕಿ 848 ಮನೆಗಳ ಮೇಲ್ಚಾವಣಿ ಮತ್ತು 8,757 ಮನೆಗಳ ಪ್ಲಿಂತ್ ಪೂರ್ಣಗೊಂಡಿದೆ. 7,721 ಮನೆಗಳ ನಿರ್ಮಾಣ ತಳಪಾಯ ಹಂತದಲ್ಲಿದೆ. 9,943 ಮನೆಗಳ ತಳಪಾಯದ ಮಣ್ಣು ಅಗೆತದ ಹಂತದಲ್ಲಿದ್ದು, 13,742 ಮನೆಗಳ ಜಮೀನು ಸಮತಟ್ಟು ನಡೆಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಆನ್‌ಲೈನ್ ಮೂಲಕ ಈವರೆಗೆ 48,615 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಫಲಾನುಭವಿಗಳು ತಮ್ಮ ಇಚ್ಛೆಯಂತೆ ಫ್ಲ್ಯಾಟ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಯೋಜನೆಯ ಎರಡನೆಯ ಹಂತದಲ್ಲಿ 53,501 ಬಹುಮಹಡಿ ಮನೆಗಳನ್ನು ನಿರ್ಮಿಸಲಾಗುವುದು. ಈ ಪೈಕಿ 2,928 ಮನೆಗಳ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ' ಎಂದರು.

'ನಗರ ಜಿಲ್ಲೆಯ ಎಲ್ಲ ಶಾಸಕರಿಗೂ ತಮ್ಮ ವ್ಯಾಪ್ತಿಯಲ್ಲಿ ಶೇ 50ರಷ್ಟು ಮನೆಗಳನ್ನು ಅರ್ಹ ಬಡವರಿಗೆ ವಿತರಿಸಲು ಅವಕಾಶ ಮಾಡಿಕೊಡಲಾಗುವುದು. ಬಡವರಿಗೆ ಕಡಿಮೆ ಬೆಲೆಯಲ್ಲಿ ಮನೆಗಳನ್ನು ನೀಡಲಾಗುತ್ತಿದ್ದು, ತಲಾ ₹ 7 ಲಕ್ಷ ನಿಗದಿಪಡಿಸಿದ್ದ ದರವನ್ನು ₹ 5 ಲಕ್ಷಕ್ಕೆ ಇಳಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ₹ 4.20 ಲಕ್ಷ ನಿಗದಿಪಡಿಸಲು ಚಿಂತನೆ ನಡೆದಿದೆ' ಎಂದರು.

ಸಭೆಯ ಬಳಿಕ ಶಾಸಕರಾದ ಮುನಿರತ್ನ ಮತ್ತು ಆರ್.ಮಂಜುನಾಥ್ ಅವರು ಕೊಳಚೆ ನಿರ್ಮೂಲನಾ ಮಂಡಳಿ ತಮ್ಮ ಕ್ಷೇತ್ರಗಳಲ್ಲಿ ನಿರ್ಮಿಸುತ್ತಿರುವ ಮನೆಗಳ ಸಮಸ್ಯೆಗಳ ಕುರಿತು ಸಚಿವರ ಗಮನ ಸೆಳೆದರು. ಇದಕ್ಕೆ ಸ್ಪಂದಿಸಿದ ಸಚಿವರು, ವಸತಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ರಾಜೀವ್ ಗಾಂಧಿ ವಸತಿ ನಿಗಮದ ಅಧಿಕಾರಿಗಳ ತಂಡವು ಸ್ಥಳಗಳಿಗೆ ಭೇಟಿ ನೀಡಿ ವರದಿ ಸಲ್ಲಿಸುವಂತೆ ಸೂಚಿಸಿದರು. ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಸಭೆಯಲ್ಲಿ ಇದ್ದರು.

ಪ್ರಸನ್ನ ಟ್ರಸ್ಟ್ ವತಿಯಿಂದ ಬಡವರಿಗೆ ಆಹಾರ ವಿತರಿಸಲಾಯಿತು

ಬಡ ಜನರಿಗೆ ಆಹಾರ ವಿತರಣೆ

ಬೆಂಗಳೂರು: ಕೊರೊನಾ ನಿಯಂತ್ರಣಕ್ಕಾಗಿ ಜಾರಿಯಾದ ಲಾಕ್‌ಡೌನ್ ಸಂದರ್ಭಗಳಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಸಾವಿರಾರು ಜನರಿಗೆ ಪ್ರಸನ್ನ ಟ್ರಸ್ಟ್ ಉಚಿತವಾಗಿ ಆಹಾರ ವಿತರಿಸಿದೆ.

ಸ್ವಾಮಿ ಸುಖಬೋಧಾನಂದ ಅವರು ಸ್ಥಾಪಿಸಿರುವ ಈ ಟ್ರಸ್ಟ್ ಕಳೆದ ವರ್ಷದ ಲಾಕ್‌ಡೌನ್‌ನಿಂದಲೂ ನಗರದ ವಿವಿಧ ಭಾಗಗಳಲ್ಲಿರುವ ಜನರಿಗೆ ಪ್ರತಿದಿನ ಆಹಾರ ವಿತರಿಸುವ ಕೆಲಸ ಮಾಡುತ್ತಿದೆ.

ನಗರದಾದ್ಯಂತ ಇರುವ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿ ಬಡ ರೋಗಿಗಳಿಗೆ ಚಿಕಿತ್ಸೆ ನೀಡುವ ಆರು ಸಾವಿರ ಸಿಬ್ಬಂದಿಗೂ ನೆರವು ನೀಡಿದೆ.

'ಕಳೆದ ಲಾಕ್‌ಡೌನ್‌ನಿಂದ ಈವರೆಗೆ ಐದು ಹಂತಗಳಲ್ಲಿ ಕೈಗೊಂಡಿದ್ದ ಅನ್ನದಾನ ಸೇವೆಯಡಿ ಈವರೆಗೆ ಸಂಸ್ಥೆಯು 12,73,557 ಜನರ ಹಸಿವು ನೀಗಿಸಿದೆ. 3.1 ಲಕ್ಷ ಕೆ.ಜಿಯಷ್ಟು ಆಹಾರ ಸರಬರಾಜು ಮಾಡಿದ್ದೇವೆ' ಎಂದು ಪ್ರಸನ್ನ ಟ್ರಸ್ಟ್‌ನ ಸ್ವಯಂಸೇವಕರೊಬ್ಬರು ತಿಳಿಸಿದರು.

'ಪ್ರಸ್ತುತ ಅನ್ನದಾನ ಮುಂದುವರೆದಿದ್ದು, ಕೋರಮಂಗಲದಲ್ಲಿರುವ ಟ್ರಸ್ಟ್‌ನ ಅಡುಗೆ ಮನೆಯಲ್ಲಿ ಆಹಾರ ಸಿದ್ಧಪಡಿಸಲಾಗುತ್ತಿದೆ. ಎರಡು ವಾಹನಗಳ ಮೂಲಕ ಬೆಂಗಳೂರು ನಗರ ಪೊಲೀಸರು ಹಾಗೂ ಸ್ವಯಂಸೇವಕರ ಸಹಕಾರದಿಂದ ನಗರದಾದ್ಯಂತ ಆಹಾರ ವಿತರಿಸಲಾಗುತ್ತಿದೆ'.

'ಕೋರಮಂಗಲ, ಅಂಬೇಡ್ಕರ್ ನಗರ, ರಾಜೇಂದ್ರ ನಗರ, ಜಯನಗರ, ಜೆ.ಪಿ.ನಗರ, ವಿವೇಕ ನಗರ, ವಿಲ್ಸನ್ ಗಾರ್ಡನ್, ಮೆಜೆಸ್ಟಿಕ್, ಆಸ್ಟಿನ್ ಟೌನ್, ಬೈಯಪ್ಪನಹಳ್ಳಿ, ಬನಶಂಕರಿ, ಕೆ.ಆರ್.ಮಾರುಕಟ್ಟೆ, ಮಾಗಡಿ ರಸ್ತೆ, ಮಾರತ್ತಹಳ್ಳಿ, ತಿಪ್ಪಸಂದ್ರ, ಮಡಿವಾಳ, ಬೊಮ್ಮನಹಳ್ಳಿ, ಸರ್ಜಾಪುರ ಸೇರಿದಂತೆ ವಿವಿಧ ಭಾಗಗಳ ಕೊಳೆಗೇರಿ ನಿವಾಸಿಗಳು, ಮಕ್ಕಳು, ದಿನಗೂಲಿ ಕಾರ್ಮಿಕರು, ನಿರಾಶ್ರಿತರು, ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಕುಟುಂಬಗಳು ಸೇರಿದಂತೆ ಎಲ್ಲ ಬಡವರಿಗೆ ಪ್ರತಿದಿನ ಅನ್ನದಾನ ನಡೆಯುತ್ತಿದೆ' ಎಂದು ವಿವರಿಸಿದರು.

ಮೃತದೇಹ ಪಡೆಯಲು ಕುಟುಂಬದವರ ಪಡಿಪಾಟಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೆಡೆ ಕುಟುಂಬದ ಸದಸ್ಯೆಯನ್ನು ಕಳೆದುಕೊಂಡ ದುಃಖ. ಅದರ ನಡುವೆಯೇ ಮೃತದೇಹ ಪಡೆಯಲು ಪರದಾಟ...

ಕೋಣನಕುಂಟೆ ಕ್ರಾಸ್‌ನಲ್ಲಿರುವ ಆಸ್ಟ್ರಾ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸೋಮವಾರ ತಡರಾತ್ರಿ ಕಂಡುಬಂದ ದೃಶ್ಯವಿದು.

ಚಿಕ್ಕಬಾಣಾವರದ ದೊಡ್ಡಕಮ್ಮನಹಳ್ಳಿ ನಿವಾಸಿಯಾಗಿದ್ದ 44 ವರ್ಷದ ಪ್ರಮೀಳಾ, ಕೋವಿಡ್‌ನಿಂದಾಗಿ ಸೋಮವಾರ ಮಧ್ಯರಾತ್ರಿ ಅಸುನೀಗಿದ್ದರು. ಬಾಕಿ ಬಿಲ್ ಪಾವತಿಸುವಂತೆ ಪಟ್ಟು ಹಿಡಿದಿದ್ದ ಆಸ್ಪತ್ರೆ ಸಿಬ್ಬಂದಿ ಮೃತದೇಹ ಹಸ್ತಾಂತರಿಸಲು ತಗಾದೆ ತೆಗೆದಿದ್ದರು. ಇದರಿಂದ ಕಂಗಾಲಾದ ಸಂಬಂಧಿಕರು ಪರಿಚಿತರಿಗೆಲ್ಲಾ ಕರೆ ಮಾಡಿ, ಶಾಸಕರಿಂದ ಶಿಫಾರಸು ಮಾಡಿಸಿ ಶವ ಪಡೆಯಬೇಕಾಯಿತು.

‘ಆಸ್ಪತ್ರೆಗೆ ಅದಾಗಲೇ ₹3 ರಿಂದ ₹4 ಲಕ್ಷ ಹಣ ಕಟ್ಟಿದ್ದೆವು. ಇನ್ನೂ ₹70 ಸಾವಿರ ಬಾಕಿ ಇತ್ತು. ಅದನ್ನು ಕಟ್ಟುವಂತೆ ಒತ್ತಡ ಹಾಕಿದರು. ಇಲ್ಲದಿದ್ದರೆ ಶವ ಕೊಡುವುದಿಲ್ಲ ಎಂದೂ ಹೇಳಿದರು. ಹೀಗಾಗಿ ಶ್ರೀನಿವಾಸಪುರದ ಶಾಸಕ ಕೆ.ಆರ್. ರಮೇಶ್‌ಕುಮಾರ್ ಅವರಿಗೆ ಕರೆ ಮಾಡಿದೆವು. ಅವರ ಮಧ್ಯಪ್ರವೇಶದ ಬಳಿಕ ಶವ ಹಸ್ತಾಂತರಿಸಿದರು. ಕೊನೆಗೆ ₹50 ಸಾವಿರ ಹಣವನ್ನೂ ಪಾವತಿಸಬೇಕಾಯಿತು’ ಎಂದು ಪ್ರಮೀಳಾ ಅವರ ಸಹೋದರ ವೀರಭದ್ರಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರಮೀಳಾ ಅವರಿಗೆ ಎಂಟು ದಿನಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಸರ್ಕಾರ ನಿಗದಿಪಡಿಸಿರುವಂತೆ ದಿನಕ್ಕೆ ₹25 ಸಾವಿರ ಶುಲ್ಕ ಪಡೆಯಲಾಗಿದೆ. ಇದುವರೆಗೂ ₹2.5 ಲಕ್ಷ ಬಿಲ್ ಆಗಿತ್ತು. ಈ ಪೈಕಿ ಅವರು ಇನ್ನೂ ₹50 ಸಾವಿರ ಕಟ್ಟಬೇಕಿದೆ. ಶವ ಹಸ್ತಾಂತರಿಸಲು ನಾವು ವಿಳಂಬ ಮಾಡಿಲ್ಲ’ ಎಂದು ಆಸ್ಪತ್ರೆಯ ಆಡಳಿತಾಧಿಕಾರಿ ಪಿ.ಅರ್ಚನಾ ಹೇಳಿದ್ದಾರೆ.

ಸಾಲ ಮಾಡಿ ₹4 ಲಕ್ಷ ಖರ್ಚು ಮಾಡಿಯೂ ತಂದೆ ಉಳಿಯಲಿಲ್ಲ – ಸಂಕಟ ಹಂಚಿಕೊಂಡ ನೃತ್ಯಪಟು

ಹೆಜ್ಜೆ ಹೆಜ್ಜೆಗೂ ಕಾಂಚಾಣ – ಎಲ್ಲೆಲ್ಲೂ ಭ್ರಷ್ಟಾಚಾರ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಕೋವಿಡ್ ಪರೀಕ್ಷೆಯಿಂದ ಹಿಡಿದು ಮರಣ ಪ್ರಮಾಣಪತ್ರ ಪಡೆಯುವವರೆಗೆ.. ಹೆಜ್ಜೆ ಹೆಜ್ಜೆಗೂ ಸುಲಿಗೆ ಮಾಡುತ್ತಾರೆ. ಆಸ್ಪತ್ರೆಗೆ ದಾಖಲಾಗುವುದರಿಂದ ಹಿಡಿದು ಹಣ ಒಯ್ಯುವ ವಾಹನದವರೆಗೂ ಎಲ್ಲೆಡೆ ಚೆಲ್ಲಬೇಕು ದುಡ್ಡು. ಸಾಲ ಮಾಡಿ ₹ 4 ಲಕ್ಷ ಖರ್ಚು ಮಾಡಿದರೂ ತಂದೆಯನ್ನು ಉಳಿಸಿಕೊಳ್ಳಲಾಗಲಿಲ್ಲ.

ಮಂಜುನಾಥ ಆರಾಧ್ಯ

ಕೋವಿಡ್‌ನಿಂದಾಗಿ ತಂದೆಯನ್ನು (ಮಂಜುನಾಥ ಆರಾಧ್ಯ, 52) ಕಳೆದುಕೊಂಡ ಕರುಣಾಜನಕ ಕತೆಯನ್ನು ಆನೇಕಲ್‌ನ ಚೇತನ್ ಆರಾಧ್ಯ ಬಿಚ್ಚಿಟ್ಟದ್ದು ಹೀಗೆ. ತಂದೆಗೆ ಕೋವಿಡ್ ಕಾಡಿದಾಗ ಅನುಭವಿಸಿದ ತಳಮಳಗಳೆಲ್ಲವನ್ನೂ ವಿಡಿಯೊ ಮಾಡಿ ಈ ಯುವಕ ಎಳೆ ಎಳೆಯಾಗಿ ಹೇಳಿಕೊಂಡಿದ್ದಾರೆ. ‘ಪ್ರಜಾವಾಣಿ’ ಜೊತೆಗೂ ತಮ್ಮ ನೋವನ್ನು ಹಂಚಿಕೊಂಡ ಚೇತನ್, ‘ಕೋವಿಡ್ ಪೀಡಿತರನ್ನು, ಅವರ ಕುಟುಂಬದವರನ್ನು ಎಷ್ಟೆಲ್ಲಾ ಸತಾಯಿಸಲಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಾಗಬೇಕು. ಸರ್ಕಾರ ಎಚ್ಚೆತ್ತುಕೊಂಡು ವ್ಯವಸ್ಥೆಯನ್ನು ಸರಿಪಡಿಸಬೇಕು’ ಎಂದರು.

ತಾವು ಅನುಭವಿಸಿದ ಯಾತನೆಗಳನ್ನು ಚೇತನ್ ವಿವರಿಸಿದ್ದು ಹೀಗೆ...

‘ಏ. 28ರಂದು ತಂದೆಗೆ ಮಧುಮೇಹ ಉಲ್ಬಣಗೊಂಡಿತ್ತು. ಅವರನ್ನು ಆನೇಕಲ್‌ನ ಗಂಗಾ ಆಸ್ಪತ್ರೆಗೆ ದಾಖಲಿಸಿದೆವು. ಅಲ್ಲಿ ವಿಶೇಷ ವಾರ್ಡ್‌ಗೆ ದಿನಕ್ಕೆ ₹ 3,500 ದರವಿದೆ. ಚಿಕಿತ್ಸೆ ವೇಳೆ ತಂದೆಗೆ ಬಿಕ್ಕಳಿಕೆ ಶುರುವಾಯಿತು. ಎರಡು ದಿನಗಳ ಬಳಿಕವೂ ಕಡಿಮೆ ಆಗಲಿಲ್ಲ. ಏ 30ರಂದು ಕೋವಿಡ್ ಪರೀಕ್ಷೆ ಮಾಡಿಸಿದರು. ಪರೀಕ್ಷೆ ಮಾಡಿದ ವ್ಯಕ್ತಿ ಬಳಿ ಇದ್ದ ಕಿಟ್‌ನಲ್ಲಿ ‘ಇದು ಮಾರಾಟಕ್ಕಲ್ಲ’ ಎಂದು ಬರೆದಿತ್ತು. ಆದರೂ ನನ್ನಿಂದ ಅದಕ್ಕೆ ₹ 2500 ಪಡೆದರು.’

‘ಮೇ 1ರವರೆಗೂ ಫಲಿತಾಂಶ ಬರಲಿಲ್ಲ. ಅಷ್ಟರಲ್ಲಿ ತಂದೆಗೆ ಕೆಮ್ಮು ಶುರುವಾಯಿತು. ಫಲಿತಾಂಶ ಬರುವ ವರೆಗೆ ಕಾಯಲಾಗದು. ಸಿಟಿ ಸ್ಕ್ಯಾನ್ ಮಾಡಿಸಿ ಎಂದು ವೈದ್ಯರು ಸೂಚಿಸಿದರು. ಹೊಸೂರಿನಲ್ಲಿ ಸಿಟಿ ಸ್ಕ್ಯಾನ್ ಮಾಡಿಸಿದೆವು. ಕೋವಿಡ್ ಇರುವುದರಿಂದ ಐಸಿಯುನಲ್ಲಿ ಚಿಕಿತ್ಸೆ ಕೊಡಿಸಬೇಕು. ದಿನಕ್ಕೆ ₹ 25 ಸಾವಿರ ಖರ್ಚಾಗುತ್ತದೆ ಎಂದರು. ಅದಕ್ಕೂ ಒಪ್ಪಿದೆ. ಮೇ 3 ಆದರೂ ಕೋವಿಡ್ ಪರೀಕ್ಷೆಯ ಫಲಿತಾಂಶ ಬರಲಿಲ್ಲ. ಆದರೆ, ತಂದೆಯ ಸ್ಥಿತಿ ತುಂಬಾ ಗಂಭೀರ ಹಂತ ತಲುಪಿತ್ತು. ಅವರನ್ನು ದೊಡ್ಡ ಆಸ್ಪತ್ರೆಗೆ ದಾಖಲಿಸುವಂತೆ ವೈದ್ಯರು ಸಲಹೆ ನೀಡಿದರು.’

ಶವಸಂಸ್ಕಾರಕ್ಕೆ ₹30 ಸಾವಿರ ಪ್ಯಾಕೇಜ್!

‘ಆಂಬುಲೆನ್ಸ್‌ನಲ್ಲಿ ಮೃತದೇಹ ಒಯ್ದು ಪೂಜಾರಿಯ ಕರೆಸಿ ಅಂತಿಮ ಕಾರ್ಯ ನಡೆಸಲು ₹ 30 ಸಾವಿರ ಪ್ಯಾಕೇಜ್ ಎಂದು ಒಬ್ಬರು ತಿಳಿಸಿದರು. ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ದೇಹ ಇಡಲು ₹2 ಸಾವಿರ ಪಡೆದರು. ದೇಹ ಎತ್ತಿ ಇಡಲಿಕ್ಕೆ ನಾಲ್ಕು ಮಂದಿಗೆ ತಲಾ ₹2 ಸಾವಿರ ಕೊಟ್ಟಿದ್ದೇನೆ. ಹಣ ಸಾಗಿರುವ ವಾಹನಕ್ಕೆ ಕರೆ ಮಾಡಿದರೂ ಸಿಗಲಿಲ್ಲ. ಬಳಿಕ ಒಂದು ವಾಹನ ಸಿಕ್ಕಿತು. ಮಾಗಡಿ ರಸ್ತೆ ಬಳಿಯ ತಾವರೆಕೆರೆಯಲ್ಲಿ ತಂದೆಯ ಅಂತ್ಯಕ್ರಿಯೆ ನಡೆಸಲು ಒಯ್ದೆವು. ಅಲ್ಲಿ ವಾಹನದ ಚಾಲಕ ₹ 4 ಸಾವಿರ ಪಡೆದ.

ಸ್ಮಶಾನದಲ್ಲಿ ನೋಡಿದರೆ ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆ ಉಚಿತ ಎಂದು ಬರೆದಿತ್ತು. ಈ ಬಗ್ಗೆ ಗಲಾಟೆ ಮಾಡಿದರೂ ಪ್ರಯೋಜನವಾಗಲಿಲ್ಲ’ ಎಂದು ಚೇತನ್ ಬೇಸರ ತೋಡಿಕೊಂಡರು.

ಪ್ರಜಾವಾಣಿ ವಿಶೇಷ

ಮೂರು ಬಿ.ಯು.ನಂಬರ್ ಕೊಟ್ಟರು!: ಮೇ 3ರಂದು ಮಧ್ಯಾಹ್ನ ತಂದೆಗೆ ಕೋವಿಡ್ ದೃಢಪಟ್ಟ ವರದಿ ಬಂತು. ಸಂಜೆ 6 ಗಂಟೆಯಾದರೂ ಬಿ.ಯು. ನಂಬರ್ ಸಿಗಲಿಲ್ಲ. ಮರುದಿನ ಯಾರೋ ಕರೆ ಮಾಡಿ ‘ಮಂಜುನಾಥ ಆರ್.’ ಹೆಸರಿನ ಬಿ.ಯು ನಂಬರ್ ಕೊಟ್ಟರು. ಅದು ನನ್ನಪ್ಪನ ಹೆಸರಲ್ಲ ಎಂದರೂ ಕೇಳಲಿಲ್ಲ. ಆ ನಂಬರ್ ಇಟ್ಟುಕೊಂಡು ಹಾಸಿಗೆ ಹುಡುಕುತ್ತಿದ್ದಾಗ ಇನ್ನೊಬ್ಬರು ಕರೆ ಮಾಡಿ ‘ಮಂಜುನಾಥ್ ಎಲ್’ ಅವರ ಬಿ.ಯು ನಂಬರ್ ಕೊಟ್ಟರು. ಅದು ನನ್ನ ತಂದೆಯದಲ್ಲ ಎಂದರೂ ಕೇಳಲಿಲ್ಲ. ಬಳಿಕ ಆಸ್ಪತ್ರೆಯವರಲ್ಲಿ ಕೇಳಿದಾಗ, ‘ಅವೆರಡೂ ಅಲ್ಲ. ನಿಮ್ಮ ತಂದೆಯ ಬಿ.ಯು ನಂಬರ್ ಇದು’ ಎಂದು ಮತ್ತೊಂದು ನಂಬರ್ ಕೊಟ್ಟರು.’

‘ಅಷ್ಟರಲ್ಲಿ ತಂದೆಯ ರಕ್ತದಲ್ಲಿ ಆಮ್ಲಜನಕದ ಪ್ರಮಾಣ ಶೇ 65ಕ್ಕೆ ಇಳಿದಿತ್ತು. ಎಲ್ಲೂ ಐಸಿಯು ಹಾಸಿಗೆ ಸಿಗಲೇ ಇಲ್ಲ. ಮೇ 4ರಂದು ಸಂಜೆ ನಾರಾಯಣ ಹೃದಯಾಲಯದಲ್ಲಿ ಒಂದು ಹಾಸಿಗೆ ಹಂಚಿಕೆ ಆಯಿತು. ಆಂಬುಲೆನ್ಸ್‌ಗೆ (108) ಕರೆ ಮಾಡಿದರೆ ಅವರು ಸ್ವೀಕರಿಸಲೇ ಇಲ್ಲ. ಬಳಿಕ ಖಾಸಗಿ ಆಂಬುಲೆನ್ಸ್‌ನಲ್ಲಿ ನಾರಾಯಣ ಹೃದಯಾಲಯಕ್ಕೆ ರಾತ್ರಿ 10 ಗಂಟೆಗೆ ತಲುಪಿದೆವು. ದಾಖಲಿಸಿಕೊಳ್ಳಲು ಒಪ್ಪದ ಅವರು ಸರ್ವರ್ ಸ್ಲೋ ಇದೆ, ನಾಳೆ ಬನ್ನಿ ಎಂದರು. ತಂದೆಯ ದೇಹಸ್ಥಿತಿ ಗಂಭೀರವಾಗಿದೆ. ದಯವಿಟ್ಟು ಪರೀಕ್ಷಿಸಿ ಎಂದಾಗ ವೈದ್ಯರೊಬ್ಬರು ಬಂದು ತಪಾಸಣೆ ನಡೆಸಿದರು. ರಕ್ತದಲ್ಲಿ ಆಮ್ಲಜನಕದ ಮಟ್ಟ 65ಕ್ಕೆ ಇಳಿದಿದೆ. ಇಲ್ಲಿ ದಾಖಲಿಸಲು ಆಗದು. ಬೇರೆಡೆ ಕರೆದುಕೊಂಡು ಹೋಗಿ ಎಂದರು. ಮತ್ತೆ ಆನೇಕಲ್‌ನ ಗಂಗಾ ಆಸ್ಪತ್ರೆಗೆ ಮರಳಿ ಕರೆದೊಯ್ದೆವು. ಪುಣ್ಯಕ್ಕೆ ಅಲ್ಲಿ ಒಂದು ಐಸಿಯು ಖಾಲಿ ಇತ್ತು. ಅವರು ಆಮ್ಲಜನಕ ಒದಗಿಸಿದರು. ಅಷ್ಟರಲ್ಲಿ ರಾತ್ರಿ 12 ಗಂಟೆ ಆಗಿತ್ತು. ಆದರೆ, ಮೇ 5ರ ಮಧ್ಯರಾತ್ರಿ 2.30ಕ್ಕೆ ತಂದೆ ತೀರಿಕೊಂಡರು’ ಎಂದು ಚೇತನ್ ನಿಟ್ಟುಸಿರು ಬಿಟ್ಟರು.

ಸಂಕ್ಷಿಪ್ತ ಸುದ್ದಿ

ಉದ್ಯಮಿ ಮೆಹುಲ್ ಚೋಕ್ಸಿ ನಾಪತ್ತೆ!

ನವದೆಹಲಿ (ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ವಂಚಿಸಿ ಭಾರತದಿಂದ ಪರಾರಿಯಾಗಿರುವ ವಜ್ರದ ವ್ಯಾಪಾರಿ ಮೆಹುಲ್ ಚೋಕ್ಸಿ ಈಗ ಆಂಟಿಗುವಾ ಮತ್ತು ಬಾರ್ಬುಡಾದಿಂದಲೂ ನಾಪತ್ತೆಯಾಗಿದ್ದಾನೆ! ಚೋಕ್ಸಿಯ ಪತ್ತೆಗೆ ಪೊಲೀಸರು ಭಾನುವಾರದಿಂದ ಶೋಧ ಆರಂಭಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

‘ಆಂಟಿಗುವಾನ್ಯೂಸ್‌ರೂಮ್’, ಪೊಲೀಸ್ ಆಯುಕ್ತ ಅಟ್ಲೀ ರೊಡ್ನಿ ಅವರನ್ನು ಉಲ್ಲೇಖಿಸಿ, ‘ಭಾರತೀಯ ಉದ್ಯಮಿ ಮೆಹುಲ್ ಚೋಕ್ಸಿ ಇರುವ ಸ್ಥಳವನ್ನು ಪೊಲೀಸರು ಶೋಧಿಸುತ್ತಿದ್ದಾರೆ’ ಎಂದು ಮಂಗಳವಾರ ವರದಿ ಮಾಡಿದೆ.

ಕೆರಿಬಿಯನ್ ದ್ವೀಪ ರಾಷ್ಟ್ರವಾದ ಆಂಟಿಗುವಾ ಮತ್ತು ಬಾರ್ಬುಡಾದ ಪೌರತ್ವ ಪಡೆದಿರುವ ಚೋಕ್ಸಿ ದ್ವೀಪದ ದಕ್ಷಿಣ ಪ್ರದೇಶದಲ್ಲಿ ಭಾನುವಾರ ತನ್ನ ವಾಹನದಲ್ಲಿ ಕಂಡಿದ್ದ. ನಂತರ, ಆತನ ವಾಹನ ಮಾತ್ರ ಪತ್ತೆಯಾಗಿದೆ. ಚೋಕ್ಸಿಯ ಸುಳಿವು ಸಿಕ್ಕಿಲ್ಲ ಎಂದು ವರದಿಗಳು ತಿಳಿಸಿವೆ.

ಚೋಕ್ಸಿ 2017ರಲ್ಲಿ ಆಂಟಿಗುವಾ ಮತ್ತು ಬಾರ್ಬುಡಾದ ಪೌರತ್ವವನ್ನು ಪಡೆದುಕೊಂಡಿದ್ದಾರೆ.

‘ಹಳ್ಳಿಗಳಲ್ಲಿ ಮೈಕ್ರೋ ಕಂಟೇನ್‌ಮೆಂಟ್ ವಲಯ’

ಬೆಂಗಳೂರು: ‘ಕೋವಿಡ್ ಪ್ರಕರಣಗಳು ಹೆಚ್ಚಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಮೈಕ್ರೋ ಕಂಟೇನ್‌ಮೆಂಟ್ ವಲಯ ನಿರ್ಮಾಣ ಮಾಡಲಾಗುವುದು’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

‘ಮೈಕ್ರೋ ಕಂಟೇನ್‌ಮೆಂಟ್ ವಲಯ ಸ್ಥಾಪಿಸುವ ಜವಾಬ್ದಾರಿಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಆರೋಗ್ಯ ಅಧಿಕಾರಿಗಳು ಮತ್ತು ಪೊಲೀಸರಿಗೆ ವಹಿಸಲಾಗಿದೆ’ ಎಂದರು.

ಬುದ್ಧದೇವ್ ಭಟ್ಟಾಚಾರ್ಯ ಸ್ಥಿತಿ ಗಂಭೀರ

ಕೋಲ್ಕತ್ತ (ಪಿಟಿಐ): ಕಳೆದ ವಾರ ಕೋವಿಡ್–19 ದೃಢಪಟ್ಟಿದ್ದ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಲಸಿಕೆ ಪಡೆದ ವಿಶ್ವದ ಮೊದಲ ವ್ಯಕ್ತಿ ಸಾವು

ಲಂಡನ್ (ಪಿಟಿಐ): ಕೋವಿಡ್–19ಗೆ ಲಸಿಕೆ ಪಡೆದ ವಿಶ್ವದ ಮೊದಲ ವ್ಯಕ್ತಿ ಬ್ರಿಟನ್‌ನ ವಿಲಿಯಂ ಷೇಕ್ಸ್‌ಪಿಯರ್ (81) ಎಂಬುವರು, ಆರೋಗ್ಯದ ಇತರ ಸಮಸ್ಯೆಗಳಿಂದ ಬಳಲಿ ಮೃತಪಟ್ಟಿದ್ದಾರೆ ಎಂದು ಬ್ರಿಟಿಷ್ ಮಾಧ್ಯಮ ಮಂಗಳವಾರ ವರದಿ ಮಾಡಿದೆ. ಅವರು ಫೈಜರ್-ಬಯೋಟೆಕ್ ಲಸಿಕೆಯನ್ನು ಪಡೆದಿದ್ದರು.

ಜನಸಾಮಾನ್ಯರಿಗೆ ದುಬಾರಿಯಾದ ಲಸಿಕೆ

ಒಂದನೇ ಪುಟದಿಂದ...

ಇದರಲ್ಲಿ ₹ 150 ಸರ್ಕಾರಕ್ಕೆ ಪಾವತಿಸಿ, ₹ 100 ಸೇವಾ ಶುಲ್ಕದ ರೂಪದಲ್ಲಿ ಪಡೆಯಲು ಅವಕಾಶ ನೀಡಲಾಗಿದೆ. ಆದರೆ, ಈಗ ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿಯೇ ದಾಸ್ತಾನು ಇರದ ಕಾರಣ ಖಾಸಗಿ ಕೇಂದ್ರಗಳಿಗೆ ನಿಗದಿತ ಪ್ರಮಾಣದಲ್ಲಿ ಲಸಿಕೆ ಪೂರೈಕೆಯಾಗುತ್ತಿಲ್ಲ.

ನೋಂದಾಯಿಸಿದರೂ ಸಿಗುತ್ತಿಲ್ಲ: ಮೇ 1ರಿಂದ ಖಾಸಗಿ ಲಸಿಕಾ ಕೇಂದ್ರಗಳಲ್ಲಿ 18ರಿಂದ 44 ವರ್ಷದವರಿಗೆ ಲಸಿಕೆ ವಿತರಣೆ ಪ್ರಾರಂಭಿಸಲಾಗಿದೆ. ಇದಕ್ಕಾಗಿ ಲಸಿಕೆ ಉತ್ಪಾದನಾ ಕಂಪನಿಗಳಿಂದ ಕೆಲ ಖಾಸಗಿ ಆಸ್ಪತ್ರೆಗಳು ಮಾತ್ರ ಲಸಿಕೆ ಖರೀದಿಸಿ, ನೀಡುತ್ತಿವೆ. ಲಸಿಕೆ ಪಡೆದುಕೊಳ್ಳುವವರು ಮುಂಚಿತವಾಗಿ ‘ಕೋವಿನ್’ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿಕೊಂಡು ಕಾಯಬೇಕಿದೆ. ಲಸಿಕೆ ಪೂರೈಕೆಯಲ್ಲಿ ವ್ಯತ್ಯಾಸವಾಗುತ್ತಿರುವುದರಿಂದ ಈಗಾಗಲೇ ಹೆಸರು ನೋಂದಾಯಿಸಿದವರಿಗೆ ಕೂಡ ನಿಗದಿತ ದಿನಾಂಕದಂದು ಲಸಿಕೆ ದೊರೆಯುತ್ತಿಲ್ಲ. ಲಸಿಕೆ ಬಂದೊಡನೆ ದೂರವಾಣಿ ಸಂಖ್ಯೆಗೆ ಸಂದೇಶ ರವಾನಿಸುವುದಾಗಿ ಆಸ್ಪತ್ರೆಗಳು ತಿಳಿಸುತ್ತಿವೆ.

‘ಮುಂಚಿತವಾಗಿ ಹೆಸರು ನೋಂದಾಯಿಸಿದವರಿಗೆ ಮಾತ್ರ ಕಂಪನಿಗಳಿಂದ ನೇರವಾಗಿ ಖರೀದಿಸಿದ ಲಸಿಕೆಯನ್ನು ಒದಗಿಸಲಾಗುತ್ತಿದೆ. ‘ಕೋವಿಶೀಲ್ಡ್’ ಪ್ರತಿ ಡೋಸ್‌ಗೆ ₹ 850 ಹಾಗೂ ‘ಕೋವ್ಯಾಕ್ಸಿನ್’ ₹ 1,250 ಪಡೆದುಕೊಳ್ಳುತ್ತಿದ್ದೇವೆ. ಇದಕ್ಕಿಂತ ಹೆಚ್ಚಿನ ದರ ಪಡೆಯುತ್ತಿಲ್ಲ’ ಎಂದು ಅಪೋಲೊ ಆಸ್ಪತ್ರೆಗಳ ಸಮೂಹ ತಿಳಿಸಿದೆ.

ಕಾಳಸಂತೆಗೆ ಕೋವಿಡ್ ಲಸಿಕೆ?

ಕೋವಿಡ್ ಎರಡನೇ ಅಲೆಯಲ್ಲಿ ಮಧ್ಯ ವಯಸ್ಕರು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗಿ, ಗಂಭೀರವಾಗಿ ಅಸ್ವಸ್ಥರಾಗುತ್ತಿದ್ದಾರೆ. ಇದರಿಂದಾಗಿ ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ 18ರಿಂದ 44 ವರ್ಷದವರೆಗಿನವರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಲಭ್ಯತೆ ಬಗ್ಗೆ ವಿಚಾರಿಸಲಾರಂಭಿಸಿದ್ದಾರೆ. ನೋಂದಣಿ ಮಾಡಿಕೊಂಡವರಿಗೆ ಲಭ್ಯತೆ ಅನುಸಾರ ಖಾಸಗಿ ಆಸ್ಪತ್ರೆಗಳು ‘ಕೋವಿಶೀಲ್ಡ್’ ಲಸಿಕೆ ನೀಡುತ್ತಿವೆ.

45 ವರ್ಷ ಮೇಲ್ಪಟ್ಟವರಲ್ಲಿ ಇನ್ನೂ ಅರ್ಧದಷ್ಟು ಮಂದಿ ಲಸಿಕೆ ಪಡೆದುಕೊಳ್ಳಬೇಕಿದೆ. ಕೇಂದ್ರ ಸರ್ಕಾರವು ಖಾಸಗಿಯಾಗಿ ಖರೀದಿಸಿ, ವಿತರಿಸುವ ಲಸಿಕೆಗೆ ದರ ನಿಗದಿಪಡಿಸಿಲ್ಲ. ಇದರಿಂದಾಗಿ ಲಸಿಕೆಯು ‘ರೆಮ್‌ಡಿಸಿವಿರ್’ ಔಷಧದಂತೆ ಕಾಳಸಂತೆಯಲ್ಲಿ ಮಾರಾಟವಾಗುವ ಸಾಧ್ಯತೆ ಬಗ್ಗೆ ಸಾರ್ವಜನಿಕ ವಲಯದಲ್ಲಿ ಕಳವಳ ವ್ಯಕ್ತವಾಗಿದೆ.

‘44 ವರ್ಷ ವಯೋಮಿತಿಯೊಳಗಡೆ ಬರುವ ನಾನು, ಲಸಿಕೆಗಾಗಿ ವಿವಿಧ ಖಾಸಗಿ ಆಸ್ಪತ್ರೆಗಳನ್ನು ವಿಚಾರಿಸಿದೆ. ಕೆಲವೆಡೆ ಸದ್ಯ ಲಭ್ಯವಿಲ್ಲ ಎಂದು ತಿಳಿಸಿದರು. ಒಂದೊಂದು ಆಸ್ಪತ್ರೆಯವರು ಒಂದೊಂದು ದರ ಹೇಳುತ್ತಿದ್ದಾರೆ. ಅಂತಿಮವಾಗಿ ಜಯನಗರದ ಕ್ಲಿನಿಕ್ ಒಂದರಲ್ಲಿ ₹ 1,350 ಪಾವತಿಸಿ, ಲಸಿಕೆ ಪಡೆದುಕೊಂಡೆ. ಸರ್ಕಾರ ದರ ನಿಗದಿ ಪಡಿಸಿ, ಪಾರದರ್ಶಕ ವ್ಯವಸ್ಥೆ ರೂಪಿಸಬೇಕು’ ಎಂದು ವಿಜಯನಗರದ ನಿವಾಸಿಯೊಬ್ಬರು ತಿಳಿಸಿದರು.

ಪ್ರಮುಖ ಆಸ್ಪತ್ರೆಗಳಲ್ಲಿ ‘ಕೋವ್ಯಾಕ್ಸಿನ್’ ದರ

ಆಸ್ಪತ್ರೆ	ಲಸಿಕೆ ₹ಗಳಲ್ಲಿ (ಒಂದು ಡೋಸ್)
ಸುಗುಣ	1,250
ಅಪೋಲೊ ಕ್ರೆಡಲ್	1,250
ಮಣಿಪಾಲ್	1,250
ಕ್ಲೌಡ್‌ನೈನ್	1,250
ಅಪೋಲೊ	1,250
ಮಣಿಪಾಲ್ ಕ್ಲಿನಿಕ್	1,350
ಅಪೋಲೊ ಕ್ಲಿನಿಕ್	1,400

ಪ್ರಮುಖ ಆಸ್ಪತ್ರೆಗಳಲ್ಲಿ ‘ಕೋವಿಶೀಲ್ಡ್’ ದರ

ಆಸ್ಪತ್ರೆ	ದರ ₹ಗಳಲ್ಲಿ (ಒಂದು ಡೋಸ್)
ಕೊಲಂಬಿಯಾ ಏಷ್ಯಾ	850
ಅಪೋಲೊ ಕ್ಲಿನಿಕ್, ಬೆಳ್ಳಂದೂರು	1,000
ಅಪೋಲೊ	850
ಸೇಂಟ್ ಫಿಲೋಮಿನಾ	1,000
ಮಲ್ಲಿಗೆ	1,050
ಫೋರ್ಟಿಸ್	850
ಸೇಂಟ್ ಥೆರೆಸಾ	850
ವಾಸವಿ	900
ಕಣ್ವ ಡಯಾಗ್ನಾಸ್ಟಿಕ್	1,000
ರಾಮಯ್ಯ ಮೆಮೋರಿಯಲ್ ಆಸ್ಪತ್ರೆ	850
ಸೇಂಟ್ ಮಾರ್ಥಾಸ್	850
ಅಪೋಲೊ ಕ್ಲಿನಿಕ್, ಎಚ್‌ಎಸ್‌ಆರ್ ಬಡಾವಣೆ	1,000
ಸ್ಪರ್ಶ	850

ತೇಜಸ್ವಿ ಸೂರ್ಯ ನಡೆಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಸಿಕೆಗೆ ಬೇಡಿಕೆಗೆ ಹೆಚ್ಚುತ್ತಿದ್ದಂತೆಯೇ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ವಾಸವಿ ಆಸ್ಪತ್ರೆಯ ಸಹಯೋಗದೊಂದಿಗೆ ಜಯನಗರ 5ನೇ ಬ್ಲಾಕ್‌ನಲ್ಲಿರುವ ಶಾಲಿನಿ ಮೈದಾನದಲ್ಲಿ ಜುಲೈವರೆಗೆ ಲಸಿಕೆ ವಿತರಣಾ ಅಭಿಯಾನ ಹಮ್ಮಿಕೊಂಡಿದ್ದಾರೆ. ಇಲ್ಲಿ ₹ 900ಕ್ಕೆ ಕೋವಿಶೀಲ್ಡ್ ಲಸಿಕೆ ಒದಗಿಸಲಾಗುತ್ತದೆ. ಉಚಿತವಾಗಿ ಲಸಿಕೆ ಕೊಡಿಸುವ ಬದಲು ಸಂಸದರು ಲಸಿಕೆ ಮಾರಾಟಕ್ಕೆ ಮಾರುಕಟ್ಟೆ ಒದಗಿಸುತ್ತಿದ್ದಾರೆ ಎಂಬ ಟೀಕೆಯೂ ವ್ಯಕ್ತವಾಗಿದೆ.

‘ಈಗಾಗಲೇ ನೋಂದಣಿ ಪ್ರಾರಂಭ ಮಾಡಿದ್ದು, 18 ವರ್ಷ ಮೇಲ್ಪಟ್ಟವರಿಗೆ ನೀಡಲು 15 ಸಾವಿರ ಲಸಿಕೆ ಲಭ್ಯ ಇದೆ’ ಎಂದು ಆಸ್ಪತ್ರೆ ಹೇಳಿಕೊಂಡಿದೆ.

‘ಸಂಸದರ ಸಹಯೋಗದಲ್ಲಿ ನಡೆಯುತ್ತಿರುವ ಲಸಿಕೆ ವಿತರಣೆ ಅಭಿಯಾನದಲ್ಲಿ ಪ್ರತಿ ಡೋಸ್‌ಗೆ ₹ 900 ಪಾವತಿಸಬೇಕು ಎನ್ನಲಾಗಿದೆ. ಖಾಸಗಿ ಆಸ್ಪತ್ರೆಗಳಿಗೆ ಅಧಿಕ ಶುಲ್ಕ ಪಾವತಿಸಿ, ಎಲ್ಲರಿಗೂ ಲಸಿಕೆ ಪಡೆಯಲು ಸಾಧ್ಯವಾಗುವುದಿಲ್ಲ. ತಮ್ಮ ಕ್ಷೇತ್ರದ ಜನರ ಬಗ್ಗೆ ಕಾಳಜಿ ಇದ್ದಲ್ಲಿ ಉಚಿತವಾಗಿ ಲಸಿಕೆ ಒದಗಿಸಬೇಕು.

ತೇಜಸ್ವಿ ಸೂರ್ಯ

ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ದೊರೆಯುತ್ತಿಲ್ಲ. ಆದರೆ, ಖಾಸಗಿ ಕೇಂದ್ರಗಳಿಗೆ ಲಸಿಕೆ ಪೂರೈಕೆಯಾಗುತ್ತಿದೆ. ಇದು ಹೇಗೆ ಸಾಧ್ಯ’ ಎಂದು ಜನಾಧಿಕಾರ ಸಂಘರ್ಷ ಪರಿಷತ್‌ನ ಸಹ ಅಧ್ಯಕ್ಷ ಆದರ್ಶ್ ಅಯ್ಯರ್ ಪ್ರಶ್ನಿಸಿದರು.

‘ಖಾಸಗಿ ಕ್ಷೇತ್ರದಲ್ಲಿ ಈ ರೀತಿ ಲಸಿಕೆಗಳನ್ನು ನೀಡುವುದು ಸಂವಿಧಾನದ ಅನುಚ್ಛೇದ 14ರ ಸ್ಪಷ್ಟ ಉಲ್ಲಂಘನೆ. ಸಮಾಜದಲ್ಲಿ ತಾರತಮ್ಯ ಇರಬಾರದು ಎಂದು 15ನೇ ಅನುಚ್ಛೇದ ಹೇಳುತ್ತದೆ. ಸಂಸದರ ಈ ನಡೆ ಸಂವಿಧಾನ ವಿರೋಧಿ’ ಎಂದು ವಕೀಲ ವಿನಯ್ ಶ್ರೀನಿವಾಸ್ ಪ್ರತಿಪಾದಿಸಿದರು.

‘ಪೋಲಿಯೊ ಲಸಿಕೆ ಸೇರಿದಂತೆ ಈ ಹಿಂದೆ ಯಾವುದೇ ಲಸಿಕೆಗೆ ಹಣ ವಸೂಲಿ ಮಾಡಿಲ್ಲ. ಸಚಿವರು ಕ್ಷೇತ್ರದ ಜನರಿಗೆ ಉಚಿತವಾಗಿ ಲಸಿಕೆ ನೀಡಲು ಆದ್ಯತೆ ನೀಡಬೇಕಿತ್ತು. ಅದರ ಬದಲು ದುಬಾರಿ ದರದಲ್ಲಿ ಶ್ರೀಮಂತರಿಗೆ ಸೌಲಭ್ಯ ಒದಗಿಸಲು ಮುಂದಾಗಿದ್ದಾರೆ. ಕ್ಷೇತ್ರದ ಒಬ್ಬನೇ ಒಬ್ಬ ಕೊಳೆಗೇರಿ ನಿವಾಸಿಗೆ ಸಂಸದರು ಈವರೆಗೆ ಲಸಿಕೆ ಕೊಡಿಸಿಲ್ಲ. ಅದರ ಕೊರತೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒಂದೇ ಒಂದು ಪತ್ರ ಬರೆದಿಲ್ಲ. ಇದು ಸಂಸದರ ಘೋರ ವೈಫಲ್ಯ. ಅವರು ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಬೇಕು’ ಎಂದು ಅವರು ಆಗ್ರಹಿಸಿದರು.

‘ಜನರು ಜೀವ ಉಳಿಸಲು ಉಚಿತವಾಗಿ ಲಸಿಕೆ ನೀಡಬೇಕು ಎಂದು ಹೈಕೋರ್ಟ್ ಸಹ ಹೇಳಿದೆ. ಆದರೆ, ಸಂಸದರು ಖಾಸಗಿ ಆಸ್ಪತ್ರೆ ಜತೆಗೆ ಸಹಯೋಗ ಮಾಡಿ ಜನರ ಸುಲಿಗೆ ಮಾಡಲು ಅವಕಾಶ ಕಲ್ಪಿಸಿದ್ದಾರೆ’ ಎಂದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ತೇಜಸ್ವಿ ಸೂರ್ಯ ಅವರು ದೂರವಾಣಿ ಸಂಪರ್ಕಕ್ಕೆ ಸಿಗಲಿಲ್ಲ.

ಡಬ್ಲ್ಯುಎಚ್‌ಒನಿಂದ 100 ಆಮ್ಲಜನಕ ಸಾಂದ್ರಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ನೆರವಿನ ಹಸ್ತ ಚಾಚಿರುವ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) 100 ಆಮ್ಲಜನಕ ಸಾಂದ್ರಕಗಳನ್ನು ರಾಜ್ಯ ಸರ್ಕಾರಕ್ಕೆ ದೇಣಿಗೆಯಾಗಿ ನೀಡಿದೆ.

ಮುಖ್ಯಮಂತ್ರಿಯವರ ನಿವಾಸ ಕಾವೇರಿಯಲ್ಲಿ ಮಂಗಳವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಅಧಿಕಾರಿಗಳ ನಿಯೋಗವು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಆಮ್ಲಜನಕ ಸಾಂದ್ರಕಗಳನ್ನು ಹಸ್ತಾಂತರಿಸಿತು.

ನಾಯಂಡಹಳ್ಳಿ ಮೆಟ್ರೊ ನಿಲ್ದಾಣ ಬಳಿ ಮಂಗಳವಾರ ಸಂಜೆ ಸುರಿಯುತ್ತಿದ್ದ ಮಳೆಯಲ್ಲಿ ಯುವತಿಯರಿಬ್ಬರು ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ/ ರಂಜು ಪಿ

ಗಾಳಿ ಸಹಿತ ಅಬ್ಬರದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ಸಂಜೆ ಗಾಳಿ ಸಹಿತ ಅಬ್ಬರದ ಮಳೆಯಾಗಿದ್ದು, ಹಲವು ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು.

ಕೆಲ ದಿನಗಳಿಂದ ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಬಿಡುವು ಕೊಟ್ಟು ಮಳೆ ಸುರಿಯುತ್ತಿತ್ತು. ಆದರೆ, ಮಂಗಳವಾರ ಸಂಜೆ ಮಳೆ ಆರ್ಭಟಿಸಿ ಸುರಿಯಿತು.

ಬಸವೇಶ್ವರನಗರ, ರಾಜಾಜಿನಗರ, ವಿಜಯನಗರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ವಸಂತನಗರ, ಪೀಣ್ಯ, ಯಶವಂತಪುರ, ಕೋರಮಂಗಲ, ಬಸವನಗುಡಿ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಜೋರು ಮಳೆ ಇತ್ತು.

ಗಾಳಿಯೂ ವೇಗವಾಗಿ ಬೀಸಿದ್ದರಿಂದ ಕೆಲವು ಕಡೆ ಮರಗಳ ಕೊಂಬೆಗಳು ಕತ್ತರಿಸಿ ಬಿದ್ದಿದ್ದವು. ಮಳೆಯಿಂದ ಬಿದ್ದ ನೀರು ರಸ್ತೆಯಲ್ಲಿ 2 ಅಡಿಯಷ್ಟು ಹರಿಯಿತು. ಕಾಲುವೆಗಳಲ್ಲಿ ನೀರು ತುಂಬಿ ಹರಿದು, ತ್ಯಾಜ್ಯವೆಲ್ಲ ರಸ್ತೆಗೆ ಬಂದು ಬಿದ್ದಿತ್ತು.

ಲಾಕ್‌ಡೌನ್ ವೇಳೆ ತುರ್ತು ಸೇವಾ ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶವಿದೆ. ಹೀಗಾಗಿ, ನಗರದಲ್ಲಿ ಜನರ ಓಡಾಟ ಕಡಿಮೆ ಇತ್ತು. ಮೆಜೆಸ್ಟಿಕ್, ಮಲ್ಲೇಶ್ವರ, ಮೇಖ್ರಿ ವೃತ್ತದಲ್ಲಿ ಕೆಳ ಸೇತುವೆಗಳಲ್ಲಿ ನೀರು ಹರಿಯಿತು. ಕೆಲ ವಾಹನಗಳು ಅದರಲ್ಲೇ ಸಂಚರಿಸಿದವು.

ಹಾರಿಹೋಗಿದ್ದ ಬ್ಯಾರಿಕೇಡ್: ವಾಹನಗಳ ತಪಾಸಣೆಗಾಗಿ ಕೆಲ ರಸ್ತೆಯಲ್ಲಿ ನಿಲ್ಲಿಸಲಾಗಿದ್ದ ಬ್ಯಾರಿಕೇಡ್‌ಗಳು ಗಾಳಿ, ಮಳೆಗೆ ಹಾರಿಹೋಗಿ ಬಿದ್ದಿದ್ದವು.

ಚೆಕ್‌ಪೋಸ್ಟ್‌ನಲ್ಲಿದ್ದ ಪೊಲೀಸ್ ಸಿಬ್ಬಂದಿ, ಮಳೆ ಬರುತ್ತಿದ್ದಂತೆ ಸುರಕ್ಷಿತ ಸ್ಥಳಕ್ಕೆ ಹೋದರು. ಮಳೆ ಕಡಿಮೆಯಾದ ನಂತರವೇ ಬ್ಯಾರಿಕೇಡ್‌ಗಳನ್ನು ತಂದು ಮೊದಲಿದ್ದ ಸ್ಥಳದಲ್ಲಿ ನಿಲ್ಲಿಸಿದರು. ಕೆಲ ಪೊಲೀಸರು, ಸುರಿವ ಮಳೆಯಲ್ಲೇ ರಸ್ತೆಗೆ ಇಳಿದು ನೀರು ಹರಿದುಹೋಗಲು ದಾರಿ ಮಾಡಿಕೊಟ್ಟರು.

‘ಚಂಡಮಾರುತದ ಪರಿಣಾಮದಿಂದಾಗಿ ನಗರದಲ್ಲಿ ಗಾಳಿ ಸಹಿತ ಜೋರು ಮಳೆಯಾಗಿದೆ. ಕೆಳಸೇತುವೆಯಲ್ಲಿ ನೀರು ನಿಂತಿದ್ದ ಹಾಗೂ ರಸ್ತೆಯಲ್ಲಿ ನೀರು ಹರಿಯುತ್ತಿದ್ದ ಬಗ್ಗೆ ದೂರುಗಳು ಬಂದಿದ್ದವು. ಉಳಿದಂತೆ ಬೇರೆ ಯಾವ ದೂರುಗಳು ಬಂದಿಲ್ಲ. ಹಾನಿ ಬಗ್ಗೆ ಬುಧವಾರ ಬೆಳಿಗ್ಗೆ ಮತ್ತಷ್ಟು ದೂರುಗಳು ಬರಬಹುದು’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಲಸಿಕೆಗೆ ಅವಕಾಶ ಕೊಡಿ: ಕಾಂಗ್ರೆಸ್ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷದ ಸಂಸದರು ಮತ್ತು ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಜತೆಗೆ ದೇಣಿಗೆ ಬಳಸಿಕೊಂಡು ₹ 100 ಕೋಟಿಯಲ್ಲಿ ಕೋವಿಡ್ ಲಸಿಕೆ ಖರೀದಿಸಿ, ಜನರಿಗೆ ನೀಡಲು ರಾಜ್ಯ ಸರ್ಕಾರ ಅವಕಾಶ ನೀಡಬೇಕು’ ಎಂದು ಆಗ್ರಹಿಸಿ ಆನ್‌ಲೈನ್‌ನಲ್ಲಿ ‘ಲಸಿಕೆಗೆ ಅವಕಾಶ ಕೊಡಿ’ ಎಂಬ ಅಭಿಯಾನವನ್ನು ಕಾಂಗ್ರೆಸ್ ಆರಂಭಿಸಿದೆ.

‘ಜನರಿಗೆ ಲಸಿಕೆ ನೀಡಲು ಸರ್ಕಾರ ವಿಫಲವಾಗಿದೆ. ಲಸಿಕೆಯ ಮಹತ್ವವನ್ನು ಜನರಿಗೆ ಮನವರಿಕೆ ಮಾಡಿಕೊಡುವುದು ಮತ್ತು ಪಕ್ಷದ ಶಾಸಕರ ನಿಧಿ ಬಳಕೆ ಮಾಡಿಕೊಳ್ಳಲು ಅನುಮತಿ ನೀಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವುದು ಅಭಿಯಾನದ ಉದ್ದೇಶ’ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಖಂಡ್ರೆ, ಶಾಸಕರಾದ ಆರ್. ವಿ. ದೇಶಪಾಂಡೆ, ಪ್ರಿಯಾಂಕ್ ಖರ್ಗೆ, ಎನ್.ಎ. ಹ್ಯಾರಿಸ್, ವಿಧಾನ ಪರಿಷತ್ ಸದಸ್ಯರಾದ ಬಿ.ಕೆ. ಹರಿಪ್ರಸಾದ್, ಮಾಜಿ ಸಂಸದ ವಿ.ಎಸ್. ಉಗ್ರಪ್ಪ, ಮಾಜಿ ಶಾಸಕ ಶರಣ್ ಪ್ರಕಾಶ್ ಪಾಟೀಲ ಅವರು ಈ ಅಭಿಯಾನಕ್ಕೆ ವಿಡಿಯೊ ಸಂದೇಶ ನೀಡಿದ್ದಾರೆ.

ಅಭಿಯಾನದ ಮೊದಲ ದಿನವೇ 20 ಸಾವಿರಕ್ಕೂ ಹೆಚ್ಚು ಮಂದಿ ತಮ್ಮ ಬೆಂಬಲ ಸೂಚಿಸಿ, ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ವಿಡಿಯೊಗಳನ್ನು ಹಂಚಿಕೊಂಡಿದ್ದಾರೆ. ಲಸಿಕೆ ಖರೀದಿಸಿ, ವಿತರಿಸಲು ಕಾಂಗ್ರೆಸ್ ಪಕ್ಷಕ್ಕೆ ಅವಕಾಶ ನೀಡುವಂತೆ ಕೆಲವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

‘₹ 100 ಕೋಟಿಯಲ್ಲಿ ಲಸಿಕೆ ಖರೀದಿಸಿ, ನೀಡಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಪದೇಪದೇ ಮನವಿ ಮಾಡಲಾಗಿದೆ. ಆದರೆ, ಸರ್ಕಾರ ಇನ್ನೂ ಅವಕಾಶ ಕೊಟ್ಟಿಲ್ಲ. ಕೆಪಿಸಿಸಿ ಸದುದ್ದೇಶದಿಂದ, ಜನರ ರಕ್ಷಣೆಗಾಗಿ ಈ ಪ್ರಯತ್ನ ನಡೆಸಿದೆ. ಅತ್ಯಂತ ಪಾರದರ್ಶಕವಾಗಿ ಈ ಕೆಲಸ ಮಾಡುತ್ತೇವೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

‘ಕೋವಿಡ್ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಈ ಮಹಾಮಾರಿಯಿಂದ ಜನರನ್ನು ರಕ್ಷಣೆ ಮಾಡಲು ಲಸಿಕೆ ಹಾಕುವುದು ಅನಿವಾರ್ಯ ಎಂಬುದು ಸರ್ವವಿಧಿತ. ಆದರೆ, ಕೇಂದ್ರ ಸರ್ಕಾರದ ಪಕ್ಷಪಾತ ಧೋರಣೆಯಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಲಸಿಕೆ ಪೂರೈಕೆಯಲ್ಲಿ ಕೊರತೆಯಾಗಿದೆ’ ಎಂದು ತಮ್ಮ ವಿಡಿಯೊ ಸಂದೇಶದಲ್ಲಿ ಸಿದ್ದರಾಮಯ್ಯ ಹೇಳಿದ್ದಾರೆ.

‘ಲೂಟಿ ಮಾಡಲು ಪರವಾನಗಿ ನೀಡಿರುವ ಸರ್ಕಾರ’

ಬೆಂಗಳೂರು: ‘ಕೋವಿಡ್ ಲಸಿಕೆ ದರ ನಿಯಂತ್ರಿಸುವುದು ಅಸಾಧ್ಯ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ. ಅವರ ಮಾತು ರಾಜ್ಯ ಸರ್ಕಾರದ ಅಸಮರ್ಥತೆಗೆ ಸಾಕ್ಷಿಯಂತಿದೆ. ಲಸಿಕೆ ದರ ನಿಯಂತ್ರಣ ಮಾಡಲು ಆಗದಿದ್ದ ಮೇಲೆ ಸರ್ಕಾರ ಏಕಿರಬೇಕು’ ಎಂದು ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ.ಎನ್.ಉಮೇಶ್ ಪ್ರಶ್ನಿಸಿದ್ದಾರೆ.

‘ಎಲ್ಲರಿಗೂ ಲಸಿಕೆಯನ್ನು ಉಚಿತವಾಗಿ ನೀಡುವುದಾಗಿ ಭರವಸೆ ನೀಡಿದ್ದ ಸರ್ಕಾರ, ಈಗ ಕೊರತೆಯ ನೆಪ ಮುಂದಿಟ್ಟು ಜನರನ್ನು ಖಾಸಗಿ ಆಸ್ಪತ್ರೆಗಳಲ್ಲಿನ ಪಾವತಿ ವ್ಯವಸ್ಥೆಗೆ ದೂಡಿದೆ. ಖಾಸಗಿ ಆಸ್ಪತ್ರೆಯವರು ಪ್ರತಿ ಡೋಸ್‌ಗೆ ₹ 1,300 ಹಣ ಪಡೆಯುತ್ತಿದ್ದಾರೆ. ಇದನ್ನು ತಡೆಯೋದು ಕಷ್ಟ ಎಂದು ಸಚಿವರು ಹೇಳುತ್ತಿದ್ದಾರೆ. ಆ ಮೂಲಕ ಸರ್ಕಾರ ಲೂಟಿಗೆ ರಹದಾರಿ ಮಾಡಿಕೊಟ್ಟಿದೆ’ ಎಂದು ಆರೋಪಿಸಿದ್ದಾರೆ.

‘ರಾಜ್ಯ ಸರ್ಕಾರಕ್ಕೆ ಲಭ್ಯವಾಗದ ಲಸಿಕೆ ಖಾಸಗಿ ಆಸ್ಪತ್ರೆಗಳಿಗೆ ಎಲ್ಲಿಂದ ಬರುತ್ತಿದೆ. ಖಾಸಗಿ ಆಸ್ಪತ್ರೆಗಳ ಲಾಬಿಗೆ ಮಣಿಯದೆ ಎಲ್ಲರಿಗೂ ಲಸಿಕೆ ನೀಡಲು ಕ್ರಮ ಕೈಗೊಳ್ಳಬೇಕು’ ಎಂದು ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಎನ್.ಪ್ರತಾಪ ಸಿಂಹ ಒತ್ತಾಯಿಸಿದ್ದಾರೆ.

ಮುಖ್ಯಾಂಶಗಳು

- ಮೊದಲ ದಿನ ಅಭಿಯಾನಕ್ಕೆ 20 ಸಾವಿರಕ್ಕೂ ಹೆಚ್ಚು ಮಂದಿಯ ಬೆಂಬಲ
- ಅತ್ಯಂತ ಪಾರದರ್ಶಕವಾಗಿ ಕೆಲಸ ಮಾಡುತ್ತೇವೆ– ಕಾಂಗ್ರೆಸ್

ಕಪ್ಪು ಶಿಲೀಂಧ್ರ: 8 ಮಂದಿಗೆ ದೃಢ

ಬೆಂಗಳೂರು: ನಗರದಲ್ಲಿ ಮಂಗಳವಾರ ಮತ್ತೆ 8 ಮಂದಿಯಲ್ಲಿ ಕಪ್ಪು ಶಿಲೀಂಧ್ರ ಸೋಂಕು ದೃಢಪಟ್ಟಿದ್ದು, ವಿಕ್ಟೋರಿಯಾ ಹಾಗೂ ಬೌರಿಂಗ್ ಆಸ್ಪತ್ರೆಗೆ ತಲಾ ನಾಲ್ವರು ದಾಖಲಾಗಿದ್ದಾರೆ.

ಸೋಂಕಿತರಾಗಿದ್ದವರಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಬ್ಬರು ಚಿಕಿತ್ಸೆಗೆ ಸ್ಪಂದಿಸದೆಯೇ ಮೃತಪಟ್ಟಿದ್ದಾರೆ. 11 ಮಂದಿ ಚೇತರಿಸಿಕೊಂಡು ಮನೆಗೆ ತೆರಳಿದ್ದಾರೆ. ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದವರಲ್ಲಿ ಇಬ್ಬರು ಗುಣಮುಖರಾಗಿದ್ದಾರೆ. ಸದ್ಯ ವಿಕ್ಟೋರಿಯಾದಲ್ಲಿ 52 ಮಂದಿ ಹಾಗೂ ಬೌರಿಂಗ್ ಆಸ್ಪತ್ರೆಯಲ್ಲಿ 60 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೋವಿಡ್‌ನಿಂದ ಚೇತರಿಸಿಕೊಂಡು ಶಿಲೀಂಧ್ರ ಸೋಂಕಿಗೆ ಒಳಗಾದವರಿಗೆ ಚಿಕಿತ್ಸೆ ಒದಗಿಸಲು ಈ ಮೊದಲು ಬೌರಿಂಗ್ ಆಸ್ಪತ್ರೆಯಲ್ಲಿ 10 ಹಾಸಿಗೆಗಳನ್ನು ಗುರುತಿಸಲಾಗಿತ್ತು. ರೋಗಿಗಳ ಸಂಖ್ಯೆ ಏರಿಕೆ ಕಂಡಂತೆ ಹಾಸಿಗೆಗಳ ಸಂಖ್ಯೆಯನ್ನೂ ಹೆಚ್ಚಳ ಮಾಡಲಾಗಿದೆ. ಈಗ ಹಾಸಿಗೆಗಳ ಸಂಖ್ಯೆ 60ಕ್ಕೆ ಏರಿಕೆಯಾಗಿದೆ.

ಜೂ.1 ರಿಂದ ಕೆಲ ಉದ್ಯಮಗಳಿಗೆ ರಿಯಾಯಿತಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಮುಂದುವರಿಸಿದರೂ, ಜೂನ್ 1 ರಿಂದ ಕೆಲವು ಕೈಗಾರಿಕೆಗಳ ಚಟುವಟಿಕೆಗಳಿಗೆ ಅನುಮತಿ ನೀಡುವ ಬಗ್ಗೆ ಸರ್ಕಾರ ಪರಿಶೀಲನೆ ನಡೆಸಿದೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಸಂಜೆ ನಡೆದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ಮತ್ತು ಇತರ ಕೆಲವು ನಗರಗಳಲ್ಲಿ ವಿದೇಶಗಳಿಗೆ ವಿವಿಧ ಉತ್ಪನ್ನಗಳನ್ನು ರಫ್ತು ಮಾಡುವ ಉದ್ಯಮಗಳಿವೆ. ಲಾಕ್‌ಡೌನ್ ನಿಮಿತ್ತ ಇವುಗಳಲ್ಲಿ ಬಹುತೇಕ ಉದ್ಯಮಗಳು ಕಾರ್ಯ ನಿರ್ವಹಿಸುತ್ತಿಲ್ಲ. ಇದರಿಂದ ರಫ್ತಿನ ಮೇಲೆ ಹೊಡೆತ ಬಿದ್ದಿದೆ. ಇದನ್ನೇ ನೆಪವಾಗಿಟ್ಟುಕೊಂಡು ಅಂತಹ ಕಂಪನಿಗಳನ್ನು ಲಾಕ್‌ಡೌನ್ ನಿರ್ಬಂಧ ಇಲ್ಲದ ದೇಶಗಳಿಗೆ ಸ್ಥಳಾಂತರಿಸಿದರೆ ರಾಜ್ಯಕ್ಕೆ ನಷ್ಟವಾಗುತ್ತದೆ ಎಂಬುದಾಗಿ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು ಎಂದು ಮೂಲಗಳು ಹೇಳಿವೆ.

ಯಾವ ಯಾವ ಉದ್ಯಮಗಳು ಮತ್ತು ಅನಿವಾರ್ಯ ಎನಿಸುವ ವಲಯಗಳಿಗೆ ಲಾಕ್‌ಡೌನ್‌ನಿಂದ ರಿಯಾಯಿತಿ ನೀಡಬೇಕು ಎಂಬ ಬಗ್ಗೆ ಸಲಹೆಗಳನ್ನು ನೀಡುವಂತೆ ಯಡಿಯೂರಪ್ಪ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮಾಂತರ ಪ್ರದೇಶಗಳಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಹಿಂದೇಟು ಹಾಕುತ್ತಿರುವುದು ಗಮನಕ್ಕೆ ಬಂದಿದೆ. ಅವರ ಮನವೊಲಿಸಿ ಪರೀಕ್ಷೆ ಮಾಡಿಸಬೇಕು. ಗ್ರಾಮಗಳಲ್ಲಿ ಮನೆಯಲ್ಲಿ ಪ್ರತ್ಯೇಕ ವಾಸಕ್ಕೆ ಅವಕಾಶ ನೀಡದೇ ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಿಸಲು ವ್ಯವಸ್ಥೆ ಮಾಡಬೇಕು ಎಂದೂ ಯಡಿಯೂರಪ್ಪ ಅಧಿಕಾರಿಗಳಿಗೆ ಸೂಚಿಸಿದರು.

ಬಿಡುಗಡೆ ಶಿಷ್ಟಾಚಾರ: ಕೋವಿಡ್ ರೋಗಿಗಳನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಸಂದರ್ಭದಲ್ಲಿ ಹೊಸ ಮಾದರಿಯ ಶಿಷ್ಟಾಚಾರ ಪಾಲಿಸಲು ಆಸ್ಪತ್ರೆಗಳಿಗೆ ಸೂಚನೆ ನೀಡಬೇಕು ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಲಹೆ ನೀಡಿದರು.





ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

SRI DEVARAJ URS ACADEMY OF HIGHER EDUCATION AND RESEARCH
(A Deemed to be University)
Tamaka, Kolar-563103, Karnataka, India. Phone: 08152-243003, 243009 E-mail: office.hr@sduu.ac.in Website: www.sduu.ac.in

No. SDUAHER/KLR/ADMN/388/2021-22 Date: 20-05-2021

RECRUITMENT NOTICE

Applications are invited from eligible candidates in the prescribed format (available in SDUAHER website) for the following positions:

Sl. No.	Position	No. of Post(s)	Minimum Qualification
1.	Staff Nurse	35	M.Sc./PB.Sc./B.Sc./GNM
2.	Lady X-Ray Technician	01	B.Sc./Diploma in related field
3.	CSSD Technician	05	Diploma in related field

Last date for receipt of applications is 15th June 2021.

Sd/-
Deputy Registrar

ಎಂಆರ್‌ಪಿಎಲ್ ನೇಮಕಾತಿ: ಸ್ಥಳೀಯರ ಕಡೆಗಣನೆ ಆರೋಪ

ಮಂಗಳೂರು: ಎಂಆರ್‌ಪಿಎಲ್‌ನ ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ಸಿಕ್ಕಿಲ್ಲ ಎನ್ನುವ ಆರೋಪ ಕೇಳಿ ಬಂದಿದೆ.

2019 ರಲ್ಲಿ ಎಂಆರ್‌ಪಿಎಲ್ 224 ಹುದ್ದೆಗಳ ನೇಮಕಾತಿಗೆ ರಾಷ್ಟ್ರ ಮಟ್ಟದಲ್ಲಿ ಜಾಹೀರಾತು ನೀಡಿ ಅರ್ಜಿ ಆಹ್ವಾನಿಸಿತ್ತು. ಸ್ಥಳೀಯರಿಗೆ ಆದ್ಯತೆ ನೀಡದ ಈ ನೇಮಕಾತಿ ಪ್ರಕ್ರಿಯೆ ತಡೆಯಬೇಕು ಎಂಬ ಆಗ್ರಹ ಆಗ ಕೇಳಿಬಂದಿತ್ತು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಟಿ.ಎಸ್.ನಾಗಾಭರಣ ಅವರು ಎಂಆರ್‌ಪಿಎಲ್‌ಗೆ ಪತ್ರ ಬರೆದು, 'ನೇಮಕಾತಿ ಆದೇಶವನ್ನು ತಡೆ ಹಿಡಿದು, ಸ್ಥಳೀಯರಿಗೆ ಆದ್ಯತೆ ನೀಡಿ ಪುನರ್‌ಪ್ರಕ್ರಿಯೆ [illegible]' ಎಂದು ಸೂಚಿಸಿದ್ದರು. ನಂತರ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿತ್ತು.

ಇದೀಗ ಪ್ರಕ್ರಿಯೆ ಮತ್ತೆ ಆರಂಭಿಸಲಾಗಿದ್ದು, 184 ಜನರನ್ನು ನೇಮಿಸಲಾಗಿದೆ. ಇವರಲ್ಲಿ ಕರ್ನಾಟಕದ 13 ಜನರಷ್ಟೇ ಇದ್ದು, ಉಳಿದವರು ಹೊರರಾಜ್ಯದವರು ಎನ್ನುವ ದೂರುಗಳು ಕೇಳಿಬಂದಿವೆ.

'ಎಂಆರ್‌ಪಿಎಲ್‌ನ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಸಂಸದ ನಳಿನ್‌ಕುಮಾರ್ ಕಟೀಲ್, ನೇಮಕಾತಿ ಪ್ರಕ್ರಿಯೆ ತಡೆ ಹಿಡಿಯುವಂತೆ ಸೂಚಿಸಿದ್ದರು. ಅದಕ್ಕೆ ಎಂಆರ್‌ಪಿಎಲ್ ಅಧಿಕಾರಿಗಳು ಒಪ್ಪಿಗೆ ನೀಡಿದ್ದಾರೆ' ಎಂದು ಶಾಸಕ ಡಾ.ವೈ. ಭರತ್ ಶೆಟ್ಟಿ ಹೇಳಿದ್ದಾರೆ.

'ನಳಿನ್‌ಕುಮಾರ್ ಕಟೀಲ್ ಹಾಗೂ ಬಿಜೆಪಿ ಶಾಸಕರಿಗೆ ಕಾಳಜಿ, ಪ್ರಾಮಾಣಿಕತೆ ಇದ್ದರೆ, ರಾಜ್ಯ ಸರ್ಕಾರವು ನೇಮಕಾತಿಯಲ್ಲಿ ಸ್ಥಳೀಯರಿಗೆ ಶೇ 80 ಮೀಸಲಾತಿ ಕಡ್ಡಾಯಗೊಳಿಸಿ ಹೊಸ ಕಾಯ್ದೆ ತರಲು ಕ್ರಮ ಕೈಗೊಳ್ಳಲಿ' ಎಂದು ಡಿವೈಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಮುನೀರ್ ಕಾಟಿಪಳ್ಳ ಒತ್ತಾಯಿಸಿದ್ದಾರೆ.

'ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳ ಪ್ರವೇಶ ಪರೀಕ್ಷೆ, ಸಂದರ್ಶನ, ದಾಖಲಾತಿ ಪರಿಶೀಲನೆ ಬಹುತೇಕ ಮುಗಿದಿದೆ. ಆದರೆ, ನೇಮಕಾತಿ ಆದೇಶ ನೀಡಿಲ್ಲ' ಎಂದು ಎಂಆರ್‌ಪಿಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ ರುಡಾಲ್ಫ್ ನೊರೊನ್ಹ ಸ್ಪಷ್ಟಪಡಿಸಿದ್ದಾರೆ.

ಪಾರ್ಸಲ್‌ಗೆ ಅವಕಾಶ ಇದ್ದರೂ ಬೇಡಿಕೆ ಕಡಿಮೆ

ಬಿಯರ್ ವಹಿವಾಟು ಕುಸಿತ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ಮದ್ಯದ ಅಂಗಡಿಗಳನ್ನು ತೆರೆಯಲು ದಿನದ 4 ಗಂಟೆ ಮಾತ್ರ ಅವಕಾಶ ಇದ್ದರೂ ಮದ್ಯ ಮಾರಾಟದಲ್ಲಿ ಗಮನಾರ್ಹ ಬದಲಾವಣೆ ಆಗಿಲ್ಲ. ಬಿಯರ್ ಖರೀದಿಗೆ ಜನ ಹಿಂದೇಟು ಹಾಕುತ್ತಿದ್ದಾರೆ. ಮದ್ಯ ಮಾರಾಟ ಶೇ 10ರಷ್ಟು ಕಡಿಮೆಯಾಗಿದ್ದರೆ, ಬಿಯರ್ ಮಾರಾಟ ಅರ್ಧಕ್ಕರ್ಧ ಕಡಿಮೆಯಾಗಿದೆ.

ಕಳೆದ ಬಾರಿಯ ಲಾಕ್‌ಡೌನ್‌ನಲ್ಲಿ ಮದ್ಯದ ಪಾರ್ಸಲ್ ಸೇವೆಗೆ ಅವಕಾಶ ಇರಲಿಲ್ಲ. ಈ ಬಾರಿ [illegible] ನೀಡಿದ ವಿನಾಯಿತಿ ಪಟ್ಟಿಯಲ್ಲಿ ಮದ್ಯ ಸ್ಥಾನ ಪಡೆದಿದೆ. ಬೆಳಿಗ್ಗೆ 6ರಿಂದ 10 ಗಂಟೆ ತನಕ ಪಾರ್ಸಲ್ ಒಯ್ಯಲು ಅವಕಾಶವಿದೆ.

ವಿಸ್ಕಿ, ಬ್ರಾಂಡಿ, ರಮ್ ಸೇರಿದಂತೆ ಐಎಂಎಲ್(ಮದ್ಯ) ಮಾರಾಟದಲ್ಲಿ ಬದಲಾವಣೆ ಆಗಿಲ್ಲ. ಆದರೆ, ಬಿಯರ್ ಮಾರಾಟ ಶೇ 50ಕ್ಕಿಂತ ಇಳಿದಿದೆ.

ಸಾಮಾನ್ಯ ದಿನಗಳಲ್ಲಿ ನಿತ್ಯ 1 ಲಕ್ಷ 75 ಸಾವಿರ ಬಾಕ್ಸ್‌ನಷ್ಟು ಐಎಂಎಲ್, 75 ಸಾವಿರ ಬಾಕ್ಸ್ ಬಿಯರ್ ಮಾರಾಟವಾಗುತ್ತಿತ್ತು. ಈಗ 1.50 ಲಕ್ಷ ಬಾಕ್ಸ್ ಐಎಂಎಲ್ ಮತ್ತು 35 ಸಾವಿರ ಬಾಕ್ಸ್ ಬಿಯರ್ ಮಾರಾಟವಾಗುತ್ತಿದೆ.

'ಪಬ್, ಬಾರ್ ಆ್ಯಂಡ್ ರೆಸ್ಟೋರೆಂಟ್, ಡ್ಯಾನ್ಸ್ ಬಾರ್‌ಗಳಲ್ಲಿ ಹೆಚ್ಚು ಬಿಯರ್ ಮಾರಾಟವಾಗುತ್ತಿತ್ತು. ಇವುಗಳನ್ನು ತೆರೆಯಲು ಅವಕಾಶ ಇಲ್ಲದ ಕಾರಣ ಬಿಯರ್ ಸೇವನೆ ಕಡಿಮೆಯಾಗಿದೆ. ಅಲ್ಲದೇ ಕೊರೊನಾ ಸೋಂಕಿನ ವಿರುದ್ಧ ಹೋರಾಡಲು ಬಿಯರ್‌ಗಿಂತ ಐಎಂಎಲ್ ಮದ್ಯ ಸೂಕ್ತ ಎಂಬ ನಂಬಿಕೆ ಜನರಲ್ಲಿದೆ. ಈ ಕಾರಣಗಳಿಂದ ಬಿಯರ್ ಮಾರಾಟ ಕುಸಿದಿರಬಹುದು' ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

'ಬಿಯರ್‌ಗಿಂತಲೂ ಐಎಂಎಲ್ ಮೇಲಿನ ಸುಂಕದ ದರ ಹೆಚ್ಚಾಗಿರುವ ಕಾರಣ ಸರ್ಕಾರಕ್ಕೆ ಬರುವ ವರಮಾನದಲ್ಲಿ ಅಷ್ಟೇನು ಬದಲಾವಣೆ ಆಗುವುದಿಲ್ಲ. ಮುಂದಿನ ದಿನಗಳಲ್ಲಿ ವರಮಾನ ಸರಿದೂಗುವ ವಿಶ್ವಾಸ ಇದೆ' ಎನ್ನುತ್ತಾರೆ ಅಧಿಕಾರಿಗಳು.

ಶುಲ್ಕ ರಿಯಾಯಿತಿಗೆ ಮನವಿ

'ಪಾರ್ಸಲ್ ಸೇವೆಗಷ್ಟೇ ಅವಕಾಶ ಇರುವ ಕಾರಣ ಕಟ್ಟಡ ಬಾಡಿಗೆ, ಸಿಬ್ಬಂದಿ ನಿರ್ವಹಣೆ ಸಾಧ್ಯವಾಗದ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳ ಮಾಲೀಕರು ತೊಂದರೆಗೆ ಸಿಲುಕಿದ್ದಾರೆ' ಎಂದು ಕರ್ನಾಟಕ ಮದ್ಯ ಮಾರಾಟಗಾರರ ಸಂಘಗಳ ಒಕ್ಕೂಟ ತಿಳಿಸಿದೆ.

ಈ ಸಂಬಂಧ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿರುವ ಒಕ್ಕೂಟ ಪ್ರಧಾನ ಕಾರ್ಯದರ್ಶಿ ಗೋವಿಂದರಾಜ ಹೆಗ್ಡೆ, 'ಕಳೆದ ವರ್ಷದ ಲಾಕ್‌ಡೌನ್ ಸಂದರ್ಭದಲ್ಲಿ 40 ದಿನ ಸಂಪೂರ್ಣ ಬಂದ್ ಆಗಿದೆ. ₹1,100 ಕೋಟಿಗೂ ಹೆಚ್ಚು ನಷ್ಟವನ್ನು ಮದ್ಯ ಮಾರಾಟಗಾರರು ಅನುಭವಿಸಿದ್ದಾರೆ. ಈ ಕಾರಣದಿಂದ ಕಟ್ಟಡಗಳ ತೆರಿಗೆ, ಪರವಾನಗಿ ಶುಲ್ಕ ರಿಯಾಯಿತಿ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

ಸುದ್ದಿ 2 ನಿಮಿಷ

ತೋಟಗಾರಿಕಾ ಬೆಳೆಗಾರರಿಗೆ ನೆರವು: ಪ್ರಧಾನಿಗೆ ಎಚ್‌ಡಿಡಿ ಪತ್ರ

ಬೆಂಗಳೂರು: ಲಾಕ್‌ಡೌನ್ ಕಾರಣದಿಂದ ತೋಟಗಾರಿಕಾ ಬೆಳೆಗಳ ಬೆಲೆ ಕುಸಿದು ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ತಕ್ಷಣ ನೆರವು ಘೋಷಿಸಲು ಒತ್ತಾಯಿಸಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ, ಪ್ರಧಾನಿಗೆ ಪತ್ರ ಬರೆದಿದ್ದಾರೆ.

'ತೋಟಗಾರಿಕಾ ಬೆಳೆಗಳಿಗೆ ಮಾರುಕಟ್ಟೆ ಇಲ್ಲದ ಸ್ಥಿತಿ ಇದೆ. ದರ ಸಿಗದೇ ಕೋಲಾರದಲ್ಲಿ ಟೊಮೆಟೊ ರಸ್ತೆಗೆ ಚೆಲ್ಲಿರುವ ಪ್ರಕರಣಗಳಿವೆ. ಉತ್ತರ ಪ್ರದೇಶ, ಮಹಾರಾಷ್ಟ್ರ ಸೇರಿ ವಿವಿಧ ರಾಜ್ಯಗಳಲ್ಲಿಯೂ ತೋಟಗಾರಿಕಾ ಬೆಳೆಗಾರರು ದರ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಸೋಮವಾರ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಬಹುತೇಕ ಎಲ್ಲ ನಗರಗಳಲ್ಲಿ ಮಾರುಕಟ್ಟೆಗಳು ಬಂದ್ ಆಗಿವೆ. ಇನ್ನೊಂದೆಡೆ ತೋಟಗಾರಿಕೆ ಬೆಳೆಗಳು ಕನಿಷ್ಠ ಬೆಂಬಲ ಬೆಲೆಯ ವ್ಯಾಪ್ತಿಯಲ್ಲೂ ಇಲ್ಲ. ಕೋವಿಡ್ ಲಸಿಕೆ ಖರೀದಿ ಮತ್ತು ಚಿಕಿತ್ಸಾ ವ್ಯವಸ್ಥೆಗೆ ಹೆಚ್ಚಿನ ಹಣ ವ್ಯಯಿಸುತ್ತಿರುವ ಕಾರಣ ರಾಜ್ಯ ಸರ್ಕಾರಗಳು ರೈತರಿಗೆ ನೆರವು ನೀಡುವ ಸ್ಥಿತಿಯಲ್ಲಿ ಇಲ್ಲ. ಕೇಂದ್ರವೇ ನೆರವಿಗೆ ಧಾವಿಸಬೇಕು' ಎಂದು ಕೋರಿದ್ದಾರೆ.



'ಸಮಗ್ರ ಪರಿಹಾರ ಕುರಿತು ರಾಜ್ಯಗಳ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಗೆ ಸೂಚಿಸಬೇಕು. ಕೇಂದ್ರ ಸರ್ಕಾರವು ಸಕ್ರಿಯವಾಗಿ ಕೆಲಸ ಮಾಡಬೇಕು. ಕೇಂದ್ರ ನೆರವು ನೀಡಿದರೆ ಗ್ರಾಮೀಣ ಜನರಿಗೆ ಅನುಕೂಲ ಆಗುತ್ತದೆ' ಎಂದಿದ್ದಾರೆ.

'ಹನಿಟ್ರ್ಯಾಪ್' ಆಯಾಮದಿಂದ ತನಿಖೆ

ಬೆಂಗಳೂರು: ಅತ್ಯಾಚಾರ ಪ್ರಕರಣದ ಆರೋಪಿಯೂ ಆದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರ ಹೇಳಿಕೆ ಹೊಸ ತಿರುವು ನೀಡಿದ್ದು, ಎಸ್‌ಐಟಿ ಅಧಿಕಾರಿಗಳು ಈಗ 'ಹನಿಟ್ರ್ಯಾಪ್' ಆಯಾಮದಲ್ಲಿ ತನಿಖೆ ಕೈಗೊಂಡಿದ್ದಾರೆ.

'ವಿಡಿಯೊ ಸೃಷ್ಟಿಸಿ ಷಡ್ಯಂತ್ರ ಮಾಡಿ ಬ್ಲ್ಯಾಕ್‌ಮೇಲ್ ಮಾಡಲಾಗಿತ್ತು' ಎಂದು ರಮೇಶ ಜಾರಕಿಹೊಳಿ ಸದಾಶಿವನಗರ ಠಾಣೆಗೆ ದೂರು ನೀಡಿದ್ದರು. ಇದನ್ನೇ ಕೇಂದ್ರವಾಗಿಟ್ಟುಕೊಂಡು ಎಸ್‌ಐಟಿ ಅಧಿಕಾರಿಗಳು, ಆರೋಪಿಗಳ ಪತ್ತೆಗೆ ಮುಂದಾಗಿದ್ದಾರೆ.

'ವಿಡಿಯೊ ಕಳಿಸಿ ಹಣ ಕೇಳಿದ್ದ ಸಂತ್ರಸ್ತೆ'

'ಲೈಂಗಿಕ ಸಂಪರ್ಕದ ವಿಡಿಯೊವನ್ನು ಯುವತಿಯೇ ಚಿತ್ರೀಕರಿಸಿಟ್ಟುಕೊಂಡಿದ್ದರು. ಅದನ್ನೇ ರಮೇಶ ಜಾರಕಿಹೊಳಿ ಅವರಿಗೂ ಕಳುಹಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಈಗಾಗಲೇ ಕೊಟ್ಟಿದ್ದೇನೆ, ಪುನಃ ಹಣ ಕೊಡುವುದಿಲ್ಲ ಎಂದು ರಮೇಶ ತಿಳಿಸಿದ್ದರು. ಆ ನಂತರ ವಿಡಿಯೊ ಬಹಿರಂಗವಾಗಿದೆ. ಷಡ್ಯಂತ್ರದಲ್ಲಿ ಯುವತಿ ಭಾಗಿಯಾಗಿದ್ದಾರೆ ಎಂದು ರಮೇಶ ಹೇಳಿಕೆ ನೀಡಿದ್ದಾರೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಪ್ರಕರಣದ ಆರೋಪಿಗಳು ಎನ್ನಲಾದ ನರೇಶ್ ಗೌಡ ಹಾಗೂ ಶ್ರವಣ, ನಿರೀಕ್ಷಣಾ ಜಾಮೀನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಮೇ 29ಕ್ಕೆ ವಿಚಾರಣೆಗೆ ಬರಲಿದೆ.

'ಈಗ ಯಾವ ಕ್ರಮ ಕೈಗೊಳ್ಳಬೇಕೆಂದು ತಿಳಿಯಲು ಅಧಿಕಾರಿಗಳು ಕಾನೂನು ತಜ್ಞರ ಮೊರೆ ಹೋಗಿದ್ದಾರೆ. 'ಇದು ಸೂಕ್ಷ್ಮ ಪ್ರಕರಣ. ಹೈಕೋರ್ಟ್‌ನಲ್ಲೂ ಮೊಕದ್ದಮೆ ಇದೆ. ತನಿಖಾ ವರದಿ ಸಲ್ಲಿಸಿ ಹೈಕೋರ್ಟ್‌ನ ನಿರ್ದೇಶನದಂತೆ ತನಿಖೆ ಮುಂದುವರಿಸಲಾಗುವುದು' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ವಿವಿಧೆಡೆ ಉತ್ತಮ ಮಳೆ

ಬೆಂಗಳೂರು: ಕರಾವಳಿ ಜಿಲ್ಲೆಗಳು ಹಾಗೂ ಮೈಸೂರು, ಮಂಡ್ಯ, ಹಾಸನ ಜಿಲ್ಲೆಯ ವಿವಿಧೆಡೆ ಮಂಗಳವಾರ ಉತ್ತಮ ಮಳೆಯಾಗಿದೆ.

ಮೈಸೂರಿನಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ಬಿರುಸಿನ ಮಳೆಯಾಗಿದೆ. ಕೊಡಗು ಜಿಲ್ಲೆಯ ಗೋಣಿಕೊಪ್ಪಲು, ಪೊನ್ನಂಪೇಟೆ ಹಾಗೂ ಕುಟ್ಟ ಭಾಗದಲ್ಲಿ ಮಧ್ಯಾಹ್ನ ಉತ್ತಮವಾಗಿ ಸುರಿದಿದೆ.

ಹಾಸನ ಜಿಲ್ಲೆಯ ಆಲೂರು, ಬೇಲೂರು, ಸಕಲೇಶಪುರ ಮತ್ತು ಚನ್ನರಾಯಪಟ್ಟಣದ ಸುತ್ತಮುತ್ತ ಹಾಗೂ ಮಂಡ್ಯ ನಗರ ಹಾಗೂ ಜಿಲ್ಲೆಯ ನಾಗಮಂಗಲ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಬಿರುಸಿನ ಮಳೆಯಾಗಿದೆ.

ಮಂಗಳೂರು ನಗರದಲ್ಲಿ ಸಂಜೆ 6ರಿಂದ ಒಂದೂವರೆ ಗಂಟೆಗೂ ಅಧಿಕ ಕಾಲ ಮಳೆ ಸುರಿಯಿತು. ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ, ಬೆಳ್ತಂಗಡಿ, ಬಂಟ್ವಾಳದಲ್ಲಿ ಸಾಧಾರಣ ಮಳೆಯಾಗಿದೆ.

ಉಡುಪಿ ಜಿಲ್ಲೆಯ ಬ್ರಹ್ಮಾವರ, ಹಿಡಿಯಡಕದಲ್ಲಿ ಧಾರಾಕಾರ, ಉಪ್ಪೂರು, ಕೊಳಲಗಿರಿ, ಹಾವಂಜೆ, ಆರೂರು, ಪೇತ್ರಿ ಕರ್ಜೆ, ಪೆರ್ಡೂರು, ಅತ್ರಾಡಿ ಕೋಡಿಬೆಟ್ಟುವಿನಲ್ಲಿ ಉತ್ತಮ ಮಳೆ ಸುರಿದಿದೆ.

ಏಳು ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್'

ಬೆಂಗಳೂರು: 'ಯಸ್' ಚಂಡಮಾರುತದ ಪರಿಣಾಮ ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಮೇ 26ರಂದು ಗುಡುಗು ಸಿಡಿಲು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಹಾಸನ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬುಧವಾರ (ಮೇ 26) ಭಾರಿ ಮಳೆಯಾಗುವ ಸೂಚನೆಗಳು ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ವಿವಿಧೆಡೆ ಮಳೆಯಾಗಿದ್ದು, ಶಿವಮೊಗ್ಗ ಜಿಲ್ಲೆಯ ಭದ್ರಾವತಿ, ಹೊಸನಗರ, ತೀರ್ಥಹಳ್ಳಿ, ಶಿಕಾರಿಪುರ, ಸೊರಬ ಸುತ್ತಮುತ್ತ ಸಾಧಾರಣ ಮಳೆಯಾಗಿದೆ.

ನಿಧನ ವಾರ್ತೆ

ಕೃಷ್ಣೇಗೌಡ ಬಿ.ಎಂ

ಬೆಂಗಳೂರು: 'ಮುಖ್ಯಮಂತ್ರಿ' ನಾಟಕದಲ್ಲಿ ಪಕ್ಷದ ಅಧ್ಯಕ್ಷನ ಪಾತ್ರ ನಿರ್ವಹಿಸಿ ಖ್ಯಾತಿಯಾಗಿದ್ದ ಹಿರಿಯ ನಟ ಕೃಷ್ಣೇಗೌಡ ಬಿ.ಎಂ ಅವರು ಮಂಗಳವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 81 ವರ್ಷವಾಗಿತ್ತು..



ಕೋವಿಡ್ ದೃಢಪಟ್ಟಿದ್ದು, 36 ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಅವರು ಗುಣಮುಖರಾಗಿದ್ದರು. ಮತ್ತೆ ಅನಾರೋಗ್ಯ ಕಾಣಿಸಿಕೊಂಡಿದ್ದು, ಶನಿವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿದ್ದರು. ಕೃಷ್ಣೇಗೌಡ ಅವರ ಪುತ್ರ ಸತೀಶ್ ಕಳೆದ ತಿಂಗಳು ಕೋವಿಡ್‌ನಿಂದ ಮೃತಪಟ್ಟಿದ್ದರು. 'ಆಸ್ಪತ್ರೆಯಲ್ಲಿದ್ದ ಕಾರಣ ಸತೀಶ್ ಮೃತಪಟ್ಟ ವಿಷಯವನ್ನು ಅಪ್ಪನಿಗೆ ತಿಳಿಸಿರಲಿಲ್ಲ, ಕೊನೆಗೂ ಅಪ್ಪನಿಗೆ ಇದು ಹೇಳಲಾಗಲಿಲ್ಲ' ಎಂದು ಪುತ್ರ ಮುರಳೀಧರ್ ಹೇಳಿದರು

ಸಿ.ಆರ್.ಸಿಂಹ ಅವರ ನಿರ್ದೇಶನದ 'ಸಿಂಹಾಸನ' ಚಿತ್ರದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ್ದರು. 'ಚಕ್ರವ್ಯೂಹ', 'ಹಾಲುಂಡ ತವರು', 'ಒಲವಿನ ಉಡುಗೊರೆ', 'ಸಂಸಾರ ನೌಕೆ' ಹೀಗೆ 300ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಕರಿಮಲೆಯ ಕಗ್ಗತ್ತಲು' ಚಿತ್ರಕ್ಕೆ ಅತ್ಯುತ್ತಮ ಪೋಷಕ ನಟ ರಾಜ್ಯ ಪ್ರಶಸ್ತಿ ಪಡೆದಿದ್ದರು. ಹೆಚ್ಚಿನ ಚಿತ್ರದಲ್ಲಿ ರಾಜಕಾರಣಿಯ ಪಾತ್ರ ನಿರ್ವಹಿಸಿದ್ದರು. 'ಒಂದು ಮುತ್ತಿನ ಕಥೆ' ಹಾಗೂ 'ಆಕಸ್ಮಿಕ' ಚಿತ್ರದಲ್ಲಿ ಡಾ.ರಾಜ್‌ಕುಮಾರ್ ಅವರ ಜೊತೆಗೂ ನಟಿಸಿದ್ದರು.

ಡಾ.ಅಶೋಕ ಸೊನ್ನದ

ಬಾಗಲಕೋಟೆ: ವೈದ್ಯ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಧುಮೇಹ ತಜ್ಞ ಡಾ.ಅಶೋಕ ರಾಮಣ್ಣ ಸೊನ್ನದ (81) ಮಂಗಳವಾರ ನಿಧನರಾದರು.



ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರಿದ್ದು ಎಲ್ಲರೂ ಅಮೆರಿಕದಲ್ಲಿ ನೆಲೆಸಿದ್ದಾರೆ. ಸ್ವಗ್ರಾಮ ಮುಧೋಳ ತಾಲ್ಲೂಕಿನ ಭಂಟನೂರ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.ಡಾ.ಸೊನ್ನದ ಅವರೂ ಮೂವತ್ತಕ್ಕೂ ಹೆಚ್ಚು ವರ್ಷ ಅಮೆರಿಕದಲ್ಲೇ ವೈದ್ಯರಾಗಿದ್ದರು. 2010ರಲ್ಲಿ ಬಾಗಲಕೋಟೆಗೆ ಮರಳಿ ತಾಯಿ ಹೆಸರಿನಲ್ಲಿ 'ಮಾತೋಶ್ರೀ ಪಾರ್ವತಿಬಾಯಿ ಸೊನ್ನದ ಸಾರ್ವಜನಿಕ ಸೇವಾ ಸಂಘ' ಆರಂಭಿಸಿದ್ದು, ಉಚಿತ ಚಿಕಿತ್ಸೆ, ಆರ್ಥಿಕ ತೊಂದರೆಯಲ್ಲಿರುವವರಿಗೆ ಉಚಿತ ಔಷಧವನ್ನೂ ನೀಡುತ್ತಿದ್ದು, 'ಬಡವರ ವೈದ್ಯ' ಎಂದೇ ಹೆಸರಾಗಿದ್ದರು.

ಒಂದೇ ಕುಟುಂಬದ ಏಳು ಜನ ಡಾಕ್ಟರೇಟ್ ಪಡೆದಿದ್ದಾರೆ ಎಂಬ ಕಾರಣಕ್ಕೆ ಡಾ.ಸೊನ್ನದ ಅವರ ಪರಿವಾರದ ಹೆಸರು ಗಿನ್ನಿಸ್ ದಾಖಲೆ ಪುಸ್ತಕದಲ್ಲಿಯೂ ಸೇರಿರುವುದು ವಿಶೇಷ.

ಸುರೇಶ್ ಶಾ

ಬೆಂಗಳೂರು: ಸಪ್ನಾ ಬುಕ್ ಹೌಸ್ ಸಂಸ್ಥಾಪಕ ಸುರೇಶ್ ಸಿ. ಶಾ (84) ಅವರು ಮಂಗಳವಾರ ನಿಧನರಾದರು. ಅವರಿಗೆ ಪುತ್ರರಾದ ನಿತಿನ್ ಶಾ, ದೀಪಕ್ ಶಾ ಮತ್ತು ಪರೇಶ್ ಶಾ ಇದ್ದಾರೆ.

ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಅವರು, ಶೇಷಾದ್ರಿಪುರದ ಸಾಗರ್ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸದೆಯೇ ಮಧ್ಯಾಹ್ನ 2.15ಕ್ಕೆ ಮೃತಪಟ್ಟರು.

ಬುಧವಾರ ಬೆಳಿಗ್ಗೆ ಹರಿಶ್ಚಂದ್ರ ಘಾಟ್ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನಡೆಸಲು ಕುಟುಂಬದ ಸದಸ್ಯರು ನಿರ್ಧರಿಸಿದ್ದಾರೆ. ಸುರೇಶ್ ಶಾ ಅವರು 1966ರಲ್ಲಿ ಸಪ್ನಾ ಬುಕ್ ಹೌಸ್ ಆರಂಭಿಸಿದ್ದರು.

ಪಿಎಸ್‌ಐ ಸಿದ್ದರಾಜನಾಯಕ

ಚಾಮರಾಜನಗರ: ಕಾಡುಗಳ್ಳ ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ, ಚಾಮರಾಜನಗರ ಪಟ್ಟಣದ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಸಿದ್ದರಾಜ ನಾಯಕ ಮಂಗಳವಾರ ಹೃದಯಾಘಾತದಿಂದ ನಿಧನರಾದರು.



ಇವರಿಗೆ ಪತ್ನಿ, ಮೂವರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಕೊಳ್ಳೇಗಾಲ ತಾಲ್ಲೂಕಿನ ಪಾಳ್ಯ ಗ್ರಾಮದಲ್ಲಿ ನಡೆಯಿತು.

ಸಿದ್ದರಾಜ ಅವರ ನಿವೃತ್ತಿಗೆ 6 ದಿನಗಳಷ್ಟೇ ಬಾಕಿ ಇತ್ತು. ಇವರು ಮಧುಮೇಹದಿಂದ ಬಳಲುತ್ತಿದ್ದರು. ಮನೆಯಲ್ಲಿಯೇ ಹೃದಯಾಘಾತವಾಯಿತು.

ಅನಾಥ ಮಕ್ಕಳಿಗೆ ಉಚಿತ ಶಿಕ್ಷಣ

ಬಾಗಲಕೋಟೆ: 'ಕೋವಿಡ್‌ನಿಂದಾಗಿ ತಂದೆ-ತಾಯಿ ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಕರ್ನಾಟಕ, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಕಾಶಿ ಜಗದ್ಗುರು ಪೀಠದಿಂದ ಉಚಿತ ವಸತಿ, ಶಿಕ್ಷಣದ ವ್ಯವಸ್ಥೆ ಮಾಡಲಾಗುವುದು' ಎಂದು ಕಾಶಿ ಜ್ಞಾನ ಪೀಠದ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಹಾವೇರಿ ಜಿಲ್ಲೆ ಶಿಗ್ಗಾವಿ ತಾಲ್ಲೂಕಿನ ಬಿಸನಹಳ್ಳಿ ಗ್ರಾಮ ಮತ್ತು ಗದಗ ನಗರದಲ್ಲಿ ಪರಂಪರಾಗತ ಕಾಶಿ ಪೀಠದ ಗುರುಕುಲಗಳಿವೆ. ಮಹಾರಾಷ್ಟ್ರದ ಲಾತೂರ್, ತೆಲಂಗಾಣದ ಶಾದನಗರಗಳಲ್ಲಿಯೂ ಗುರುಕುಲಗಳಿವೆ. ಅಲ್ಲಿ ಪಾರಂಪರಿಕ ಶಿಕ್ಷಣವಾದ ವೇದ, ಸಂಸ್ಕೃತ, ಯೋಗ, ಸಂಗೀತದ ಜೊತೆಗೆ ಆಧುನಿಕ ಶಿಕ್ಷಣ ಕೊಡಲಾಗುತ್ತಿದೆ.

ಗದಗ ಗುರುಕುಲ ವ್ಯವಸ್ಥಾಪಕ ಮಂಜುನಾಥ್ ಬೆಲೇರಿ (ಮೊಬೈಲ್ ಫೋನ್ : 9448027291) ಹಾಗೂ ಹಾವೇರಿ ಜಿಲ್ಲೆ ಬಿಸನಹಳ್ಳಿಯ ಗುರುಕುಲಕ್ಕಾಗಿ ವ್ಯವಸ್ಥಾಪಕ ಗದಿಗೆಪ್ಪ ಮಾಮೂಲೆ ಪಟ್ಟಣಶೆಟ್ಟರ (9113824678), ಲಾತೂರ ಗುರುಕುಲಕ್ಕಾಗಿ ವ್ಯವಸ್ಥಾಪಕ ಮನ್ಮಥಪ್ಪ ಪಂಚಾಕ್ಷರಿ (94035 42221), ತೆಲಂಗಾಣದ ಶಾದನಗರ ಗುರುಕುಲಕ್ಕಾಗಿ ಜಗದೇವ ಹಿರೇಮಠ (9246581653) ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ಗ್ರೀನ್ ಟಾಕ್ | ಪ್ರಕೃತಿ ಮಡಿಲ ಮಾತು



ಕೆರೆ ಸುರಕ್ಷೆಗೆ ಪುರಸ್ಕಾರ

ಕೆರೆ ಉಳಿಸಿಕೊಳ್ಳಬೇಕು, ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಸಮುದಾಯ ಮನಸ್ಸು ಮಾಡಿದರೆ ಆ ಶಕ್ತಿಗೆ ಯಾವುದೂ ಅಸಾಧ್ಯವಲ್ಲ. ಇಂತಹ ಶಕ್ತಿಯೇ 'ಜಲಪೋಷಣ್'

ಪರಸ್ಪರ ಅಂತರ ಕಾಯ್ದುಕೊಳ್ಳಿ

ಹಾಲಿನ ಪುಡಿ ಅಕ್ರಮ: ಸಿಐಡಿಗೆ ತನಿಖೆ ಹೊಣೆ

ಬಾಗಲಕೋಟೆ: ಜಿಲ್ಲೆಯಲ್ಲಿ ವರ್ಷದ ಹಿಂದೆ ಪತ್ತೆಯಾಗಿದ್ದ, ಅಂಗನವಾಡಿಗಳಿಗೆ ಪೂರೈಸುವ ಹಾಲಿನ ಪುಡಿಯ ಅಕ್ರಮ ಸಂಗ್ರಹಣೆ ಹಾಗೂ ಮಾರಾಟ ಪ್ರಕರಣದ ತನಿಖೆಯನ್ನು ಸರ್ಕಾರ ಮಂಗಳವಾರ ಸಿಐಡಿಗೆ ವರ್ಗಾಯಿಸಿ ಆದೇಶಿಸಿದೆ.

ಕ್ಷೀರಭಾಗ್ಯ ಯೋಜನೆಯಡಿ ಪೂರೈಸುವ ಹಾಲಿನಪುಡಿಯನ್ನು ಸಂಗ್ರಹಿಸಿ ಹೆಚ್ಚಿನ ಬೆಲೆಗೆ ಹೋಟೆಲ್‌ಗಳಿಗೆ ಮಾರುವ ದೊಡ್ಡ ಜಾಲ ಸಕ್ರಿಯವಾಗಿದೆ. ಸಮಗ್ರ ತನಿಖೆಗಾಗಿ ಈ ನಿರ್ಧಾರ ಕೈಗೊಂಡಿದೆ ಎಂದು ಮೂಲಗಳು ತಿಳಿಸಿವೆ.

ಹಾಲಿನ ಪುಡಿ ಅಕ್ರಮ ಮಾರಾಟ ಜಾಲ ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಿಗಷ್ಟೇ ಸೀಮಿತವಾಗಿಲ್ಲ. ಬೀದರ್, ಕಲಬುರ್ಗಿ ಸೇರಿ ಹಲವು ಜಿಲ್ಲೆಗಳಿಗೆ ವ್ಯಾಪಿಸಿದೆ. ವಿಸ್ತೃತ ತನಿಖೆ ಅಗತ್ಯ ಎಂಬ ಕಾರಣಕ್ಕೆ ಸಿಐಡಿಗೆ ತನಿಖೆ ಹೊಣೆ ವಹಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು. ಆದೇಶದ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ)
(ಕರ್ನಾಟಕ ಸರ್ಕಾರದ ನೋಂದಾಯಿತ ಸಂಸ್ಥೆ)
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ-ಅಟ್ಟೂರು ಲೇಔಟ್ ಹತ್ತಿರ, ಬೆಂಗಳೂರು - 560 064. ದೂರವಾಣಿ : 080 - 6735 5000.
ಸಂಖ್ಯೆ : ಕ.ರಾ.ನೈ.ವಿ.ಉ.ಕೇ./ಎಸಿಟಿ/13/2020 ದಿನಾಂಕ : 25–05–2021
E-TENDER NOTIFICATION
ತರಬೇತಿ ಹಾಗೂ ಸಭಾಂಗಣ ಕಟ್ಟಡವನ್ನು ಕ.ರಾ.ನೈ.ವಿ.ಉ.ಕೇ. ಕಛೇರಿಯ ಮೊದಲನೇಯ ಮಹಡಿಯಲ್ಲಿ ನಿರ್ಮಿಸಲು ಟೆಂಡರ್ ಸಂಖ್ಯೆ KSNDMC/ADM/06/2021//CALL-2 ಯನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮುಖಾಂತರ ಟೆಂಡರ್ ಕರೆಯಲಾಗಿದೆ.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 25–06–2021. ಈ ಟೆಂಡರ್ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ https://eproc.karnataka.gov.in ಯಲ್ಲಿ ಪಡೆಯಬಹುದು.
ಸಹಿ/– ನಿರ್ದೇಶಕರು.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
(ಸಿಐಎನ್ ಸಂಖ್ಯೆ: ಯು74999ಕೆಎ2018ಪಿಎಲ್‌ಸಿ109175)
ವ್ಯವಸ್ಥಾಪಕ ನಿರ್ದೇಶಕರ ಕಛೇರಿ,, ಬೆಂ.ಸ್ಮಾ.ಸಿ.ಲಿ #30/1, 3&4ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ಅಲಿಯನ್ಸ್ ಫ್ರಾನ್ಸಯಿಸ್ ಡೇ ಶಾಲೆ ಎದುರು, ವಸಂತನಗರ, ಬೆಂಗಳೂರು–560052.
ಟೆಂಡರ್ ರದ್ಧತಿ / ಹಿಂಪಡೆಯುವಿಕೆ ಪ್ರಕಟಣೆ
ಟೆಂಡರ್ ಪ್ರಕಟಣೆ ಸಂಖ್ಯೆ: ಬೆಂಸ್ಮಾಸಿಲಿ/ಮುಅ/ಟಿಎಸ್/ಟೆಂಡರ್/ಜೆನೊಮಿಕ್–ಲ್ಯಾಬ್/2021–22 ದಿನಾಂಕ: 21.05.2021ಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಬಿಬಿಎಂಪಿ ಯಲ್ಲಿ ಅಡ್ವಾನ್ಸ್‌ಡ್ ಮಾಲೆಕ್ಯೂಲರ್ ಡಯಾಗ್ನೋಸ್ಟಿಕ್ಸ್ & ಜೆನೊಮಿಕ್ಸ್ ಲ್ಯಾಬೊರೇಟರಿ ಅನುಷ್ಠಾನ ಕಾಮಗಾರಿಗಾಗಿ ಕರೆಯಲಾಗಿದ್ದ ಟೆಂಡರ್ ಪ್ರಕಟಣೆಯನ್ನು ಆಡಳಿತಾತ್ಮಕ ಕಾರಣಗಳಿಂದ ರದ್ದುಪಡಿಸಲಾಗಿದೆ/ ಹಿಂಪಡೆಯಲಾಗಿದೆ.
ಸಹಿ/–
ಮುಖ್ಯ ಅಭಿಯಂತರರು,
ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು
ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102 ದೂರವಾಣಿ: 0816–2278190 ಇ–ಮೇಲ್: smartcitytumakuru@gmail.com
CIN:U74999KA2017PLC099774
ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/83/2019–20 ದಿನಾಂಕ: 24.05.2021
ಟೆಂಡರ್ ಪ್ರಕಟಣೆ
ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.eproc.karnataka.gov.in ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ: 080–22340948 ಹಾಗೂ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು.
(1) ಕಾಮಗಾರಿಯ ಹೆಸರು: ತುಮಕೂರು ನಗರದ ಅಜ್ಜಗೊಂಡನಹಳ್ಳಿ ಘನ ತ್ಯಾಜ್ಯ ಸಂಗ್ರಹ ಸ್ಥಳದ ಪರಿಹಾರ ಮತ್ತು ಮರುಬಳಕೆ–ಮೂರನೇ ಕರೆ (2) ಕಾಮಗಾರಿ ಅಂದಾಜು ಮೊತ್ತ 2.28Crores (3) ಇಎಂಡಿ : ದಿನಾಂಕ: 22.12.2020 ರ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 675 ಎಕ್ಸ್‌ಪೆ 12/2020 ರ ಅನ್ವಯ ಡಿಕ್ಲರೇಷನ್ ನಮೂನೆಯನ್ನು ಭರ್ತಿ ಮಾಡಿ ಸಲ್ಲಿಸುವುದು. (4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 24.06.2021 (5) ಟೆಂಡರ್ ತೆರೆಯುವ ದಿನಾಂಕ : 25.06.2021 ಸೂಚನೆ: ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.
DIPR/TUM/60/MCA/2021-2022 ಸಹಿ/– ಕಾರ್ಯಪಾಲಕ ಅಭಿಯಂತರರು, ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮೈಸೂರು ವಿಭಾಗ, ಅರಣ್ಯ ಭವನ,ಅಶೋಕಪುರಂ, ಮೈಸೂರು
ದೂ:02881–2483853, Email:dcfmdm@gmail.com
ಸಂ:ಬಿ1/ಬಿಯುಡಿ/ಟೆಂಡರ್/ಸಿಆರ್–50/2021–22 ದಿ: 10.05.2021
(ಇ–ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ಅರಣ್ಯ ಇಲಾಖೆ ಮೈಸೂರು ವೃತ್ತ ವ್ಯಾಪ್ತಿಯ ವಿಭಾಗಗಳಿಗೆ 2021–22ನೇ ಸಾಲಿಗೆ ಅಂದರೆ 1ನೇ ಜುಲೈ 2021 ರಿಂದ 31ನೇ ಮಾರ್ಚ್ 2022 ರವರೆಗೆ ವಿವಿಧ ಅಳತೆಯ HDPE ನೇಯ್ದ ಚೀಲಗಳನ್ನು ಸರಬರಾಜು ಮಾಡಲು ಇಚ್ಛೆ ಹೊಂದಿದ ಅಂಗೀಕೃತ ಉತ್ಪಾದಕರ/ಸರಬರಾಜುದಾರರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಉದ್ದೇಶಿಸಿರುವುದರಿಂದ ಆಸಕ್ತ HDPE ನೇಯ್ದ ಚೀಲಗಳ ಸರಬರಾಜುದಾರರು/ಅಂಗೀಕೃತ ಉತ್ಪಾದ ಉದ್ದಿಮೆ ಘಟಕಗಳ ಗಮನವನ್ನು ಸೆಳೆಯುತ್ತಾ, ಟೆಂಡರ್ ಪ್ರಕಟಣೆ ಹೊರಡಿಸಿದೆ. ಈ ಪ್ರಕಟಣೆಯಲ್ಲಿ ಮುಂದೆ ವಿಧಿಸಲಾಗುವ ಎಲ್ಲಾ ಷರತ್ತುಗಳನ್ನು **ಕರ್ನಾಟಕ ಸಾರ್ವಜನಿಕ ಸರಬರಾಜು ಸಂಗ್ರಹಣೆಗಳಿಗೆ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ** ಅರ್ಥೈಸಿಕೊಳ್ಳತಕ್ಕದ್ದು. ಅರ್ಜಿದಾರರು ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್ https://www.eproc.karnataka.gov.in ಯಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ತುಂಬಿದ ಟೆಂಡರ್ ಸವಾಲುಗಳನ್ನು ಅಪ್‌ಲೋಡ್ ಮಾಡಲು **ದಿ: 08.06.2021**ರಂದು **ಸಂಜೆ: 4.00 ಗಂಟೆ** ತನಕ ಅವಕಾಶವಿರುತ್ತದೆ. ತಾಂತ್ರಿಕ ಸವಾಲುಗಳನ್ನು **ದಿ: 10.06.2021** ರಂದು **ಸಂಜೆ: 4.00 ಗಂಟೆಗೆ** ಈ ಕಛೇರಿಯಲ್ಲಿ ತೆರೆಯಲಾಗುವುದು/ ಡೌನ್‌ಲೋಡ್ ಮಾಡಲಾಗುವುದು. ತಾಂತ್ರಿಕ ಪರಿಶೀಲನೆ ಹಂತದಲ್ಲಿ, ಅರ್ಹರಾದ ಸವಾಲುದಾರರ ಆರ್ಥಿಕ ಸವಾಲುಗಳನ್ನು **ದಿ: 11.06.2021** ರಂದು **ಸಂಜೆ: 4.30 ಗಂಟೆಗೆ** ಈ ಕಛೇರಿಯಲ್ಲಿ ತೆರೆಯಲಾಗುವುದು/ಡೌನ್‌ಲೋಡ್ ಮಾಡಲಾಗುವುದು. ಒಂದು ವೇಳೆ ಮೇಲೆ ನಮೂದಿಸಿರುವ ದಿನಾಂಕಗಳು ಸಾರ್ವತ್ರಿಕ ರಜೆಗಳೆಂದು ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನವು ಟೆಂಡರ್ ಸಲ್ಲಿಸುವ ಅಥವಾ ತೆರೆಯುವ ಪ್ರಕ್ರಿಯೆ ನಡೆಸುವ ದಿನವಾಗಿರುತ್ತದೆ. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ. ಟೆಂಡರ್ ಪ್ರಕ್ರಿಯೆ ಮತ್ತು ಷರತ್ತುಗಳ ಕುರಿತಾದ ಮಾಹಿತಿ/ಸ್ಪಷ್ಟೀಕರಣ ಅಥವಾ ಷರತ್ತುಗಳ ಬದಲಾವಣೆಯ ಬಗ್ಗೆ ಸವಾಲುದಾರರಿಗೆ ಮಾಹಿತಿ ನೀಡುವ ಸಲುವಾಗಿ ಸವಾಲು ಟೆಂಡರ್ ಪೂರ್ವ ಸಭೆಯನ್ನು **ದಿ: 07.06.2021** ರಂದು **ಬೆಳಿಗ್ಗೆ: 11.30 ಗಂಟೆಗೆ** ಮೈಸೂರು ವಿಭಾಗ, ಕಛೇರಿ, ಮೈಸೂರು ಇಲ್ಲಿ ನಿಗದಿಪಡಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವಿಭಾಗ, ಮೈಸೂರು.
DIPR/DDMYS/MCA/152/2021-22

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಛೇರಿ, 2ನೇ ಮಹಡಿ, ಮೆಸ್ಕಾಂ ಭವನ, ಕಾವೂರು ಅಡ್ಡ ರಸ್ತೆ, ಬಿಜೈ, ಮಂಗಳೂರು-575004
ದೂರವಾಣಿ: 0824-2885795 ಮಿಂಚಂಚೆ: sepmescom@rediffmail.com
ಕ್ರ.ಸಂ. File No. MESCOM-PROCOPURC/196/2021-PROC ದಿನಾಂಕ : 21.05.2021
ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)
ಮ.ವಿ.ಸ.ಕಂ.ಯು ಈ ಕೆಳಗಿನ ಸಾಮಾಗ್ರಿಯ ತಯಾರಿಕೆ ಹಾಗೂ ಸರಬರಾಜಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ.

ಟೆಂಡರು ಸಂಖ್ಯೆ	ಖರೀದಿಸಲು ಉದ್ದೇಶಿಸಿರುವ ಸಾಮಾಗ್ರಿಯ ವಿವರ	ಪ್ರಮಾಣ
MESCOM/2021-22/IND770	ನಂ. 15 ಗ್ರೈ ಸ್ಟ್ರೀನ್ ಇನ್ಸುಲೇಟರ್ಸ್	40000 ಸಂಖ್ಯೆಗಳು

ಆಸಕ್ತ ಅರ್ಹ ಬಿಡ್ಡುದಾರರು ದಿನಾಂಕ 26.05.2021 ಅಥವಾ ನಂತರ ವೆಬ್ ಸೈಟ್ www.eproc.karnataka.gov.inಗೆ ಲಾಗಾನ್ ಮಾಡಬಹುದು.
ಸಹಿ/– ಅಧೀಕ್ಷಕ ಇಂಜಿನಿಯರ್ (ವಿ) (ಖರೀದಿ), ಮಂ.ವಿ.ಸ.ಕಂ.ನಿ., ಮಂಗಳೂರು
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ರಸ್ತೆ ಮೂಲಸೌಕರ್ಯ –ಬೊಮ್ಮನಹಳ್ಳಿ ವಿಭಾಗ, #207, 2ನೇ ಮಹಡಿ, ಅನೆಕ್ಸ್ ಕಟ್ಟಡಗಳು–3, ಎನ್.ಆರ್. ಚೌಕ, ಬೆಂಗಳೂರು–560002
ನಂ.: ಕಾಪಾಅ/ರಮೂ–ಬೊ/ಟೆಂಡರ್/01/2021–22 ದಿನಾಂಕ: 25.05.2021
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ– ಬೊಮ್ಮನಹಳ್ಳಿ ವಿಭಾಗ ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)
1	ದಕ್ಷಿಣ ಕ್ಷೇತ್ರದಲ್ಲಿ ಗೊಟ್ಟಿಗೆರೆ–ಕೆಂಗೇರಿ ರಸ್ತೆ ಮತ್ತು ವಸಂತಪುರ ಮುಖ್ಯರಸ್ತೆಯ ಚರಂಡಿ ಮತ್ತು ರಸ್ತೆ ಅಭಿವೃದ್ಧಿ.	245.41
2	ಅಕ್ಷಯನಗರ ಮುಖ್ಯರಸ್ತೆಯ ಚರಂಡಿ ಮತ್ತು ಪಾದಚಾರಿ ಮಾರ್ಗದ ಅಭಿವೃದ್ಧಿ ಹಾಗೂ ಬಾಕಿ ಉಳಿದ ಭಾಗಕ್ಕೆ ಡಾಂಬರೀಕರಣ.	125.42

ಇಎಂಡಿ (ರೂ. ಲಕ್ಷಗಳಲ್ಲಿ): ಇಎಂಡಿ ಘೋಷಣೆಯು ಎಫ್‌ಡಿ ಆದೇಶ ಸಂಖ್ಯೆ: ಎಫ್‌ಡಿ 675 ವೆಚ್ಚ–12/2020 ದಿ: 22.12.2020ರಂತೆ.
ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **26.05.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು ಕಾರ್ಯಪಾಲಕ ಅಭಿಯಂತರರ ಕಛೇರಿ (ರಸ್ತೆ ಮೂಲಸೌಕರ್ಯ – ಬೊಮ್ಮನಹಳ್ಳಿ ವಿಭಾಗ)ಯಲ್ಲಿ **16.06.2021**ರ **ಮಧ್ಯಾಹ್ನ 3:00 ಗಂಟೆಗೆ** ನಡೆಯಲಿದೆ. (3) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **25.06.2021**ರ **ಸಂಜೆ 4:00 ಗಂಟೆಯೊಳಗೆ** ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್ https://eproc.karnataka.gov.in ಮೂಲಕ ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲಸೌಕರ್ಯ– ಬೊಮ್ಮನಹಳ್ಳಿ ವಿಭಾಗದಲ್ಲಿ **28.06.2021**ರ **ಬೆಳಿಗ್ಗೆ 11:00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.inನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ರಮೂ–ಬೊಮ್ಮನಹಳ್ಳಿ ವಿಭಾಗ, ಬಿಬಿಎಂಪಿ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ತುಮಕೂರು
ಇಮೇಲ್:eerwstmk@gmail.com ದೂರವಾಣಿ:0816-2272620
ಸಂಖ್ಯೆಕಾಇಂ/ಗ್ರಾಕು.ನೀ.ನೈ ವಿ/ತುಮ/ಎಇ–1/ಟೆಂಡರ್/2020–21 ದಿನಾಂಕ 21.05.2021
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2020–21 (3ನೇ ಕರೆ)
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಸೇವೆಗಳಿಗೆ ನಿಬಂಧನೆಗೊಳಪಟ್ಟಂತೆ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ, ತುಮಕೂರು ಕಾರ್ಯಪಾಲಕ ಇಂಜಿನಿಯರ್‌ರವರಿಂದ 2020–21 ಸಾಲಿಗೆ ತುಮಕೂರು ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆ ಅಡಿ ಮಾಹಿತಿ ಹಾಗೂ ಸಂವಹನ (IEC) ಚಟುವಟಿಕೆಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ (HRD) ಚಟುವಟಿಕೆಗಳನ್ನು ನಿರ್ವಹಿಸಲು ನುರಿತ ಅನುಷ್ಠಾನ ಬೆಂಬಲ ಸಂಸ್ಥೆಗಳನ್ನು (NGOs/VOs/SHGs,ISA) ಎಂಪ್ಯಾನಲ್ ಮಾಡಿಕೊಳ್ಳಲು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು.
ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿದಾರರು ವೆಬ್‌ಸೈಟ್ www.eproc.karnataka.gov.in ಮುಖಾಂತರ ದಿನಾಂಕ 21.05.2021 ರಿಂದ 28.05.2021 ಸಂಜೆ 5.00 ಗಂಟೆವರೆಗೆ ಫಾರಂ ಫೀ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸಿ ಟೆಂಡರ್‌ಗಳನ್ನು online ಮೂಲಕ Download ಮಾಡಿಕೊಂಡು online ಮೂಲಕ ದಿನಾಂಕ: 28.05.2021ರ ಸಂಜೆ 5.00 ಗಂಟೆ ಒಳಗಾಗಿ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 31.05.2021 ರಂದು ಪೂರ್ವಾಹ್ನ 11.00 ಗಂಟೆ ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 04.06.2021 ಪೂರ್ವಾಹ್ನ 11.00 ಗಂಟೆ ನಂತರ ತೆರೆಯಲಾಗುವುದು. ಚಟುವಟಿಕೆಗಳ ಸಂಪೂರ್ಣ ವಿವರಗಳನ್ನು www.eproc.karnataka.gov.in ನಲ್ಲಿ ಲಾಗ್ ಇನ್ ಆಗುವ ಮುಖಾಂತರ ಹಾಗೂ ಈ ಕಚೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816–2252937. ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಇ–ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು,ನೀ ಮತ್ತು ನೈ ವಿಭಾಗ, ತುಮಕೂರು
DIPR/TMK/56/MCA/2021-22

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕು ಕ ಅಧಿಕಾರಿಗಳ ಕಾರ್ಯಾಲಯ, ಕಲಬುರಗಿ ತಾ.ಜಿ. ಕಲಬುರಗಿ
ಇ–ಮೇಲ್ : dhogulbarga@gmail.com ದೂರವಾಣಿ ಸಂಖ್ಯೆ : 08472–278619
ಸಂಖ್ಯೆ:ಸಿಬ್ಬಂದಿ/ಅಭಿವೃಧಿ/ಸಿ.ಆರ್/05/2020–21 ದಿನಾಂಕ : 25.05.2021.
:: ಅಲ್ಪಾವಧಿ ಟೆಂಡರ್ ಪ್ರಕಟಣೆ ::
ವಿಷಯ : ಕಲಬುರಗಿ ಜಿಲ್ಲೆಯಲ್ಲಿ (ಕೋವಿಡ್–19) ಕೊರೋನಾ ವೈರಸ್ 2ನೇ ಅಲೆ ವ್ಯಾಪಕವಾಗಿ ಹರಡುತ್ತಿರುವುದರಿಂದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನೆ ಅಡಿಯಲ್ಲಿ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಿದೆ.
ಟೆಂಡರ್ ಮಾಹಿತಿ ಈ ಕೆಳಗಿನಂತಿದೆ. (ವೆಬ್‌ಸೈಟ್: http:/eproc.karnataka.gov.in)
1) ವರ್ಕ ಕೋಡ್ : KLB2012131611, ಟೆಂಡರ್ ವಿವರ : Oxygen Concentrator 10 ltrs to ESIC & GIMS Hospitals in Kalaburagi City, ಪ್ರಮಾಣ : 300, ಟೆಂಡರ್ ಮೊತ್ತ: Rs. **2.55 Crore.** 2) ವರ್ಕ ಕೋಡ್ : KLB2012131612, ಟೆಂಡರ್ ವಿವರ : Oxygen Generate (Plant) 1 each ESIC & GIMS Hospitals in Kalaburagi City., ಪ್ರಮಾಣ : 02, ಟೆಂಡರ್ ಮೊತ್ತ: Rs. **3.00 Crore.** 3) ವರ್ಕ ಕೋಡ್ : KLB2012131613, ಟೆಂಡರ್ ವಿವರ : 13KL Oxygen storage plant at ESIC Hospitals in Kalaburagi City, ಪ್ರಮಾಣ : 13KL, ಟೆಂಡರ್ ಮೊತ್ತ: : Rs. **0.70 Crore.**
1) ಟೆಂಡರ್ ಸಲ್ಲಿಸುವ ಪ್ರಾರಂಭ ದಿನಾಂಕ :**26.05.2021,** 2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **04.06.2021 ಸಾಯಂಕಾಲ 04.00 ಗಂಟೆಗೆ,** 3) ಟೆಂಡರ್ ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ : **05.06.2021 ರಂದು ಸಂಜೆ 04.00 ಗಂಟೆಗೆ,** 4) ಟೆಂಡರ್ ಆರ್ಥಿಕ ಬಿಡ್ : ತಾಂತ್ರಿಕ ಬಿಡ್ಡಿನಲ್ಲಿ ಅರ್ಹರಿರುವ ಗುತ್ತಿಗೆದಾರರ ಆರ್ಥಿಕ ಬಿಡ್ಡುಗಳನ್ನು ಮಾತ್ರ **06.06.2021** ಪರಿಶೀಲಿಸುವುದು, 5) ಟೆಂಡರ್ ಒಟ್ಟು ಮೊತ್ತ : ರೂ. 6.25 ಕೋಟಿ, 6) ಟೆಂಡರ್‌ನ ಇ.ಎಂ.ಡಿ : ಪ್ರತಿ ಕಾಮಗಾರಿಗೆ 2.5 %, 7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಕಲಬುರಗಿ. ದೂರವಾಣಿ ಸಂಖ್ಯೆ : 08472–278619.
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಬಹುದು.
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/199/ಎಂ.ಸಿ&ಎ/2021–22



ಹೆಣ್ಣುಸೊಳ್ಳೆಗಳ ಶತ್ರು ಈ ಗಂಡುಸೊಳ್ಳೆ...

ಇ.ಎಸ್. ಸುಧೀಂದ್ರ ಪ್ರಸಾದ್

ಅಮೆರಿಕದ ಫ್ಲೋರಿಡಾದಲ್ಲಿ ಇಡಲಾಗಿದ್ದ ಸುಮಾರು ಹತ್ತು ಸಾವಿರ ಮೊಟ್ಟೆಗಳು ಒಡೆದು ಹೊರಬಂದ ಕುಲಾಂತರಿ ಸೊಳ್ಳೆಗಳು, ಪ್ರಯೋಗಾಲಯದಲ್ಲಿ ನಿರ್ಧಾರವಾದಂತೆ ತಮ್ಮ ಕೆಲಸ ಆರಂಭಿಸಿವೆ. ತಮ್ಮ ಪೂರ್ವಿಕರ ತಳಿಯನ್ನು ಪ್ರಯೋಗಾಲಯದಲ್ಲಿ ತಿದ್ದಿ ತೀಡಿ ಸಜ್ಜುಗೊಳಿಸಿದ ಕುಲಾಂತರಿ 'ಏಡೀಸ್ ಈಜಿಪ್ಟೈ' ತಳಿಯ ಗಂಡುಸೊಳ್ಳೆಗಳು ಅಮೆರಿಕದಲ್ಲಿ ಮೊದಲ ಬಾರಿಗೆ ಪ್ರಯೋಗಗೊಂಡ ಕುಲಾಂತರಿ ಸೊಳ್ಳೆ ಎಂಬ ಕೀರ್ತಿಗೂ ಪಾತ್ರವಾಗಿದೆ.

ಇಂಥದ್ದೊಂದು ಸೊಳ್ಳೆ ಉತ್ಪಾದನೆಗೆ ಐರೋಪ್ಯ ರಾಷ್ಟ್ರ ಮೂಲದ ಜೈವಿಕ ತಂತ್ರಜ್ಞಾನ ಕಂಪನಿ ಆಕ್ಸಿಟೆಕ್ ತೆಗೆದುಕೊಂಡಿದ್ದು ಬರೋಬ್ಬರಿ 10 ವರ್ಷ. ದಶಕಗಳಿಂದ ಕಾಡುತ್ತಿರುವ ಝೀಕಾ, ಡೆಂಗಿ, ಚಿಕೂನ್‌ಗೂನ್ಯ, ಹಳದಿ ಜ್ವರಕ್ಕೆ ಸೊಳ್ಳೆಗಳೇ ಮೂಲಕಾರಣ. ಅದರಲ್ಲೂ ಸೊಳ್ಳೆತಳಿಯಲ್ಲಿ ಶೇ 4ರಷ್ಟಿರುವ ಏಡೀಸ್ ಈಜಿಪ್ಟೈ ಎಂಬ ಸೊಳ್ಳೆ ಈ ಕಾಯಿಲೆ ಹರಡಲು ಕಾರಣ ಎಂಬುದನ್ನು ವಿಜ್ಞಾನಿಗಳು ಪತ್ತೆ ಮಾಡಿದ್ದರು.

> ಆಕ್ಸಿಟೆಕ್ ಅಭಿವೃದ್ಧಿಪಡಿಸಿರುವ ಈ ಕುಲಾಂತರಿ ಸೊಳ್ಳೆಗಳು ಮುಂದಿನ 12 ವಾರಗಳಲ್ಲಿ ಸುಮಾರು 12 ಸಾವಿರ ಸೊಳ್ಳೆಗಳನ್ನು ಉತ್ಪತ್ತಿ ಮಾಡುವ ನಿರೀಕ್ಷೆ ಇದೆ. ಒಂದೊಮ್ಮೆ ನಿರೀಕ್ಷೆಯಂತೆ ಈ ಯೋಜನೆ ಯಶಸ್ಸು ಕಂಡಿದ್ದೇ ಆದಲ್ಲಿ, ಎರಡು ಕೋಟಿ ಕುಲಾಂತರಿ ಸೊಳ್ಳೆಯನ್ನು ಇದೇ ವರ್ಷದಲ್ಲಿ ಬಿಡುಗಡೆ ಮಾಡಲಾಗುವುದು...

ಆದರೆ ಸೊಳ್ಳೆಗಳ ನಾಶಕ್ಕೆ ಬಳಸುವ ಕೀಟನಾಶಕಗಳು ಜನರ ಆರೋಗ್ಯಕ್ಕೇ ಮಾರಕ. ಹೀಗಾಗಿ ಇದಕ್ಕೊಂದು ಪರಿಣಾಮಕಾರಿ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ ಆಕ್ಸಿಟೆಕ್‌ನ ವಿಜ್ಞಾನಿಗಳು ಕಾರ್ಯೋನ್ಮುಖರಾದರು. ಜೈವಿಕವಾಗಿ ಈ ಸೊಳ್ಳೆಗಳ ನಾಶಕ್ಕೆ ಯೋಜನೆ ರೂಪಿಸಿದರು. ಅಮೆರಿಕದ ಈ ಸಮಸ್ಯೆಗೆ ಅಲ್ಲಿನ ಐಟಿ ದಿಗ್ಗಜ ಬಿಲ್ ಗೇಟ್ಸ್ ಒಡೆತನದ ಬಿಲ್ ಮತ್ತು ಮಿಲಿಂಡಾ ಗೇಟ್ಸ್ ಪ್ರತಿಷ್ಠಾನವೂ ನೆರವು ನೀಡಿತು.

ಸಾಮಾನ್ಯವಾಗಿ ಸೊಳ್ಳೆಗಳಲ್ಲಿ ಹೆಣ್ಣುಸೊಳ್ಳೆಗಳು ಮಾತ್ರ ರಕ್ತ ಹೀರುತ್ತವೆ. ಗಂಡುಸೊಳ್ಳೆಗಳು ಆ ಉಸಾಬರಿಗೆ ಹೋಗುವುದಿಲ್ಲ. ಅವು ಏನಿದ್ದರೂ ಹುಲ್ಲಿನ ಮೇಲೆ ಹಾರಾಡಿ ಆಹಾರ ಹುಡುಕುವುದು; ಹೆಣ್ಣುಗಳ ಸಂಘ ಮಾಡುವುದಷ್ಟೇ. ಆದರೆ ಹೀಗೆ ಸಂಘದಿಂದ ಗರ್ಭ ಧರಿಸುವ ಹೆಣ್ಣುಸೊಳ್ಳೆಗಳಿಗೆ ಪೋಷಕಾಂಶಗಳನ್ನು ಹುಡುಕುತ್ತಿರುತ್ತದೆ. ಆಘ್ರಣಿಸುವ ಅಪಾರ ಶಕ್ತಿ ಹೊಂದಿರುವ ಈ ಹೆಣ್ಣುಸೊಳ್ಳೆಗಳು ಇಂಗಾಲದ ಡೈಆಕ್ಸೈಡ್ ಗಾಢವಾಗಿದ್ದಲ್ಲಿ ಪ್ರಾಣಿಗಳಿರುತ್ತವೆ ಎಂಬುದು ಗೊತ್ತು. ಹೀಗೆ ಸುಲಭವಾಗಿ ಸಿಗುವ ಮನುಷ್ಯರ ರಕ್ತವನ್ನು ಹೀರಿ ತನ್ನ ಪೋಷಕಾಂಶದ ಕೊರತೆಯನ್ನು ನೀಗಿಸಿಕೊಳ್ಳುತ್ತವೆ.

ಇದನ್ನೇ ನಿಯಂತ್ರಿಸುವುದು ವಿಜ್ಞಾನಿಗಳ ಮುಂದಿದ್ದ ಸವಾಲು. ಹೀಗಾಗಿ ಆಕ್ಸಿಟೆಕ್‌ನ ವಿಜ್ಞಾನಿಗಳು, ಹೆಣ್ಣುಸೊಳ್ಳೆಗಳನ್ನು ನಿಯಂತ್ರಿಸಲು ಗಂಡುಸೊಳ್ಳೆಗಳನ್ನು ಸಜ್ಜಗೊಳಿಸಲು ನಿರ್ಧರಿಸಿದರು. ತಳಿಯನ್ನೇ ಬದಲಾಯಿಸಿ ಅದರ ಸಂತಾನೋತ್ಪತ್ತಿ ಕ್ರಿಯೆಯಲ್ಲಿ ವಿಭಿನ್ನವಾದ ರಾಸಾಯನಿಕವನ್ನು ಹೆಣ್ಣಿನ ಗರ್ಭದೊಳಗೆ ಕಳುಹಿಸುವಂತೆ ಸಜ್ಜುಗೊಳಿಸಿದರು. ಅದರ ಗುರಿಯೂ ಮುಂದೆ ಮೊಟ್ಟೆಯೊಡೆದು ಹುಟ್ಟುವ ಹೆಣ್ಣುಸೊಳ್ಳೆಗಳೇ.

ಸಾಮಾನ್ಯವಾಗಿ ಸೊಳ್ಳೆ ಕಚ್ಚಲು ಆರಂಭಿಸುವುದು ಗರ್ಭ ಧರಿಸಿದ ನಂತರ. ಆದರೆ ಗರ್ಭ ಧರಿಸುವ ಸ್ಥಿತಿಗೆ ತಲುಪುವ ಹೊತ್ತಿಗೆ ಹೆಣ್ಣುಸೊಳ್ಳೆಯೇ ಸಾಯುವಂತೆ ವಿಜ್ಞಾನಿಗಳು ತಳಿಯನ್ನು ಬದಲಾಯಿಸಿದ್ದಾರೆ.

ಆಕ್ಸಿಟೆಕ್ ಅಭಿವೃದ್ಧಿಪಡಿಸಿರುವ ಈ ಕುಲಾಂತರಿ ಸೊಳ್ಳೆಗಳು ಮುಂದಿನ 12 ವಾರಗಳಲ್ಲಿ ಸುಮಾರು 12 ಸಾವಿರ ಸೊಳ್ಳೆಗಳನ್ನು ಉತ್ಪತ್ತಿ ಮಾಡುವ ನಿರೀಕ್ಷೆ ಇದೆ. ಒಂದೊಮ್ಮೆ ನಿರೀಕ್ಷೆಯಂತೆ ಈ ಯೋಜನೆ ಯಶಸ್ಸು ಕಂಡಿದ್ದೇ ಆದಲ್ಲಿ, ಎರಡು ಕೋಟಿ ಕುಲಾಂತರಿ ಸೊಳ್ಳೆಯನ್ನು ಇದೇ ವರ್ಷದಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಕಂಪೆನಿ ಹೇಳಿದೆ.

ಇಂಥದ್ದೊಂದು ಕುಲಾಂತರಿ ಸೊಳ್ಳೆಯನ್ನು ಅಮೆರಿಕದಲ್ಲಿ ಪ್ರಯೋಗಿಸುವ ಮೊದಲು, ಕಂಪೆನಿಯು ಆ ಸೊಳ್ಳೆಗಳನ್ನು ಬ್ರೆಜಿಲ್, ಮಲೇಷಿಯಾ, ಪನಾಮದ ಆಯ್ದ ಭಾಗಗಳಲ್ಲಿ ಈ ಕುಲಾಂತರಿ ಸೊಳ್ಳೆಗಳನ್ನು ಹಾರಿಸಿದ್ದರು. ಅಲ್ಲಿ ಇದು ಶೇ 90ರಷ್ಟು ಪರಿಣಾಮಕಾರಿ ಮತ್ತು ನಿಸರ್ಗದ ಇತರ ಜೀವಿಗಳಿಗೆ ತೊಂದರೆ ಇಲ್ಲ ಎಂಬುದನ್ನು ವಿಜ್ಞಾನಿಗಳು ಅಮೆರಿಕದ ಎಫ್‌ಡಿಎಗೆ ಮನವರಿಕೆ ಮಾಡಿಕೊಟ್ಟಿತು. ಅಲ್ಲಿಂದ ಒಪ್ಪಿಗೆ ದೊರೆತ ಮೇಲೆ ಪ್ರಾಯೋಗಿಕವಾಗಿ ಸೊಳ್ಳೆಗಳನ್ನು ಕಂಪನಿ ವಾತಾವರಣಕ್ಕೆ ಬಿಟ್ಟಿದೆ.

ಆದರೆ ಈ ಕುಲಾಂತರಿ ತಳಿಯ ಬಳಕೆಗೆ ಅಮೆರಿಕದ ವಿವಿಧ ಇಲಾಖೆಗಳು ಒಪ್ಪಿಗೆ ಸೂಚಿಸಿದ್ದರೂ ಫ್ಲೋರಿಡಾದ ಜನ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕುಲಾಂತರಿ ಸೊಳ್ಳೆಯನ್ನು ತಂದು ಇಲ್ಲಿ ಬಿಟ್ಟಿರುವುದು ಅಕ್ಷಮ್ಯ ಎಂದು ಕಿಡಿಕಾರಿದ್ದಾರೆ. ಫ್ಲೋರಿಡಾ ವಿಜ್ಞಾನಿಗಳ ಪ್ರಯೋಗಾಲಯವಲ್ಲ ಎಂದು ಆಕ್ರೋಶ ಹೊರಹಾಕಿದ್ದಾರೆ. ಜತೆಗೆ ಪರಿಸರಕ್ಕೆ ಮಾರಕವಾಗಬಲ್ಲ ಕುಲಾಂತರಿ ಸೊಳ್ಳೆಯನ್ನು ಕೀಟನಾಶಕ ಸಿಂಪಡಿಸಿ ನಾಶಪಡಿಸುವ ಬೆದರಿಕೆಯನ್ನೂ ಹಾಕಿದ್ದಾರೆ. ಹೊಸ ತಂತ್ರಜ್ಞಾನ ಬಂದಾಗ ಇಂಥ ವಿರೋಧಗಳು ಸಾಮಾನ್ಯ ಎಂದಿರುವ ವಿಜ್ಞಾನಿಗಳು ಜನರ ಮನವೊಲಿಸುವ ಕೆಲಸ ಮಾಡುತ್ತಿದ್ದಾರೆ.

ಆದರೆ ಇಂಥ ಕುಲಾಂತರಿ ಕೀಟಗಳ ಅಭಿವೃದ್ಧಿ ಆಕ್ಸಿಟೆಕ್ ಕಂಪೆನಿಗೆ ಹೊಸತಲ್ಲ. ಈ ಹಿಂದೆ ಇದೇ ತಂತ್ರಜ್ಞಾನದಲ್ಲಿ ಡೈಮಂಡ್‌ಬ್ಯಾಕ್ ಎಂಬ ಚಿಟ್ಟೆಯನ್ನು ಇದೇ ಆಕ್ಸಿಟೆಕ್ ಕಂಪೆನಿಯು ನ್ಯೂಯಾರ್ಕ್‌ನಲ್ಲಿ ಹಾರಿಬಿಟ್ಟಿತ್ತು. ಅಷ್ಟು ಮಾತ್ರವಲ್ಲ ಗುಲಾಬಿ ಬಾಲ್‌ವರ್ಮ್ ಅನ್ನೂ ಅಭಿವೃದ್ಧಿಪಡಿಸಿ ಅರಿಝೋನಾದಲ್ಲಿ ಬಿಡುಗಡೆ ಮಾಡಿತ್ತು. ಇದೀಗ ಈ ಕುಲಾಂತರಿ ಸಂತತಿಗೆ ಏಡೀಸ್ ಈಜಿಪ್ಟೈ ಮತ್ತೊಂದು ಸೇರ್ಪಡೆ.

ಆಕ್ಸಿಟೆಕ್ ಕಂಪೆನಿ ಈಗ ಈ ಕುಲಾಂತರಿ ಸೊಳ್ಳೆಗಳನ್ನು ಭಾರತದಲ್ಲಿ ಹಾರಿಬಿಡುವ ಯೋಜನೆಯನ್ನೂ ರೂಪಿಸಿದೆ. ಭವಿಷ್ಯದ ತಂತ್ರಜ್ಞಾನದ ಭಾಗವಾಗಿ ಬೆಳೆ ನಾಶ ಮಾಡುವ ಹಾನಿಕಾರಕ ಕೀಟಗಳನ್ನು ನಾಶ ಮಾಡಲು ಇಂತಹ ಜೈವಿಕ ಕೀಟ ನಾಶಕಗಳನ್ನು ಬಳಸುವ ಹೊಸ ಸಾಧ್ಯತೆಯ ಕುರಿತು ವಿಜ್ಞಾನಿಗಳು ಸುಳಿವು ನೀಡಿದ್ದಾರೆ.

ಆದರೆ, ಈ ಕುಲಾಂತರಿ ಸೊಳ್ಳೆಯು ಜೈವಿಕ ತಂತ್ರಜ್ಞಾನದಲ್ಲಿ ಹೊಸ ಸಾಧ್ಯತೆಯನ್ನು ಹುಟ್ಟುಹಾಕಿದೆ. ಜಗತ್ತಿನಲ್ಲಿ 5ಲಕ್ಷ ಮಕ್ಕಳನ್ನು ಬಲಿ ಪಡೆದಿರುವ ಮಲೇರಿಯಾ ಹರಡುವ ಅನಾಫಿಲಿಸ್, ಡೆಂಗೀ ಹರಡುವ ಏಡೀಸ್‌ಗಳ ನಿಯಂತ್ರಣಕ್ಕೂ ಹೊಸ ಮಾರ್ಗೋಪಾಯ ದೊರೆತಂತಾಗಿದೆ. ❖

ಒನ್‌ಪ್ಲಸ್ 9 ಪ್ರೊ

ವೇಗದಲ್ಲೂ ಚಿತ್ರದಲ್ಲೂ ಸ್ಮಾರ್ಟ್

ವಿಶ್ವನಾಥ ಎಸ್.

ಪ್ರೀಮಿಯಂ ಸ್ಮಾರ್ಟ್‌ಫೋನ್ ವಿಭಾಗದಲ್ಲಿ ತನ್ನದೇ ಆದ ಛಾಪು ಮೂಡಿಸುತ್ತಿರುವ ಒನ್‌ಪ್ಲಸ್ ಕಂಪನಿಯು ತನ್ನ ಹ್ಯಾಂಡ್‌ಸೆಟ್‌ಗಳ ಗುಣಮಟ್ಟ ಮತ್ತು ವೈಶಿಷ್ಟ್ಯದಲ್ಲಿ ಸಾಕಷ್ಟು ಬದಲಾವಣೆ ಮಾಡುತ್ತಾ ಬಂದಿದೆ. ತಂತ್ರಜ್ಞಾನದಲ್ಲಿ ಆಗುತ್ತಿರುವ ಬದಲಾವಣೆ ಮತ್ತು ಗ್ರಾಹಕರ ಅಭಿರುಚಿಗೆ ಅನುಗುಣವಾಗಿ ಹೊಸ ವೈಶಿಷ್ಟ್ಯಗಳನ್ನು ನೀಡುತ್ತಿದೆ. ಈಚೆಗೆ ಬಿಡುಗಡೆ ಆಗಿರುವ ಒನ್‌ಪ್ಲಸ್ 9 ಪ್ರೊ ಕ್ಯಾಮೆರಾದ ಗುಣಮಟ್ಟದಲ್ಲಿ ಉತ್ತಮವಾಗಿದೆ. ಒನ್‌ಪ್ಲಸ್ 9 ಸರಣಿಯಲ್ಲಿ ಕ್ಯಾಮೆರಾದ ಗುಣಮಟ್ಟ ಸುಧಾರಣೆಗಾಗಿ ವೃತ್ತಿಪರ ಕ್ಯಾಮೆರಾ ತಯಾರಿಸುವ ಹ್ಯಾಸೆಲ್‌ಬ್ಲಾಡ್ ಕಂಪನಿಯ ಜೊತೆ ಒಪ್ಪಂದ ಮಾಡಿಕೊಂಡಿದೆ. ಇದರಿಂದಾಗಿ ಸಹಜ ಬೆಳಕಿನಲ್ಲಿ ಅಷ್ಟೇ ಅಲ್ಲದೆ, ಮಂದ ಬೆಳಕಿನಲ್ಲಿ, ದೀಪದ ಬೆಳಕಿನಲ್ಲಿಯೂ ಚಿತ್ರದ ಗುಣಮಟ್ಟದಲ್ಲಿ ಸಾಕಷ್ಟು ಸುಧಾರಣೆ ಕಂಡುಬಂದಿದೆ. ಒನ್‌ಪ್ಲಸ್ 9 ಹ್ಯಾಂಡ್‌ಸೆಟ್‌ಗಿಂತಲೂ 9 ಪ್ರೊದಲ್ಲಿ ಚಿತ್ರಗಳ ಬಣ್ಣ, ಸಹಜತೆ ಮತ್ತು ಬೆಳಕಿನ ಸಂಯೋಜನೆ ಅತ್ಯುತ್ತಮವಾಗಿದೆ.

ವಿನ್ಯಾಸದಲ್ಲಿ ಒನ್‌ಪ್ಲಸ್ 9 ಪ್ರೊ, ಅಲ್ಯುಮಿನಿಯಂ ಮತ್ತು ಗ್ಲಾಸ್ ಬಾಡಿಯನ್ನು ಹೊಂದಿದ್ದು ಗಟ್ಟಿಮುಟ್ಟಾಗಿದೆ. ಹಿಂಬದಿಯಲ್ಲಿ ಕ್ಯಾಮೆರಾ ವಿನ್ಯಾಸವು ಉಬ್ಬಾಗಿರುವುದರಿಂದ ಬ್ಯಾಕ್ ಕವರ್ ಬಳಸದೇ ಇದ್ದರೆ ಸ್ಕ್ರ್ಯಾಚ್ ಆಗುತ್ತದೆ. ಆದರೆ ಬ್ಯಾಕ್‌ಕವರ್ ಬಳಸದೇ ಇದ್ದರೆನೇ ಫೋನ್ ಹೆಚ್ಚು ಅಂದವಾಗಿ ಕಾಣುತ್ತದೆ.

ಫೋನ್‌ನ ಕಾರ್ಯಾಚರಣೆಯ ಬಗ್ಗೆ ಹೇಳುವುದಾದರೆ, ಆಂಡ್ರಾಯ್ಡ್ 11 ಬೆಂಬಲಿತ ಆಕ್ಸಿಜನ್ ಒಎಸ್ ಇದ್ದು, ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ 888 ಪ್ರೊಸೆಸರ್ ಒಳಗೊಂಡಿದೆ. ಹೈ ಡೆಫನೀಷನ್ ವಿಡಿಯೊ ನೋಡುವಾಗ ಮತ್ತು ಹೆಚ್ಚಿನ ಸಾಮರ್ಥ್ಯ ಬೇಡುವ ಗೇಮ್‌ಗಳನ್ನು ಆಡುವಾಗ ಯಾವುದೇ ತೊಡಕು ಉಂಟಾಗದು.

ಫೋನ್ ಪರದೆಯ ಮೇಲ್ಭಾಗದ ಎಡ ತುದಿಯಲ್ಲಿ ಹೋಲ್ ಪಂಚ್ ಡಿಸ್‌ಪ್ಲೇ ಅಳವಡಿಸಲಾಗಿದೆ. 6.7 ಇಂಚಿನ ಪರದೆಯು 125 ಗಿಗಾಹರ್ಟ್ಸ್ ರಿಫ್ರೆಷ್ ರೇಟ್ ಹೊಂದಿದೆ. ಬ್ರೈಟ್ ನೆಸ್ ಉತ್ತಮವಾಗಿದೆ. ಮಂದ ಬೆಳಕಿದ್ದರೂ, ಬಿರು ಬಿಸಿಲಿನಲ್ಲಿಯೂ ಪರದೆಯು ಸ್ಪಷ್ಟವಾಗಿ ಕಾಣಿಸುತ್ತದೆ. ಇದರ ಫಿಂಗರ್ ಪ್ರಿಂಟ್ ಸೆನ್ಸರ್ ಉತ್ತಮವಾಗಿದೆ. ಕ್ಷಣದಲ್ಲೇ ಸ್ಕ್ರೀನ್ ಅನ್ ಲಾಕ್ ಆಗುತ್ತದೆ.

4,500 ಎಂಎಎಚ್ ಬ್ಯಾಟರಿ ಇದೆ. ಇದು ತುಸು ಕಡಿಮೆಯೇ ಅನ್ನಿಸಿದರೂ ವೇಗದ ಚಾರ್ಜಿಂಗ್ ವ್ಯವಸ್ಥೆ ಇರುವುದರಿಂದ ಹೆಚ್ಚಿನ ಸಮಸ್ಯೆ ಆಗದು. ಚಾರ್ಜ್ ಆಗುವಾಗ ವಯರ್ ಅಥವಾ ವಯರ್ ಲೆಸ್ ಆಗಲಿ, ಮೊಬೈಲ್ ಬಿಸಿಯಾಗುತ್ತದೆ. ಕಂಪನಿಯ ಈ ಹಿಂದಿನ ಫೋನ್ ಗಳಿಗೆ ಹೋಲಿಸಿದರೆ ಇದು ತುಸು ಹೆಚ್ಚೇ ಬಿಸಿ ಆಗುತ್ತಿದೆ. ಫೋನ್ ರಿವ್ಯುಗೆ ಬಂದ ಮೊದಲ ದಿನ ವಯರ್ ಲೆಸ್ ಚಾರ್ಜ್ ಆಗಲು ಸುಮಾರು 2 ಗಂಟೆ 30 ನಿಮಿಷ ಬೇಕಾಯಿತು. ಆ ಬಳಿಕ ಒಂದು ಬಾರಿ ಸಾಫ್ಟ್‌ವೇರ್ ಅಪ್ ಡೇಟ್ ಆದ ಬಳಿಕ ಬ್ಯಾಟರಿ ಪೂರ್ತಿ ಚಾರ್ಜ್ ಆಗಲು 45 ನಿಮಿಷ ತೆಗೆದುಕೊಳ್ಳಲು ಆರಂಭಿಸಿತು. ವಯರ್ ಚಾರ್ಜಿಂಗ್‌ನಲ್ಲಿ 30 ನಿಮಿಷ ಬೇಕಾಗುತ್ತದೆ.

ವೈಶಿಷ್ಟ್ಯ

- ಪರದೆ: 6.7 ಇಂಚು, 120 ಹರ್ಟ್ ಫ್ಲುಯೆಡ್ ಡಿಸ್ ಪ್ಲೇ
- ಒಎಸ್; ಆಂಡ್ರಾಯ್ಡ್ 11 ಬೆಂಬಲಿತ ಆಕ್ಸಿಜನ್ ಒಎಸ್
- ಪ್ರೊಸೆಸರ್: ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ 888, 5G
- ಕ್ಯಾಮೆರಾ: 48 + 50 + 8 + 2 ಎಂಪಿ
- ಸೆಲ್ಫಿ: 16 ಎಂಪಿ
- ಬ್ಯಾಟರಿ: 4,500 ಎಂಎಎಚ್
- ಬೆಲೆ: 8 GB RAM + 128 GB- ₹64,999. 12 GB RAM + 256 GB ₹**69,999**

ಎಸ್‌ಎಂಎಸ್‌ನಲ್ಲಿ ಲಸಿಕೆ ಮಾಹಿತಿ!

ಗೋವರ್ಧನ ಎಸ್.ಎನ್.

ಕೋವಿಡ್–19 ಎರಡನೇ ಅಲೆ ತೀವ್ರಗತಿಯಲ್ಲಿ ಹರಡುತ್ತಿರುವ ಈ ಸಂದರ್ಭದಲ್ಲಿ ಕೋವಿಡ್ ಲಸಿಕೆ ಪಡೆಯಲು ಜನರು ಮುಗಿಬೀಳುತ್ತಿದ್ದಾರೆ. ಆದರೆ ಲಸಿಕೆ ಪಡೆಯುವ ಸಮಯ ಲಭ್ಯತೆ ಕಂಡುಕೊಳ್ಳುವ ಬಗ್ಗೆ ಹಲವರಿಗೆ ತಿಳಿವಳಿಕೆ ಇಲ್ಲ. ಇದನ್ನು ನೀಗಿಸಲೆಂದೇ VaccinateMe.in ಆ್ಯಪ್ ಕನ್ನಡ ಸೇರಿದಂತೆ ಭಾರತದ 11 ಭಾಷೆಗಳಲ್ಲಿ ಸೇವೆ ಒದಗಿಸುತ್ತಿದೆ.

ಈ ಆ್ಯಪ್ ಬಳಸಿ ಲಸಿಕೆ ಪಡೆಯುವ ಸಮಯ ಕಂಡುಕೊಳ್ಳಬಹುದು. ಒಂದು ವೇಳೆ ಸದ್ಯದ ಮಟ್ಟಿಗೆ ಲಸಿಕೆ ಪಡೆಯುವ ಸಮಯ ಲಭ್ಯವಿಲ್ಲದಿದ್ದಲ್ಲಿ, ಸೈನ್‌ಅಪ್ ಮಾಡಿಕೊಂಡಲ್ಲಿ ಸಮಯ ಲಭ್ಯವಾಗುತ್ತಿದ್ದಂತೆ ಎಸ್‌ಎಂಎಸ್ ಅಲರ್ಟ್ ಸಹ ನೀಡುತ್ತದೆ. ಆಯಾ ಭಾಷೆಯಲ್ಲಿ ಮಾಹಿತಿ ಲಭ್ಯವಾಗುವುದರಿಂದ ಜನರಿಗೆ ಸುಲಭವಾಗಿ ಮಾಹಿತಿ ಸಿಗುತ್ತದೆ.

ಹೆಚ್ಚು ಜನರು ಗೊಂದಲವಿಲ್ಲದಂತೆ ಲಸಿಕಾ ಅಭಿಯಾನದಲ್ಲಿ ಭಾಗವಹಿಸುವಂತೆ ಮಾಡಲು ಕೃತಕ ಬುದ್ಧಿಮತ್ತೆ ಹಾಗೂ ಫಿಟ್‌ನೆಸ್ ಆ್ಯಪ್ ಹೆಲ್ತಿಫೈಮಿ ಈ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದೆ. ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ, ಗುಜರಾತಿ, ತೆಲುಗು, ತಮಿಳು, ಬಂಗಾಳಿ, ಒಡಿಯಾ, ಪಂಜಾಬಿ ಹಾಗೂ ಮಲೆಯಾಳಂ ಭಾಷೆಗಳಲ್ಲಿ ಈ ಸೇವೆ ಲಭ್ಯವಿದೆ. ಇಂಗ್ಲಿಷ್ ಭಾಷೆಯಲ್ಲಿ ವೆಬ್‌ಸೈಟ್ ಹಾಗೂ ವಾಟ್ಸ್‌ಆ್ಯಪ್‌ನಲ್ಲಿ ಈಗಾಗಲೇ ಅಲರ್ಟ್ ನೀಡಲಾಗುತ್ತಿದ್ದು, ಪ್ರಾದೇಶಿಕ ಭಾಷೆಗಳಲ್ಲಿ ಎಸ್‌ಎಂಎಸ್ ಮಾಹಿತಿಯನ್ನೂ ಸೇರ್ಪಡೆ ಮಾಡಲಾಗಿದೆ.

'ದೇಶದಾದ್ಯಂತ 700 ಕ್ಕೂ ಅಧಿಕ ಜಿಲ್ಲೆಗಳಲ್ಲಿ 3 ದಶಲಕ್ಷ ಜನರು ಇದರ ನೆರವು ಪಡೆದಿದ್ದಾರೆ. ಮೈಸೂರು, ಕೊಚ್ಚಿ, ಕೊಯಮತ್ತೂರು, ತಿರುವನಂತಪುರ, ವಿಶಾಖಪಟ್ಟಣ, ಮಂಗಳೂರು, ಕೊಟ್ಟಾಯಂ, ತಿರುಪತಿ ಮೊದಲಾದ ಮಹಾನಗರಗಳಲ್ಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಆ್ಯಪ್ ಆರಂಭವಾದ ಮೊದಲ ದಿನವೇ 2.5 ಲಕ್ಷ ಜನರು ನೋಂದಾಯಿಸಿಕೊಂಡಿದ್ದರು. ಸುಮಾರು 5 ಲಕ್ಷ ಜನರು ಪ್ರತಿನಿತ್ಯ ಆ್ಯಪ್ ಬಳಸುತ್ತಿದ್ದಾರೆ. 21 ಲಕ್ಷ ಜನರಿಗೆ ಲಸಿಕೆ ಪಡೆಯುವ ಸಮಯದ ಲಭ್ಯತೆಯನ್ನು ಎಸ್‌ಎಂಎಸ್ ಮೂಲಕ ರವಾನಿಸಲಾಗಿದೆ' ಎನ್ನುತ್ತಾರೆ ಹೆಲ್ತಿಫೈಮಿಯ ಸಹ ಸಂಸ್ಥಾಪಕ ಹಾಗೂ ಸಿಇಒ ತುಷಾರ್ ವಸಿಷ್ಠ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ರಚನೆಗಳು

(ಮುಂದುವರಿದ ಭಾಗ)

ಗಣಿತ

ಎಸ್ಸೆಸ್ಸೆಲ್ಸಿ

ರಚನಾ ಹಂತಗಳು



Fig. 11.3

1. ಶೃಂಗ A ಯ ಅಭಿಮುಖ ಬಾಹು BC ಯೊಂದಿಗೆ ಲಘುಕೋನ ಏರ್ಪಡುವಂತೆ ಒಂದು ಕಿರಣ BX ನ್ನು ಎಳೆಯಿರಿ.
2. $BB_1 = B_1B_2 = B_2B_3 = B_2B_4$ ಆಗುವಂತೆ BX ನ ಮೇಲೆ B_1, B_2, B_3, B_4 ಬಿಂದುಗಳನ್ನು (3/4 ರಲ್ಲಿನ 3 ಮತ್ತು 4 ರಲ್ಲಿ ದೊಡ್ಡದು) ಗುರುತಿಸಿ.
3. B_4,C ಸೇರಿಸಿ ಮತ್ತು B_4,C ಗೆ ಸಮಾನಾಂತರವಾಗಿರುವಂತೆ B3 (3ನೇ ಬಿಂದು, 3/4 ರಲ್ಲಿನ 3 ಮತ್ತು 4 ರಲ್ಲಿ ಚಿಕ್ಕದು) ಮೂಲಕ ಒಂದು ರೇಖೆಯನ್ನು ಎಳೆಯಿರಿ, ಇದು BC ಯನ್ನು C' ನಲ್ಲಿ ಛೇದಿಸಲಿ.
4. CA ಗೆ ಸಮಾಂತರವಾಗಿರುವಂತೆ C' ನ ಮೂಲಕ ಒಂದು ರೇಖೆಯನ್ನು ಎಳೆಯಿರಿ. ಇದು BA ಯನ್ನು A' ನಲ್ಲಿ ಛೇದಿಸಲಿ (ಚಿತ್ರ 6.3ನ್ನು ನೋಡಿ) ಈಗ $\Delta A'BC'$ ಯು ಅಪೇಕ್ಷಿತ ತ್ರಿಭುಜವಾಗಿದೆ.

ಈ ರಚನೆಯಿಂದ ಅಪೇಕ್ಷಿತ ತ್ರಿಭುಜವು ಹೇಗೆ ದೊರೆಯಿತು ಎಂಬುದನ್ನು ಈಗ ನೋಡೋಣ.

ರಚನೆ 6.1 ರಿಂದ $\frac{BC'}{C'C} = \frac{3}{1}$

$$\therefore \frac{BC}{BC'} = \frac{BC' + C'C}{BC'}$$

$$= 1 + \frac{C'C}{BC'}$$

$$= 1 + \frac{1}{3}$$

$$= \frac{4}{3} \quad \text{ಅಂದರೆ} \quad \frac{BC'}{BC} = \frac{4}{3}$$

ಇದಲ್ಲದೆ $C'A' \parallel CA. \therefore \Delta A'BC' \sim \Delta ABC$ (ಏಕೆ?)

$$\therefore \frac{A'B}{AB} = \frac{A'C'}{AC} = \frac{BC'}{BC} = \frac{3}{4}$$

ಒಂದು ಆವೃತ್ತಕ್ಕೆ ಸ್ಪರ್ಶಕಗಳನ್ನು ರಚಿಸುವುದು

ಅಧ್ಯಾಯ 4 ರಲ್ಲಿ ವೃತ್ತದ ಕೆಳಗೆ ಒಂದು ಬಿಂದುವಿನ ಮೂಲಕ ವೃತ್ತಕ್ಕೆ ಸ್ಪರ್ಶಕ ಎಳೆಯಲು ಸಾಧ್ಯವೇ ಇಲ್ಲ ಎಂಬುದನ್ನು ಈಗಾಗಲೇ ತಿಳಿದಿದ್ದೀರಿ. ಆದರೆ ವೃತ್ತದ ಮೇಲಿನ ಒಂದು ಬಿಂದುವಿನಲ್ಲಿ ವೃತ್ತಕ್ಕೆ ಒಂದು ಸ್ಪರ್ಶಕ ಮಾತ್ರ ಇರುತ್ತದೆ ಮತ್ತು ಇದು ಆ ಬಿಂದುವಿನಿಂದ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ. ಆದ್ದರಿಂದ ನೀವು ವೃತ್ತದ ಮೇಲಿನ ಒಂದು ಬಿಂದುವಿನ ಮೂಲಕ ಒಂದು ಸ್ಪರ್ಶಕ ಎಳೆಯಲು, ಸರಳವಾಗಿ ಆ ಬಿಂದುವಿನಿಂದ ತ್ರಿಜ್ಯವನ್ನು ಎಳೆದು, ಆ ತ್ರಿಜ್ಯಕ್ಕೆ ಅದೇ ಬಿಂದುವಿನಲ್ಲಿ ಲಂಬರೇಖೆಯನ್ನು ಎಳೆದರೆ ಅದು ಅಪೇಕ್ಷಿತ ಸ್ಪರ್ಶಕವಾಗುತ್ತದೆ.

ಒಂದು ಬಿಂದುವು ವೃತ್ತದ ಹೊರಗಿದ್ದರೆ, ಆ ಬಿಂದುವಿನಿಂದ ವೃತ್ತಕ್ಕೆ ಎರಡು ಸ್ಪರ್ಶಕಗಳನ್ನು ಎಳೆಯಬಹುದು ಎಂಬುದನ್ನು ಸಹ ನೀವು ನೋಡಿದ್ದೀರಿ.

ಈಗ ನಾವು ಇಂತಹ ಸ್ಪರ್ಶಕಗಳನ್ನು ರಚಿಸುವುದು ಹೇಗೆ ಎಂದು ನೋಡೋಣ.

ರಚನೆ: 6.3 : ವೃತ್ತದ ಹೊರಗಿನ ಒಂದು ಬಿಂದುವಿನಿಂದ ವೃತ್ತಕ್ಕೆ ಸ್ಪರ್ಶಕಗಳನ್ನು ರಚಿಸುವುದು.

'O' ಕೇಂದ್ರವಿರುವ ವೃತ್ತವನ್ನು ಮತ್ತು ವೃತ್ತದ ಹೊರಗಿನ ಒಂದು P ಯನ್ನು ನೀಡಲಾಗಿದೆ. P ಬಿಂದುವಿನಿಂದ ವೃತ್ತಕ್ಕೆ ಎರಡು ಸ್ಪರ್ಶಕಗಳನ್ನು ನಾವು ರಚಿಸಬೇಕಾಗಿದೆ.

ರಚನಾ ಹಂತಗಳು

1. P, O ಸೇರಿಸಿ ಮತ್ತು ಅದನ್ನು ಅರ್ಧಿಸಿ, PO ನ ಮಧ್ಯಬಿಂದು M ಆಗಿರಲಿ.
2. M ಅನ್ನು ಕೇಂದ್ರವಾಗಿಸಿರಿ MO ತ್ರಿಜ್ಯದಿಂದ, ಒಂದು ವೃತ್ತವನ್ನು ಎಳೆಯಿರಿ. ಇದು ದತ್ತ ವೃತ್ತವನ್ನು Q ಮತ್ತು R ಬಿಂದುಗಳನ್ನು ಛೇದಿಸಲಿ.
3. P, Q ಮತ್ತು P, R ಸೇರಿಸಿ

ಈಗ PQ ಮತ್ತು PR ಗಳು ಅಪೇಕ್ಷಿತ ಎರಡು ಸ್ಪರ್ಶಕಗಳಾಗಿವೆ.

ಈಗ ಈ ರಚನೆಯು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ನೋಡೋಣ.

O,Q ಸೇರಿಸಿ. ಅರ್ಧವೃತ್ತಖಂಡದ ಕೋನವಾಗಿದೆ. $\angle PQO = 90^o$

$$\therefore \angle PQO = 90^o$$

ಈಗ $PQ \perp OQ$

ಎಂದು ಹೇಳಲು ಸಾಧ್ಯವೇ?



OQ ಎಂಬುದು ದತ್ತ ವೃತ್ತದ ತ್ರಿಜ್ಯವಾದುದರಿಂದ PQ ವು ವೃತ್ತಕ್ಕೆ ಸ್ಪರ್ಶಕವಾಗಬೇಕು. ಇದೇ ರೀತಿ PR ಕೂಡ ವೃತ್ತಕ್ಕೆ ಸ್ಪರ್ಶಕವಾಗಿದೆ.

ಸೂಚನೆ: ವೃತ್ತದ ಕೇಂದ್ರವನ್ನು ನೀಡದಿದ್ದಾಗ, ಯಾವುದೇ ಎರಡು ಸಮಾನಾಂತರವಲ್ಲದ ಜ್ಯಾಗಳನ್ನು ಎಳೆದು, ಅವುಗಳ ಲಂಬಾರ್ಧಕಗಳು ಛೇದಿಸುವ ಬಿಂದುವನ್ನೇ ವೃತ್ತದ ಕೇಂದ್ರವೆಂದು ಗುರುತಿಸಬಹುದು. ನಂತರ ನೀವು ಮೇಲಿನಂತೆ ಮುಂದುವರಿಯಬಹುದು. ❖

ಲೋಹ ಕಾರ್ಬೋನಿಲ್‌ಗಳಲ್ಲಿ ಬಂಧ

ರಸಾಯನ ಶಾಸ್ತ್ರ

ದ್ವಿತೀಯ ಪಿಯುಸಿ

ಹೋಮೋಲೆಪ್ಟಿಕ್ ಕಾರ್ಬೋನಿಲ್‌ಗಳು (ಕೇವಲ ಕಾರ್ಬೋನಿಲ್ ಲಿಗ್ಯಾಂಡ್‌ಗಳನ್ನು ಹೊಂದಿರುವ ಸಂಯುಕ್ತಗಳು) ಅತ್ಯಧಿಕ ಸಂಖ್ಯೆಯ ಸಂಕ್ರಮಣ ಲೋಹಗಳಿಂದ ನಿರ್ಮಾಣವಾಗಿದೆ. ಈ ಕಾರ್ಬೋನಿಲ್‌ಗಳಿಗೆ ಸರಳ, ಸುಸ್ಪಷ್ಟ ರಚನೆಗಳಿವೆ. ಟೆಟ್ರಾಕಾರ್ಬೋನಿಲ್ ನಿಕ್ಕಲ್ (0) ಚತುರ್ಮುಖೀಯ, ಪೆಂಟಾಕಾರ್ಬೋನಿಲ್ ಐರನ್ (0), ತ್ರಿಕೋನಿಯ ದ್ವಿ ಪಿರಾಮಿಡ್ ಮತ್ತು ಹೆಕ್ಸಾಕಾರ್ಬೋನಿಲ್ ಕ್ರೋಮಿಯಂ (0) ಅಷ್ಟಮುಖಿಯ ಸಂಕೀರ್ಣವಾಗಿದೆ.



ಡೆಕಾಕಾರ್ಬೋನಿಲ್ ಡೈಮ್ಯಾಂಗನೀಸ್ (0) ಇದು ಎರಡು ಚೌಕ ಪಿರಾಮಿಡ್ Mn(CO)5 ಘಟಕಗಳಿಂದ Mn-Mn ಬಂಧದ ಮೂಲಕ ರಚನೆಯಾಗಿದೆ. ಆಕ್ಟಾಕಾರ್ಬೋನಿಲ್ ಡೈಕೋಬಾಲ್ಟ್ (0) ಸಂಕೀರ್ಣಕ್ಕೆ ಒಂದು Co-Co ಬಂಧವು ಎರಡು CO ಗುಂಪುಗಳಿಂದ ಸೇತುವೆಯಾಗಿ ನಿರ್ಮಾಣವಾಗಿದೆ.



ಲೋಹ-ಇಂಗಾಲದ ಬಂಧವು ಲೋಹದ ಕಾರ್ಬೋನಿಲ್‌ಗಳಲ್ಲಿ ಮತ್ತು ಎರಡೂ ಲಕ್ಷಣಗಳನ್ನು ಹೊಂದಿದೆ. M-C, ಬಂಧವು ಕಾರ್ಬೋನಿಲ್ ಕಾರ್ಬನ್‌ನ ಮೇಲೆ ಇರುವ ಯುಗ್ಮ ಎಲೆಕ್ಟ್ರಾನ್‌ಗಳು ಲೋಹದ ಖಾಲಿ ಕಕ್ಷಕ್ಕೆ ದಾನ ಮಾಡುವುದರಿಂದ ಉಂಟಾಗುತ್ತದೆ. M-C ಬಂಧವು ಲೋಹದ ಯುಗ್ಮ ಎಲೆಕ್ಟ್ರಾನ್‌ಗಳು ತುಂಬಿದ ಕಕ್ಷದಿಂದ ಕಾರ್ಬನ್ ಮೊನಾಕ್ಸೈಡ್‌ನ ಖಾಲಿ ಇರುವ ವಿರುದ್ಧ ಬಂಧೀಯ ಕಕ್ಷಕ್ಕೆ ದಾನ ಮಾಡುವುದರಿಂದ ಉಂಟಾಗುತ್ತದೆ. ಲೋಹ ಮತ್ತು ಲಿಗ್ಯಾಂಡ್‌ಗಳ ಮಧ್ಯದ ಬಂಧವು ಸಹ ಕ್ರಿಯಾಶೀಲ ಪರಿಣಾಮವನ್ನು ಉಂಟು ಮಾಡುತ್ತದೆ ಮತ್ತು ಇದು ಲೋಹ ಮತ್ತು ನಡುವಿನ ಬಂಧವನ್ನು ಬಲಪಡಿಸುತ್ತದೆ.

ಸಮನ್ವಯಿ ಸಂಯುಕ್ತಗಳ ಸ್ಥಿರತೆ

ಒಂದು ದ್ರಾವಣದಲ್ಲಿ ಒಂದು ಸಂಕೀರ್ಣದ ಸ್ಥಿರತೆ, ಸಮಸ್ಥಿತಿಯಲ್ಲಿ ಒಳಗೊಂಡಿರುವ ಎರಡು ಪ್ರಭೇದಗಳ ಸಂಯೋಜನೆಯ ಅಂಶಕ್ಕೆ ಪೂರಕವಾಗಿದೆ. ಸಂಯೋಜನೆಗೆ ಸಂಬಂಧಿಸಿದ ಸಮಸ್ಥಿತಿ ಸ್ಥಿರಾಂಕದ ಪ್ರಮಾಣ (ಸ್ಥಿರತೆ ಅಥವಾ ನಿರ್ಮಾಣ), ಪರಿಮಾಣಾತ್ಮಕವಾಗಿ ಸ್ಥಿರತೆಯನ್ನು ವ್ಯಕ್ತಪಡಿಸುತ್ತದೆ.

ಹೀಗಾಗಿ ನಮಗೆ, M + 4L ML4 ತರಹದ ಕ್ರಿಯೆ ಇದ್ದಾಗ,

ಸ್ಥಿರತೆ ಸ್ಥಿರಾಂಕದ ಮೌಲ್ಯ ಹೆಚ್ಚಾದಂತೆ ದ್ರಾವಣದಲ್ಲಿ ML4 ನ ಅಸ್ತಿತ್ವದ ಪ್ರಮಾಣವೂ ಹೆಚ್ಚಾಗುತ್ತದೆ, ಸ್ವತಂತ್ರ ಲೋಹದ ಅಯಾನ್‌ಗಳ ಅಸ್ತಿತ್ವವು ದ್ರಾಣವದಲ್ಲಿ ವಿರಳವಾಗಿದೆ. ಹೀಗಾಗಿ M ಸಾಮಾನ್ಯವಾಗಿ ದ್ರಾವಕದ ಅಣುಗಳಿಂದ ಸುತ್ತುವರಿದು ಇವು ಲಿಗ್ಯಾಂಡ್ ಅಣುಗಳೊಂದಿಗೆ L ಸ್ಪರ್ಧೆಗಿಳಿದು ಹಂತಾನುಹಂತವಾಗಿ ಲಿಗ್ಯಾಂಡ್ ಅಣುಗಳು ದ್ರಾವಕದ ಅಣುಗಳನ್ನು ಸ್ಥಾನಪಲ್ಲಟಗೊಳಿಸುತ್ತವೆ. ನಾವು ಸರಳತೆಗಾಗಿ ಈ ದ್ರಾವಕದ ಅಣುಗಳನ್ನು ನಿರ್ಲಕ್ಷಿಸುತ್ತೇವೆ ಮತ್ತು ನಾವು 4 ಸ್ಥಿರತೆ ಸ್ಥಿರಾಂಕಗಳನ್ನು ಹೀಗೆ ಬರೆಯುತ್ತೇವೆ.

$$M + L \rightleftharpoons ML_1 \quad K_1 = [ML_1]/[M][L]$$

$$ML + L \rightleftharpoons ML_2 \quad K_2 = [ML_2]/[M][L]$$

$$ML_2 + L \rightleftharpoons ML_3 \quad K_3 = [ML_3]/[ML_2][L]$$

$$ML_3 + L \rightleftharpoons ML_4 \quad K_4 = [ML_4]/[ML_3][L]$$

ಇಲ್ಲಿ K1, K2 ಮುಂತಾದವುಗಳನ್ನು ಹಂತಹಂತದ ಸ್ಥಿರತೆಯ ಸ್ಥಿರಾಂಕ ಎಂದು ಕರೆಯುತ್ತಾರೆ. ಪರ್ಯಾಯವಾಗಿ ಸಮಗ್ರ ಸ್ಥಿರತೆಯ ಸ್ಥಿರಾಂಕವನ್ನು ಈ ರೀತಿ ಬರೆಯಬಹುದು.

$$M + 4L \rightleftharpoons ML_4 \quad \beta_4 = \frac{[ML_4]}{[M][L]^4}$$

ಹಂತಾನು ಹಂತದ ಸ್ಥಿರತೆಯ ಸ್ಥಿರಾಂಕ ಮತ್ತು ಸಮಗ್ರ ಸ್ಥಿರತೆಯ ಸ್ಥಿರಾಂಕ ಒಂದಕ್ಕೊಂದು ಈ ರೀತಿ ಸಂಬಂಧವನ್ನು ಹೊಂದಿದೆ.

= K1 * K2 * K3 * K4 ಅಥವಾ ಇನ್ನೂ ಸಾಧಾರಣವಾಗಿ
= K1 * K2 * K3 * K4 ..... Kn

ಉದಾಹರಣೆ:

$$Cu^{2+} + NH_3 \rightleftharpoons Cu(NH_3)^{2+} \quad K_1 = Cu(NH_3)^{2+}/[Cu^{2+}][NH_3]$$

$$Cu(NH_3)^{2+} + NH_3 \rightleftharpoons Cu(NH_3)^{2+} \quad K_2 = [Cu(NH_3)]^{2+}/[Cu(NH_3)^{2+}][NH_3]$$

ಇಲ್ಲಿ k_1 k_2ಮುಂತಾದವುಗಳು ಹಂತ ಹಂತದ ಸ್ಥಿರತೆಯ ಸ್ಥಿರಾಂಕ ಮತ್ತು ಸಮಗ್ರ ಸ್ಥಿರತೆಯ ಸ್ಥಿರಾಂಕ

$$\beta_4 = [Cu(NH_3)_4]^{2+} / [Cu^{2+}][NH_3]^4$$

ತಾಮ್ರಕ್ಕೆ ನಾಲ್ಕು ಅಮೈನ್ ಗುಂಪುಗಳನ್ನು ಸೇರಿಸಿದಾಗ ನಿರ್ಮಾಣ ಸ್ಥಿರಾಂಕಗಳಿಗೆ ಹೆಚ್ಚಾಗಿ ಕಂಡು ಬರುವ ಒಂದು ಮಾದರಿಯನ್ನು ತೋರಿಸುತ್ತದೆ. ಅದರಲ್ಲಿ ಉತ್ತರೋತ್ತರ ಸ್ಥಿರತೆಯ ಸ್ಥಿರಾಂಕಗಳು ಕಡಿಮೆಯಾಗುತ್ತವೆ. ಈ ಪ್ರಕರಣದಲ್ಲಿ ನಾಲ್ಕು ಸ್ಥಿರಾಂಕಗಳು ಹೀಗಿವೆ.

$$\log K_1 = 4.0, \log K_2 = 3.2, \log K_3 = 2.7, \log K_4 = 2.0, \log \beta_4 = 11.9$$

ಸಮನ್ವಯಿ ಸಂಯುಕ್ತಗಳ ಅಸ್ಥಿರತೆಯ ಸ್ಥಿರಾಂಕ ಅಥವಾ ವಿಯೋಜನೆ ಸ್ಥಿರಾಂಕವನ್ನು ನಿರ್ಮಾಣ ಸ್ಥಿರಾಂಕದ ವಿಲೋಮ ಎಂದು ವ್ಯಾಖ್ಯಾನಿಸಬಹುದು. ❖

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ 'ಕೆಮಿಕಲ್ ಕೈನೆಟಿಕ್ಸ್_ ದಿ ರೇಟ್ಸ್ ಆಫ್ ಕೆಮಿಕಲ್ ರಿಯಾಕ್ಷನ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3wBSv6f

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಗಾಳಿಗೆ ಪರ್ವತವನ್ನು ಅಲುಗಾಡಿಸಲು ಸಾಧ್ಯವಿಲ್ಲ. ಹಾಗೆಯೇ ಹೊಗಳಿಕೆ ಅಥವಾ ತೆಗಳಿಕೆಗೆ ವಿವೇಕವುಳ್ಳ ವ್ಯಕ್ತಿಯನ್ನು ವಿಚಲಿತಗೊಳಿಸುವುದು ಅಸಾಧ್ಯ.

–ಗೌತಮ ಬುದ್ಧ

ಕೋವಿಡ್ ಸಂಕಷ್ಟದ ಸನ್ನಿವೇಶದಲ್ಲಿ ಮಹಲುಗಳ ನಿರ್ಮಾಣ ಅತ್ಯಗತ್ಯವೇ?

ದೆಹಲಿಯಲ್ಲಿ ಸೆಂಟ್ರಲ್ ವಿಸ್ತಾ ಪುನರಾಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಳ್ಳುವುದಾಗಿ ಕೇಂದ್ರ ಸರ್ಕಾರವು ಪ್ರಸ್ತಾವ ಮಂಡಿಸಿದಾಗಲೇ ಹಲವು ಪ್ರಶ್ನೆಗಳು ಕೇಳಿಬಂದಿದ್ದವು. ಅದರ ನಡುವೆಯೇ ತೀರಾ ಅವಸರದಲ್ಲಿ ಸೆಂಟ್ರಲ್ ವಿಸ್ತಾ ಅಭಿವೃದ್ಧಿ ಕಾಮಗಾರಿಗಳು ಆರಂಭವಾದವು. ದೇಶದ ಆರ್ಥಿಕತೆಯು ಅತ್ಯಂತ ಕ್ಲಿಷ್ಟ ಸನ್ನಿವೇಶವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಸರ್ಕಾರಕ್ಕೆ ಆದ್ಯತೆಗಳು ಬೇರೆ ಇರಬೇಕಾಗಿರುವಾಗ ಇದೊಂದು ಒಣಪ್ರತಿಷ್ಠೆಯ ಯೋಜನೆ ಎನ್ನುವ ಟೀಕೆಗಳು ವ್ಯಾಪಕವಾಗಿ ಕೇಳಿಬಂದವು. ಕೊರೊನಾ ಸಾಂಕ್ರಾಮಿಕವು ದೇಶದಾದ್ಯಂತ ಈಗ ತಲ್ಲಣದ ಅಲೆಗಳನ್ನು ಎಬ್ಬಿಸಿದೆ. ದೇಶವು ಆರ್ಥಿಕವಾಗಿ ದುಃಸ್ಥಿತಿಯಲ್ಲಿರುವಾಗ ಈ ಯೋಜನೆಯ ಬಗ್ಗೆ ವಿರೋಧ ಪುನಃ ವ್ಯಕ್ತವಾಗಿದೆ. ಈ ಸಂಕಷ್ಟದ ಕಾಲಘಟ್ಟದಲ್ಲಿ ಸೆಂಟ್ರಲ್ ವಿಸ್ತಾದಂತಹ ಅತ್ಯಗತ್ಯವಲ್ಲದ ಯೋಜನೆಗಳ ಮೇಲೆ ದೊಡ್ಡ ಮಟ್ಟದಲ್ಲಿ ಹಣ ಸುರಿಯುವುದನ್ನು ತಡೆಯುವಂತೆ ಕೋರಿ ಪ್ರಧಾನಿ ನರೇಂದ್ರ ಮೋದಿಯವರಿಗೆ ನಿವೃತ್ತ ನಾಗರಿಕ ಸೇವಾ ಅಧಿಕಾರಿಗಳು ಹಲವರು ಕಳೆದ ವಾರ ಪತ್ರವನ್ನೂ ಬರೆದಿದ್ದರು. ಈ ಯೋಜನೆಗೆ ಖರ್ಚು ಮಾಡುತ್ತಿರುವ ಹಣದ ಬಗ್ಗೆ ಮಾಧ್ಯಮಗಳಲ್ಲಿ ಟೀಕೆ ವ್ಯಕ್ತವಾಗಿದೆ ಮತ್ತು ಸಮಾಜದ ವಿವಿಧ ವರ್ಗಗಳ ಹಲವರು ಕಳವಳವನ್ನೂ ವ್ಯಕ್ತಪಡಿಸಿದ್ದಾರೆ. ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ನೂರಾರು ಕಾರ್ಮಿಕರು ಸೇರುತ್ತಿರುವುದರಿಂದ ಕೊರೊನಾ ಸೋಂಕು ಇನ್ನಷ್ಟು ಹಬ್ಬುವ ಸಾಧ್ಯತೆಯ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿದ ಅರ್ಜಿಗೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್ ತೀರ್ಪನ್ನು ಕಾಯ್ದಿರಿಸಿದೆ. ಈ ಯೋಜನೆಗೆ ಸುಪ್ರೀಂ ಕೋರ್ಟ್ ಒಮ್ಮೆ ಅನುಮತಿ ನೀಡಿದ್ದರೂ ವಿವಿಧ ನೆಲೆಗಳಲ್ಲಿ ಈ ಯೋಜನೆಗೆ ವಿರೋಧ ವ್ಯಕ್ತವಾಗುತ್ತಲೇ ಇದೆ. ಪರಿಸರಕ್ಕೆ ಆಗುತ್ತಿರುವ ಹಾನಿ, ಪಾರಂಪರಿಕ ಕಟ್ಟಡಗಳ ನೆಲಸಮ, ಆದ್ಯತೆ ಗುರುತಿಸುವಲ್ಲಿನ ಎಡವಟ್ಟು, ವಾಸ್ತುಶಿಲ್ಪಿಗಳ ಆಯ್ಕೆಯಲ್ಲಿ ಸ್ವಜನಪಕ್ಷಪಾತ, ಪಾರದರ್ಶಕತೆಯ ಕೊರತೆ, ಸಾರ್ವಜನಿಕ ಹಣದ ಪೋಲು ಮತ್ತು ದುರುಪಯೋಗ ಮುಂತಾದ ಹಲವು ಕಾರಣಗಳಿಗೆ ಈ ಯೋಜನೆಯನ್ನು ವಿರೋಧಿಸಲಾಗುತ್ತಿದೆ. ಇವುಗಳಲ್ಲಿನ ಯಾವುದೇ ಒಂದು ಅಂಶವು ಈ ಯೋಜನೆಯ ಮರುಪರಿಶೀಲನೆಗೆ ಕಾರಣವಾಗಬಹುದು. ಆದರೆ, ಕೇಂದ್ರ ಸರ್ಕಾರವು ಈ ಯಾವ ಆಕ್ಷೇಪಗಳ ಕಡೆಗೂ ಗಮನ ನೀಡುತ್ತಿಲ್ಲ. ಮುಂದಿನ ಲೋಕಸಭಾ ಚುನಾವಣೆಯು 2024ರಲ್ಲಿ ನಡೆಯಲಿದೆ. ಅಷ್ಟರೊಳಗೇ ಈ ಯೋಜನೆಯನ್ನು ಪೂರ್ಣಗೊಳಿಸುವುದಾಗಿ ಸರ್ಕಾರ ಹೇಳುತ್ತಿದೆ.

ಆರೋಗ್ಯ ತುರ್ತು ಪರಿಸ್ಥಿತಿಯ ಈ ಸಂದರ್ಭದಲ್ಲಿ ಭವ್ಯ ಕಟ್ಟಡಗಳ ನಿರ್ಮಾಣವು ಸರ್ಕಾರಕ್ಕೆ ಆದ್ಯತೆಯಾಗಬಾರದು

ಈ ಯೋಜನೆಯ ಒಟ್ಟು ಅಂದಾಜುವೆಚ್ಚ ₹ 20 ಸಾವಿರ ಕೋಟಿ ಎಂದು ಸರ್ಕಾರ ಪ್ರಕಟಿಸಿದ್ದರೂ ಯೋಜನೆ ಪೂರ್ಣಗೊಳ್ಳುವ ಹೊತ್ತಿಗೆ ವೆಚ್ಚ ಇನ್ನಷ್ಟು ಹೆಚ್ಚುವುದು ಖಚಿತ. ಆರ್ಥಿಕವಾಗಿ ತೀವ್ರ ಸಂಕಷ್ಟದಲ್ಲಿರುವ ದೇಶವೊಂದಕ್ಕೆ ಇದು ಬಹುದೊಡ್ಡ ಮೊತ್ತವೇ ಸರಿ. ಕೊರೊನಾ ಸಾಂಕ್ರಾಮಿಕವನ್ನು ಪರಿಣಾಮಕಾರಿಯಾಗಿ ಎದುರಿಸಲಾಗದೆ, ಅಸಂಖ್ಯಾತ ಸಾವು-ನೋವುಗಳ ಮಧ್ಯೆ ಇಡೀ ದೇಶವೇ ಗೊಂದಲ ಮತ್ತು ದುಃಖದಲ್ಲಿ ಮುಳುಗಿರುವಾಗ, ಸರ್ಕಾರವೊಂದು ಭವ್ಯ ಮಹಲುಗಳ ನಿರ್ಮಾಣದಲ್ಲಿ ತೊಡಗುವುದು ವಿವೇಚನಾರಹಿತ ಕೃತ್ಯವೇ ಸರಿ. ಈ ಯೋಜನೆ ಕುರಿತು ಸರ್ಕಾರ ಏನೇ ಸಮರ್ಥನೆ ಮತ್ತು ಸ್ಪಷ್ಟೀಕರಣ ನೀಡಿದರೂ ಸಂಕಷ್ಟದ ಕಾಲದಲ್ಲಿ ಇಂತಹ ಆಡಂಬರದ ಯೋಜನೆಗಳ ಔಚಿತ್ಯವನ್ನು ಒಪ್ಪಿಕೊಳ್ಳಲಾಗದು. ರಾಜಪ್ರಭುತ್ವದ ಕಾಲದಲ್ಲಿ ಭವ್ಯಮಹಲುಗಳ ನಿರ್ಮಾಣಗಳನ್ನು ದೊರೆಗಳು ತಮ್ಮ ಪ್ರತಿಷ್ಠೆಯನ್ನು ಮೆರೆಸಲು ಕೈಗೊಳ್ಳುತ್ತಿದ್ದರು. ಅಂತಹ ಧೋರಣೆಯು ಪ್ರಜಾಪ್ರಭುತ್ವಕ್ಕೆ ಒಪ್ಪುವುದಿಲ್ಲ. ಪ್ರಜಾಸತ್ತಾತ್ಮಕ ದೇಶದಲ್ಲಿ ಪಾರದರ್ಶಕತೆಗೆ ಹೆಚ್ಚಿನ ಮಹತ್ವ ಇದೆ. ಆದರೆ ಈ ಯೋಜನೆಯ ವಿಚಾರದಲ್ಲಿ ಅದು ಕಾಣುತ್ತಿಲ್ಲ. ರಾಜಧಾನಿಯ ಹೃದಯಭಾಗದಲ್ಲಿ ಹಲವು ಪಾರಂಪರಿಕ ಕಟ್ಟಡಗಳನ್ನು ಕೆಡವಿ ಇಷ್ಟು ದೊಡ್ಡ ಯೋಜನೆಯನ್ನು ಕೈಗೆತ್ತಿಕೊಳ್ಳುವಾಗ ಸಾರ್ವಜನಿಕ ಚರ್ಚೆಗೆ ಮುಕ್ತ ಅವಕಾಶ ಕಲ್ಪಿಸಬೇಕಾಗಿತ್ತು ಮತ್ತು ವಿರೋಧ ಪಕ್ಷಗಳ ಜೊತೆಗೂ ಈ ಬಗ್ಗೆ ಮಾಹಿತಿ ಹಂಚಿಕೊಳ್ಳಬೇಕಿತ್ತು. ಕಾಮಗಾರಿ ಸ್ಥಳದ ಚಿತ್ರ ತೆಗೆಯುವುದನ್ನೂ ನಿಷೇಧಿಸಿರುವುದನ್ನು ನೋಡಿದರೆ ಅನುಮಾನ ಹುಟ್ಟುವುದು ಸಹಜ. ಇದೊಂದು ಸಾರ್ವಜನಿಕ ಕಾಮಗಾರಿ ಆಗಿರುವಾಗ ಈ ಮಟ್ಟದಲ್ಲಿ ಗೋಪ್ಯತೆ ಕಾಯ್ದುಕೊಳ್ಳುವ ಅಗತ್ಯವೇನಿದೆ?

ದಿನದ ಟ್ವೀಟ್

ಚಿಂತೆ ಇಲ್ಲ

ಟ್ವಿಟರ್ ಅಥವಾ ಫೇಸ್‌ಬುಕ್‌ಗೆ ಮೇ 26ರ ಗಡುವಿನ ಬಗ್ಗೆ ಚಿಂತೆ ಇದ್ದಂತೆ ಕಾಣುತ್ತಿಲ್ಲ. ಮೋದಿಜಿ ಅವರಿಗೆ ತಾವು ಬೇಕು, ಭಾರತದಲ್ಲಿ ನಿರ್ಬಂಧಕ್ಕೆ ಒಳಗಾಗುವ ಭೀತಿಯ ಅಗತ್ಯವೇ ತಮಗೆ ಇಲ್ಲ ಎಂಬ ವಿಚಾರದಲ್ಲಿ ಅವು ಬಹಳ ವಿಶ್ವಾಸದಿಂದ ಇವೆ!

ಕೆ.ವಿ.ಧನಂಜಯ, ವಕೀಲ

25 ವರ್ಷಗಳ ಹಿಂದೆ

ಭಾನುವಾರ, 26-5-1996

• ಸಂಯುಕ್ತ ರಂಗಕ್ಕೆ ಕಾಂಗ್ರೆಸ್ ಷರತ್ತು?

ನವದೆಹಲಿ, ಮೇ 25– ಸಂಯುಕ್ತ ರಂಗಕ್ಕೆ ಬೆಂಬಲ ಘೋಷಿಸಿರುವ ಕಾಂಗ್ರೆಸ್ ಪಕ್ಷದಲ್ಲಿ ಕೆಲವು ನಾಯಕರಿಂದ ಕೇಳಿ-ಬರುತ್ತಿರುವ ಅಪಸ್ವರಗಳು ಮತ್ತು ರಾಜ್ಯ ಘಟಕಗಳಿಂದ ಬರುತ್ತಿರುವ ವಿರೋಧದ ಹಿನ್ನೆಲೆಯಲ್ಲಿ ಪಕ್ಷದ ಅಧ್ಯಕ್ಷ ನರಸಿಂಹ ರಾವ್ ಅವರು ಅನೌಪಚಾರಿಕವಾಗಿ ಕೆಲವು ಷರತ್ತುಗಳನ್ನು ಹಾಕುವುದನ್ನು ತಳ್ಳಿಹಾಕಲಾಗದು ಎಂಬುದಾಗಿ ಹೇಳಲಾಗುತ್ತಿದೆ.

ಹಾಗಾಗಿ, ಬಿಜೆಪಿ ನೇತೃತ್ವದ ಸರ್ಕಾರ ಉರುಳಿ ಬಿದ್ದು ಸಂಯುಕ್ತ ರಂಗ ಅಧಿಕಾರಕ್ಕೆ ಬಂದರೂ ಕಾಂಗ್ರೆಸ್ ಷರತ್ತಿನ ಇತಿಮಿತಿಯಲ್ಲಿ ಕಾರ್ಯನಿರ್ವಹಿಸುವುದು ಅನಿವಾರ್ಯವಾಗಬಹುದು. ಈ ದಿಸೆಯಲ್ಲಿ ದೆಹಲಿಯಲ್ಲಿ ಕಾಂಗ್ರೆಸ್ ವಲಯದಲ್ಲಿ ನಿತ್ಯವೂ ಎಡೆಬಿಡದೆ ರಾಜಕೀಯ ಚಟುವಟಿಕೆ, ಭೋಜನ ಕೂಟದ ಸಭೆಗಳು ನಡೆಯುತ್ತಿವೆ.

• ಅಯ್ಯೋ... ತಾಳಲಾರೆ ಈ ಉರಿ ಬಿಸಿಲು

ಬೆಂಗಳೂರು, ಮೇ 25– ಕಿತ್ತುಬರುವ ಬೆವರು, ಹೊರಗೆ ಕಾಲಿಟ್ಟರೆ ತಲೆ ಸಿಡಿದು ಹೋದೀತೇನೋ ಎನ್ನುವ ಅನುಭವವನ್ನು ತಂದು ಕೊಡುವಂತಹ ಬಿಸಿಲಿನ ಬೇಗೆ ಈ ವರ್ಷ ಇಡೀ ಕರ್ನಾಟಕವನ್ನು ಕಾಡುತ್ತಿದೆ.

ಮೊದಲೇ ಬೆಂಕಿಯ ನಗರಗಳೆಂದು ಖ್ಯಾತಿ ಪಡೆದು, ಸದಾ ಬರಗಾಲದ ದವಡೆಯಲ್ಲಿ ಸಿಕ್ಕು ನರಳುವ ವಿಜಾಪುರ ಹಾಗೂ ಕಲ್ಬುರ್ಗಿ ನಗರಗಳ ಜನರಿಗಂತೂ ಈ ಬಾರಿ ಕಾದ ಬಾಣಲೆಯ ಮೇಲೆ ಕೂತ ಅನುಭವ.

ರಾಯಚೂರು ಜಿಲ್ಲೆ ಕಳೆದ 23 ವರ್ಷಗಳಲ್ಲಿ ಕಾಣದಷ್ಟು ಬಿಸಿಲಿನ ತಾಪವನ್ನು ಕಂಡಿದೆ. ಕಳೆದ ಏಪ್ರಿಲ್ 30ರಂದು ಕಲ್ಬುರ್ಗಿಯಲ್ಲಿ ದಾಖಲಾಗಿರುವ ಉಷ್ಣಾಂಶ 44.5 ಡಿಗ್ರಿ ಸೆಲ್ಷಿಯಸ್ ನಷ್ಟಾಗಿದ್ದು, ಜನರು ಬಿಸಿಲಿನ ಬೇಗೆ ತಾಳಲಾಗದೆ ಬಳಲಿ ಬೆಂಡಾದರು.

50 ವರ್ಷಗಳ ಹಿಂದೆ

ಬುಧವಾರ, 26-5-1971

• ಸಂಸ್ಥಾ ಕಾಂಗ್ರೆಸ್ ಕಾರ್ಯಸಮಿತಿಗೆ ನೀಲಂ ರಾಜೀನಾಮೆ: ಪಕ್ಷದ ಕೆಲಸದಿಂದ ಪೂರಾ ದೂರ

ಹೈದರಾಬಾದ್, ಮೇ 25– ‘ಸಂಕುಚಿತ ಪಕ್ಷ ದೃಷ್ಟಿಯಿಂದ ಸ್ವತಂತ್ರವಾಗಿರಲು’ ಬಯಸಿರುವ ಹಿರಿಯ ಕಾಂಗ್ರೆಸ್ ನಾಯಕರೂ ಭಾರತ ರಾಷ್ಟ್ರೀಯ ಕಾಂಗ್ರೆಸ್ ಎರಡಾಗಿ ಒಡೆಯಲು ಕಾರಣವಾದ ಕಳೆದ ರಾಷ್ಟ್ರಪತಿ ಚುನಾವಣೆಯಲ್ಲಿ ಅಧಿಕೃತ ಕಾಂಗ್ರೆಸ್ ಸ್ಪರ್ಧಿಯೂ ಆಗಿದ್ದ ನೀಲಂ ಸಂಜೀವರೆಡ್ಡಿ ಅವರು ಸಂಸ್ಥಾ ಕಾಂಗ್ರೆಸ್‌ನಿಂದ ದೂರ ಸರಿದಿದ್ದಾರೆ.

ಸಂಸ್ಥಾ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವುದಾಗಿ ಅವರು ಇಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

ಸಂಸ್ಥಾ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದ್ದೀರಾ ಎಂದು ಪತ್ರಕರ್ತರು ಪ್ರಶ್ನಿಸಿದ್ದಕ್ಕೆ, ‘ಅದರರ್ಥ ಏನೇ ಇರಲಿ, ನಾನು ಸಂಪೂರ್ಣ ಸ್ವಾತಂತ್ರ್ಯ ಹೊಂದಿರಬೇಕೆಂಬುದು ನನ್ನ ಇಚ್ಛೆ’ ಎಂದರು.

• ಸಚಿವರಿಗೆ ಹಿಂದಿ ನಾಮಕರಣ: ವಿವಾದಕ್ಕೆ ತೃಪ್ತಿಕರ ಪರಿಹಾರ– ಪ್ರಧಾನಮಂತ್ರಿ ಭರವಸೆ

ನವದೆಹಲಿ, ಮೇ 25– ಕೇಂದ್ರ ಸಚಿವರು ಮತ್ತು ಸಚಿವ ಶಾಖೆಗಳಿಗೆ ಹಿಂದಿ ಹೆಸರುಗಳನ್ನು ನೀಡಿರುವ ಸರ್ಕಾರದ ಆಜ್ಞೆಯಿಂದ ಉದ್ಭವಿಸಿರುವ ವಿವಾದವನ್ನು ತೃಪ್ತಿಕರವಾಗಿ ಪರಿಹರಿಸಲು ತಾವು ಪ್ರಯತ್ನಿಸುವುದಾಗಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಸಂಸತ್ತಿನಲ್ಲಿನ ವಿರೋಧ ಪಕ್ಷಗಳ ನಾಯಕರಿಗೆ ಆಶ್ವಾಸನೆ ನೀಡಿದರು.

ಇಂದಿನ ಅಗತ್ಯ ಮತ್ತು ಸವಾಲುಗಳನ್ನು ಪರಿಗಣಿಸಿ ಕೊರತೆ ನಿವಾರಿಸುವ ಕೆಲಸ ಆಗಬೇಕಾಗಿದೆ

ಬದಲಾಗಬೇಕಿದೆ ಬಾಹ್ಯಾಕಾಶ ಒಪ್ಪಂದ

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ನಿಯಂತ್ರಣ ಕಳೆದುಕೊಂಡ ಚೀನಾದ ಲಾಂಗ್ ಮಾರ್ಚ್ 5ಬಿ ರಾಕೆಟ್‌ನ ಬೃಹದಾಕಾರದ ಭಗ್ನಾವಶೇಷ ಮೇ 9ರಂದು ಮಾಲ್ದೀವ್ಸ್ ಸಮೀಪ ಹಿಂದೂ ಮಹಾಸಾಗರದಲ್ಲಿ ಬಿದ್ದದ್ದು ಈಗ ಹಳೆಯ ಸುದ್ದಿ. 32 ಮೀಟರ್ ಎತ್ತರ, 5 ಮೀಟರ್ ವ್ಯಾಸ, 22 ಟನ್‌ಗಳಷ್ಟು ಭಾರದ, ನಿಯಂತ್ರಣ ಕಳೆದುಕೊಂಡು ಗಂಟೆಯೊಂದಕ್ಕೆ 28,000 ಕಿ.ಮೀ. ವೇಗದಲ್ಲಿ ಭೂಮಿಯತ್ತ ನುಗ್ಗಿದ ಈ ಭಗ್ನಾವಶೇಷ ಎಲ್ಲಿ ಬೀಳಬಹುದೆಂಬ ಮುನ್ಸೂಚನೆಯೇ ಇಲ್ಲದೆ ಆತಂಕವನ್ನು ಸೃಷ್ಟಿಸಿದ್ದು ನಿಜ. ಈ ಆತಂಕ ದೂರವಾದಂತೆ, ಅಂತಹ ಘಟನೆಗಳು ಮರುಕಳಿಸದಂತೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾನೂನುಗಳನ್ನು ರೂಪಿಸುವುದು ಸಾಧ್ಯವೇ ಎಂಬ ಚಿಂತನೆಗೆ ಈಗ ಮತ್ತಷ್ಟು ತುರ್ತು ಮಹತ್ವ ಬಂದಿದೆ.

ಬಾಹ್ಯಾಕಾಶ ಚಟುವಟಿಕೆಗಳಿಗೆ ಸಂಬಂಧಿಸಿದ ಎಲ್ಲ ಅಂತರರಾಷ್ಟ್ರೀಯ ಕಾನೂನುಗಳಿಗೆ ಆಧಾರವೆಂದರೆ, 1967-79ರ ನಡುವೆ ರೂಪುಗೊಂಡು, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅನುಮೋದನೆ ಪಡೆದಿರುವ 5 ಪ್ರಮುಖ ಒಪ್ಪಂದಗಳು. ಅವುಗಳೆಂದರೆ, 1967ರ ಬಾಹ್ಯಾಕಾಶ ಒಪ್ಪಂದ, ಗಗನಯಾತ್ರಿಗಳು, ಉಪಗ್ರಹ ಮುಂತಾದವುಗಳನ್ನು ರಕ್ಷಿಸಿ ಭೂಮಿಗೆ ಹಿಂತಿರುಗಿ ತರುವ 1968ರ ಒಪ್ಪಂದ, ಬಾಹ್ಯಾಕಾಶದ ಭಗ್ನಾವಶೇಷಗಳಿಂದ ಭೂಮಿಯ ಮೇಲೆ ಸಂಭವಿಸುವ ಹಾನಿಯ ಹೊಣೆಗಾರಿಕೆಯನ್ನು ನಿರ್ಧರಿಸುವ 1972ರ ಒಪ್ಪಂದ, ವಿವಿಧ ದೇಶಗಳು ಬಾಹ್ಯಾಕಾಶಕ್ಕೆ ಕಳುಹಿಸುವ ಎಲ್ಲ ಉಪಗ್ರಹ, ಮತ್ತಿತರ ವ್ಯವಸ್ಥೆಗಳ ಸರ್ವ ಸಮಸ್ತ ವಿವರಗಳನ್ನೂ ವಿಶ್ವಸಂಸ್ಥೆಯಲ್ಲಿ ದಾಖಲಿಸಬೇಕಾದ 1975ರ ಒಪ್ಪಂದ, ಚಂದ್ರ ಮತ್ತು ಸೌರಮಂಡಲದ ಇತರ ಆಕಾಶಕಾಯಗಳ ಅನ್ವೇಷಣೆಗೆ ಸಂಬಂಧಿಸಿದ 1979ರ ಒಪ್ಪಂದ.

ಬಾಹ್ಯಾಕಾಶದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾನೂನುಗಳ ಜೊತೆಗೆ ವಿಶ್ವಸಂಸ್ಥೆ ಅನೇಕ ಮಾರ್ಗದರ್ಶಿ ಸಲಹೆ, ಸೂತ್ರಗಳನ್ನು ನೀಡಿದೆ. ಇವುಗಳಲ್ಲಿ ಬಾಹ್ಯಾಕಾಶ ಭಗ್ನಾವಶೇಷಗಳು ಮತ್ತು ಅವುಗಳಿಂದಾಗುವ ಅಪಾಯಗಳನ್ನು ಮಿತಗೊಳಿಸುವ 2007 ಮತ್ತು 2010ರ ಮಾರ್ಗದರ್ಶಿ ಸೂತ್ರಗಳು, ಬಾಹ್ಯಾಕಾಶ ಚಟುವಟಿಕೆಗಳನ್ನು ದೀರ್ಘಕಾಲದವರೆಗೆ ಸುರಕ್ಷಿತವಾಗಿ ನಡೆಸುವ 2019ರ ಮಾರ್ಗದರ್ಶಿ ಸೂತ್ರಗಳು ಮುಖ್ಯವಾದವು. ಈ ಸಲಹೆಗಳಂತೆ ಬಾಹ್ಯಾಕಾಶದಲ್ಲಿ ಅತ್ಯಂತ ಕಡಿಮೆಯ ಪ್ರಮಾಣದಲ್ಲಿ ಅವಶೇಷಗಳನ್ನು ಉತ್ಪಾದಿಸುವ, ಸ್ಫೋಟಗೊಂಡು ಚೂರುಚೂರಾಗದ, ವಾಯುಮಂಡಲವನ್ನು ಮರುಪ್ರವೇಶ ಮಾಡಿದಾಗ ಭೂಮಿಗೆ ಅಪ್ಪಳಿಸದಂತೆ ಸಂಪೂರ್ಣವಾಗಿ ಉರಿದುಹೋಗುವ ವಸ್ತು, ವಿನ್ಯಾಸಗಳಿಗೆ ಆದ್ಯತೆ ನೀಡಬೇಕು. ರಾಕೆಟ್‌ನ ವಸ್ತು, ವಿನ್ಯಾಸಗಳ ಅತ್ಯುತ್ಕೃಷ್ಟ ಮಟ್ಟದ ಪರೀಕ್ಷೆ ನಡೆಸಬೇಕು. ಭಗ್ನಾವಶೇಷಗಳನ್ನು ಭೂಸಮೀಪ ಕಕ್ಷೆಯಿಂದ ಹೊರತೆಗೆಯುವ ವಿಧಾನಗಳನ್ನು ರೂಪಿಸಬೇಕು ಮುಂತಾದ ಅಂಶಗಳಿವೆ.

ಆದರೆ ಈ ಎಲ್ಲವೂ ಮಾರ್ಗದರ್ಶಿ ಸೂತ್ರಗಳೇ ಹೊರತು ಕಡ್ಡಾಯವಾಗಿ ಪಾಲಿಸಲೇಬೇಕಾದ ಕಾನೂನುಗಳಲ್ಲ. ಈ ಸಲಹೆಗಳನ್ನು ಪಾಲಿಸಿದರೆ ಯೋಜನೆಯ ವೆಚ್ಚ ಸಾಕಷ್ಟು ಏರುತ್ತದೆ. ಹೀಗಾಗಿ ಈ ಸೂಚನೆಗಳಿಗೆ ಯಾವ ದೇಶವೂ ಹೆಚ್ಚಿನ ಗಮನ ನೀಡುವುದಿಲ್ಲ. ಇದರ ಫಲವಾಗಿಯೇ ಇಂದು ಬಾಹ್ಯಾಕಾಶದಲ್ಲಿ 3,000ಕ್ಕೂ ಹೆಚ್ಚು ನಿರುಪಯುಕ್ತ ಉಪಗ್ರಹಗಳು, 28,000ಕ್ಕೂ ಹೆಚ್ಚು ಉಪಗ್ರಹ, ರಾಕೆಟ್‌ಗಳ ಬಿಡಿಭಾಗಗಳು, ಒಂದು ಸೆಂ.ಮೀ.ಗೂ ಸಣ್ಣ ಗಾತ್ರದ ಸುಮಾರು 17 ಕೋಟಿ ವ್ಯರ್ಥವಸ್ತುಗಳು ಕಿಕ್ಕಿರಿದು ವಿವಿಧ ಕಕ್ಷೆಗಳಲ್ಲಿ ಭೂಮಿಯನ್ನು ಪರಿಭ್ರಮಿಸುತ್ತಿವೆ. ಈ ವಸ್ತುಗಳು ಕಾರ್ಯನಿರತ ಉಪಗ್ರಹಗಳಿಗೆ ಡಿಕ್ಕಿ ಹೊಡೆದು ಅವುಗಳನ್ನು ನಿಷ್ಕ್ರಿಯ ಮಾಡಬಲ್ಲವು. ಈ ದಟ್ಟಣೆಯಿಂದ ಉಪಗ್ರಹಗಳೇ ಡಿಕ್ಕಿ ಹೊಡೆದು ನಾಶವಾದ ನಿದರ್ಶನಗಳಿವೆ. ಇದರ ಜೊತೆಗೆ ರಾಕೆಟ್, ಉಪಗ್ರಹ, ಸ್ಕೈಲ್ಯಾಬ್ ಮುಂತಾದವುಗಳ ಭಾಗಗಳು ವಾಯುಮಂಡಲವನ್ನು ದಾಟಿ ಬಂದು, ಸಾಗರದಲ್ಲಿ ಬೀಳದೇ ನೆಲಕ್ಕೆ ಅಪ್ಪಳಿಸಿರುವ ಉದಾಹರಣೆಗಳಿವೆ.

ಬಾಹ್ಯಾಕಾಶ ಕ್ಷೇತ್ರದಲ್ಲಿ ಖಾಸಗಿ ಕಂಪನಿಗಳೂ ಪ್ರವೇಶ ಮಾಡಿದ ನಂತರ, ಸ್ಪರ್ಧೆ ಹೆಚ್ಚಾಗಿ ಬಾಹ್ಯಾಕಾಶಕ್ಕೆ ಉಡಾಯಿಸುವ ಉಪಗ್ರಹಗಳ ಸಂಖ್ಯೆ ಏರುತ್ತಿದೆ. ಯುರೋಪಿಯನ್ ಸ್ಪೇಸ್ ಏಜೆನ್ಸಿಯ ಮೂಲದಂತೆ ಇಲ್ಲಿಯವರೆಗೂ 11,370 ಉಪಗ್ರಹಗಳನ್ನು ಬಾಹ್ಯಾಕಾಶದಲ್ಲಿ ನಿಯೋಜಿಸಲಾಗಿದೆ. 2030ರ ಅಂತ್ಯದ ಒಳಗಾಗಿ 45,000 ಉಪಗ್ರಹಗಳ ಉಡಾವಣೆ ನಡೆಯಲಿದೆ.

ಬಾಹ್ಯಾಕಾಶದಿಂದ ಭೂಮಿಯತ್ತ ಬರುವ ಭಗ್ನಾವಶೇಷಗಳು ಬಹುತೇಕ ವಾಯುಮಂಡಲದಲ್ಲಿನ ಘರ್ಷಣೆಯಿಂದ ಉರಿದುಹೋಗುತ್ತವೆ. ಒಂದು ವೇಳೆ ವಾಯುಮಂಡಲವನ್ನು ದಾಟಿ ಬಂದರೂ ಸಾಗರಗಳಲ್ಲಿ ಬೀಳುವ ಸಂಭವವೇ ಹೆಚ್ಚು. ಜನವಸತಿಯಿರುವ ಪ್ರದೇಶಕ್ಕೆ ಅಪ್ಪಳಿಸುವ ಸಂಭಾವ್ಯತೆ ತೀರಾ ಕಡಿಮೆ, 100 ಕೋಟಿಯಲ್ಲಿ ಒಂದು.

ಒಂದು ವೇಳೆ ಹೀಗೆ ಅಪ್ಪಳಿಸಿ ಪ್ರಾಣ, ಆಸ್ತಿ ಹಾನಿಯಾದರೆ 1972ರ ಒಪ್ಪಂದದಡಿಯಲ್ಲಿ ಹೊಣೆಗಾರಿಕೆಯನ್ನು ನಿರ್ಧರಿಸಿ, ರಾಕೆಟ್ಟನ್ನು ಉಡಾವಣೆ ಮಾಡಿದ ದೇಶದಿಂದ ಪರಿಹಾರವನ್ನು ಪಡೆಯುವ ಅವಕಾಶವಿದೆ. ಆದರೆ ಇದು ಕಾನೂನಾತ್ಮಕವಾಗಿ ಸಾಧ್ಯವಾದರೂ ವ್ಯಾವಹಾರಿಕವಾಗಿ ಬಹು ಕಷ್ಟ. ಉದಾಹರಣೆಗೆ, 2020ರ ಮೇ 12ರಂದು, ಚೀನಾದ ಲಾಂಗ್‌ಮಾರ್ಚ್ ರಾಕೆಟ್‌ನ ಕೇಂದ್ರಭಾಗ ಅನಿಯಂತ್ರಿತವಾಗಿ ಭೂಮಿಗೆ ಬಂದು ಪಶ್ಚಿಮ ಆಫ್ರಿಕಾದ ಐವರಿಕೋಸ್ಟ್ ದೇಶದ ಬುವಾಕೆ ಪ್ರದೇಶದಲ್ಲಿ ನೆಲಕ್ಕೆ ಅಪ್ಪಳಿಸಿ ಅನೇಕ ಕಟ್ಟಡಗಳಿಗೆ ಹಾನಿಯಾಯಿತು. ಬಾಹ್ಯಾಕಾಶ ಕಾನೂನಿನಂತೆ ಐವರಿಕೋಸ್ಟ್, ಚೀನಾದಿಂದ ಪರಿಹಾರವನ್ನು ಕೇಳಬಹುದಿತ್ತು. ಆದರೆ ಹಾಗೆ ಕೇಳಿದ್ದರೆ ಚೀನಾ ಜೊತೆಗಿನ ಆರ್ಥಿಕ ಸಂಬಂಧ, ಸಹಕಾರಗಳಿಗೆ ತೊಂದರೆಯಾಗಬಹುದೆಂಬ ಅಂಜಿಕೆಯಿಂದ ಐವರಿಕೋಸ್ಟ್ ಆ ವಿಷಯವನ್ನು ಪ್ರಸ್ತಾಪಿಸಲಿಲ್ಲ.

1979ರಲ್ಲಿ ಅಮೆರಿಕದ ಸ್ಕೈಲ್ಯಾಬ್‌ನ ಅವಶೇಷಗಳು ಆಸ್ಟ್ರೇಲಿಯಾದ ಎಸ್ಪೆರಾನ್ಸ್ ಪಟ್ಟಣದ ಬಳಿ ಬಿದ್ದು ಹಾನಿಯಾದಾಗ, ಆಸ್ಟ್ರೇಲಿಯಾ ಕೂಡ ರಾಜಕೀಯ ಕಾರಣಗಳಿಂದ ಪರಿಹಾರ ಕೇಳಲಿಲ್ಲ. ಆದರೆ 1978ರಲ್ಲಿ ರಷ್ಯಾದ ಬೈಜಿಕ ಶಕ್ತಿಚಾಲಿತ ಕೋಸ್ಮಾಸ್- 954 ಉಪಗ್ರಹ ಕೆನಡಾದ ಉತ್ತರ ಭಾಗದಲ್ಲಿ ಬಿದ್ದು ವಿಕಿರಣಪಟುತ್ವ ಗುಣದ ಬೈಜಿಕ ತ್ಯಾಜ್ಯ ನೆಲಕ್ಕೆ ಸೇರಿದಾಗ, ರಷ್ಯಾ ಪರಿಹಾರವಾಗಿ 6 ಮಿಲಿಯನ್ ಡಾಲರ್‌ಗಳನ್ನು ಕೆನಡಾಕ್ಕೆ ನೀಡಬೇಕಾಯಿತು.

ನಾಲ್ಕೈದು ದಶಕಗಳ ಹಿಂದೆ ರೂಪುಗೊಂಡ ಬಾಹ್ಯಾಕಾಶ ಒಪ್ಪಂದಗಳು ಮತ್ತು ಅದರಡಿಯ ಕಾನೂನುಗಳಲ್ಲಿ ಇಂದಿನ ಅಗತ್ಯಗಳು ಹಾಗೂ ಸವಾಲುಗಳ ದೃಷ್ಟಿಯಿಂದ ಅನೇಕ ಕೊರತೆಗಳಿವೆ. ಹೀಗಾಗಿ ಕಾನೂನುಗಳಿಗೆ ತಿದ್ದುಪಡಿ ಅಗತ್ಯ. 2010 ಮತ್ತು 2019ರ ವಿಶ್ವಸಂಸ್ಥೆಯ ಮಾರ್ಗದರ್ಶಿ ಸೂತ್ರಗಳನ್ನು ಶಕ್ತಿಯುತವಾದ ಕಾನೂನುಗಳನ್ನಾಗಿ ಪರಿವರ್ತಿಸುವ ಪ್ರಯತ್ನಗಳು ನಡೆಯುತ್ತಿದ್ದರೂ ಬಲಿಷ್ಠ ದೇಶಗಳಿಗೆ ಅದರಲ್ಲಿ ಯಾವ ಆಸಕ್ತಿಯೂ ಇಲ್ಲ. ಜಾಗತಿಕ ಶಾಂತಿ, ಪರಸ್ಪರ ನಂಬಿಕೆ, ಮಾನವೀಯ ಮೌಲ್ಯದಂಥ ಉದಾತ್ತ ತತ್ವಗಳ ಮೇಲೆ ರೂಪುಗೊಂಡಿರುವ ಒಪ್ಪಂದಗಳು ಕಳೆದ ಐದು ದಶಕಗಳಲ್ಲಿ ಬಾಹ್ಯಾಕಾಶ ಕ್ಷೇತ್ರದಲ್ಲಿ ಯಾವುದೇ ರೀತಿಯ ಅವಘಡಗಳಾಗದಂತೆ ನೋಡಿಕೊಂಡಿರುವುದರಿಂದ ಯಾವ ಹೊಸ ಒಪ್ಪಂದ, ಕಾನೂನುಗಳ ಅಗತ್ಯವೂ ಇಲ್ಲವೆಂಬುದು ಅವುಗಳ ವಾದ.

ಇದು ಕೇವಲ ಕಣ್ಣೊರೆಸುವ ತಂತ್ರಗಾರಿಕೆ. ಇಂದಿನ ಪರಿಸ್ಥಿತಿ ಭಿನ್ನವಾಗಿದೆ. ಬಾಹ್ಯಾಕಾಶ ಕಾಯಗಳು ಇಂದು ಅಪಾರ ಸಂಪನ್ಮೂಲಗಳ ಆಗರ. ಅದರಲ್ಲಿರುವ ವಾಣಿಜ್ಯೋದ್ದೇಶದ ಅವಕಾಶಗಳೂ ಅಪಾರ. ಪ್ಲಾನೆಟರಿ ರಿಸೋರ್ಸಸ್ ಸಂಸ್ಥೆಯ ಅಧ್ಯಕ್ಷ ಕ್ರಿಸ್ ಲ್ಯೂವಿಕಿ ಅವರು 2026ರ ಅಂತ್ಯದ ವೇಳೆಗೆ ಬಾಹ್ಯಾಕಾಶ ಕಾಯಗಳಲ್ಲಿ ಗಣಿಗಾರಿಕೆ ಪ್ರಾರಂಭವಾಗಲಿದೆ ಎನ್ನುತ್ತಾರೆ. ಅದಕ್ಕಾಗಿ ಎಲ್ಲ ಸಿದ್ಧತೆಗಳೂ ನಡೆದಿವೆ. ಆದರೆ ಈಗಿರುವ ಬಾಹ್ಯಾಕಾಶ ಒಪ್ಪಂದಗಳಿಂದ ಆಕಾಶಕಾಯಗಳಲ್ಲಿನ ಗಣಿಗಾರಿಕೆಯ ಬಗ್ಗೆ ಸ್ಪಷ್ಟವಾದ ಕಾನೂನಾತ್ಮಕ ನಿಲುವು ತಳೆಯುವುದು ಸಾಧ್ಯವಿಲ್ಲವೆಂಬುದು ‘ಸ್ಪೇಸ್ ಲಾ’ ಪರಿಣತರ ಅಭಿಪ್ರಾಯ. ಇಂತಹ ಪರಿಸ್ಥಿತಿಯಲ್ಲಿ ಅತ್ಯಂತ ಕಟ್ಟುನಿಟ್ಟಾದ, ಅತಿ ಸೂಕ್ಷ್ಮ ವಿವರಗಳಿಗೂ ಸ್ಥಾನವಿರುವ, ಎಲ್ಲ ದೇಶಗಳಿಗೂ ಒಪ್ಪಿಗೆಯಾಗುವಂತಹ ಕರಾರಿನ ಕಲಂಗಳನ್ನು ಹೊಸದಾಗಿ ಐದೂ ಒಪ್ಪಂದಗಳಲ್ಲಿ ಸೇರಿಸಬೇಕು.

ಈ ವರ್ಷದ ಅಕ್ಟೋಬರ್‌ನಲ್ಲಿ ದುಬೈನಲ್ಲಿ ನಡೆಯಲಿರುವ ‘ಸ್ಪೇಸ್ ಜನರೇಶನ್ ಕಾಂಗ್ರೆಸ್’ ಅಧಿವೇಶನದಲ್ಲಿ ಚರ್ಚೆ, ಚಿಂತನೆ, ಸಮಾಲೋಚನೆಗಳಿಂದ ಬಾಹ್ಯಾಕಾಶ ಒಪ್ಪಂದಗಳಲ್ಲಿ ಅಗತ್ಯವಾದ ತಿದ್ದುಪಡಿಗಳು ಬರಲಿವೆಯೆಂಬ ವಿಶ್ವಾಸವನ್ನು ವಿಶ್ವಸಂಸ್ಥೆ ವ್ಯಕ್ತಪಡಿಸಿದೆ.

ಚುರುಮುರಿ

ಐರನ್‌ಲೆಗ್ ಗುರು

• ಲಿಂಗರಾಜು ಡಿ.ಎಸ್.

ತುರೇಮಣೆ ‘ಲೇಯ್ ಒಬ್ಬ ದೊಡ್ಡ ಕನ್ಸಲ್ಟೆಂಟು ಬಂದವ್ರಂತೆ. ನೋಡಿಕ್ಯ ಬರಮು ಬಾ. ಇವುರು ಕಾಲು ಮಡಗಿದ ಕಡೆ ಸರ್ವನಾಶವಂತೆ. ಇವುರು ಕೆಲಸ ಮಾಡ್ತಿದ್ದ ಎಲ್ಲಾ ಆಪೀಸುಗಳು ಒಂದಲ್ಲಾ ಒಂದು ಕಾರಣಕ್ಕೆ ಮೂರು ತಿಂಗಳಿಗೆ ಮುಚ್ಕೋದ್ವಂತೆ ಕಲಾ’ ಅಂದ್ರು.

‘ಇವರು ಎಲ್ಲಾರಂಗಲ್ಲ ಕನೋ! ಒಂಥರಾ ಎಡವಟ್ ಕನ್ಸಲ್ಟೆಂಟು. ಅವುರುನ್ನ ವಿಧಾನಸೌಧಕ್ಕೆ ಕಳಿಸಿದ್ರೆ ಸರ್ಕಾರ ಬಿದ್ದೋಯ್ತದೆ ಅಂತ ಹಸ್ತಸಾಮುದ್ರಿಕೆ ಪಕ್ಷ ಪ್ಲಾನ್ ಮಾಡ್ತಾದಂತೆ ಕಯ್ಯಾ’ ಅಂತು ಯಂಟಪ್ಪಣ್ಣ.

‘ಯಾರು ಸಾ ಈ ಖರಾಬ್ ಕನ್ಸಲ್ಟೆಂಟ್? ಏನು ಅವ್ರು ಹೆಸರು?’ ಕೇಳಿದೆ.

‘ಅವರೆಸರು ಐರನ್ ಲೆಗ್ ಸ್ವಾಮಿಗಳು ಅಂತ ಕನೋ. ಅವರ ಕಾಲಿಗೇ ಕೋಟಿ ರುಪಾಯಿ ಇನ್ಸೂರೆನ್ಸ್ ಅದೆ!’ ಅಂದ್ರು. ಅವುರ ಐದಂತಸ್ತಿನ ಮನೆ ಐರನ್‌ಲೆಗ್ ವಿಲ್ಲಾಕ್ಕೆ ಬಂದ್ಮೋ. ಭಾರೀ ಜನ ಸೇರಿದ್ರು. ಕನ್ಸಲ್ಟೆಂಟಿನ ಶಿಷ್ಯಕೀಟಗಳು ಗುರುಗಳನ್ನ ಹೊತ್ಕಬಂದು ಸಿಮ್ಮಾಸನದ ಮೇಲೆ ಇಳುಕಿದ್ರು. ಅವರು ನೆಲಕ್ಕೆ ಕಾಲೇ ಮಡಗತಿರಲಿಲ್ಲ. ಅಷ್ಟೊತ್ತಿಗೆ ರಾಜಾವುಲಿನೂ ಆಸ್ಥಾನ ಪಂಡಿತರ ಜೊತೆಗೆ ಬಂದು ಕನ್ಸಲ್ಟೆಂಟಿಗೆ ದೂರದಿಂದ್ಲೇ ಅಡ್ಡಬಿದ್ದರು.

‘ನಮ್ಮಂತೋರಿಗೂ ಒಂದು ಪ್ಯಾಕೇಜು ಕೊಡಿ’ ಅಂದ್ರು ಗುರುಗಳು. ರಾಜಾವುಲಿ ‘ಸ್ವಾಮಿ, ರಾಜ್ಯದೇಲಿ ಏನು ಮಾಡಿದ್ರೂ ಕೊರೊನಾ ಹೋಯ್ತಿಲ್ಲ! ತಮ್ಮ ಖರಾಬು ಕೀರ್ತಿ ಕೇಳಿದೀನಿ. ತಾವು ಎಲ್ಲೆಲ್ಲಿ ಕೊರೊನಾ ಜಾಸ್ತಿ ಅದೋ ಅಲ್ಲಿ ತಮ್ಮ ಐರನ್‌ಲೆಗ್ಗು ಮಡಗಬೇಕ್ರಾ! ಕೊರೊನಾ ತಮ್ಮಿಂದ ಹೊಂಟೋದ್ರೆ ಒಂದು ಐರನ್‌ಲೆಗ್ ಅಧ್ಯಯನ ಪೀಠ ಮಾಡ್ತೀನಿ. ಅದಕ್ಕೆ ನೀವೇ ಪರ್ಮನೆಂಟ್ ಅಧ್ಯಕ್ಷರು! ಕೋಟಿ ಅನುದಾನ ಕೊಡ್ತೀವಿ’ ಅಂದ್ರು.

‘ಆಯ್ತು ಭಕ್ತಾ, ಕೊರೊನಾ ಖೇಲ್ ಖತಂ, ನಾಟಕ್ ಬಂದ್’ ಅಂತ ಸ್ವಾಮಿಗಳು ಎದ್ದು ಬೆಂಗಳೂರು ರೌಂಡ್ಸಿಗೆ ಹೊಂಟರು.

ಮಾರನೇಗೆ ಆಗಲೇ ಸುದ್ದಿ, ಕೊರೊನಾ ಡಯಾಬಿಟೀಸು, ವೈಟ್ ಫಂಗಸ್ ಕಾಯಿಲೆ ಸುರುವಾಗ್ಯದೆ ಅಂತ. ಕನ್ಸಲ್ಟೆಂಟು ಕೊರೊನಾ ಪೀಡಿತರಾಗಿ ಮನೆ ಸೇರಿಕ್ಯಂಡಿದ್ರು!

ಸಂಗತ

ಕೋವಿಡ್ ಕಾಲದಲ್ಲೊಂದು ‘ವಿಕ್ಟರಿ ಗಾರ್ಡನ್’

ಕೋವಿಡ್ ಸಂಕಷ್ಟಕ್ಕೆ ಸಡ್ಡು ಹೊಡೆಯಲು ಕೈದೋಟ ಸಂಸ್ಕೃತಿ ನಮ್ಮ ನೆರವಿಗೆ ಬರಬೇಕಿದೆ

• ಸರೋಜಾ ಪ್ರಕಾಶ

‘ನಮ್ಮ ಕಿಟಕಿಯ ಆಚೆ ಏನು ಬೆಳೀಬಹುದು’, ‘ಮನೆಯಲ್ಲೇ ಕಂಪೋಸ್ಟ್ ಮಾಡೋದು ಹೇಗೆ’ ಇಂಥ ಪ್ರಶ್ನಾವಳಿ, ಇಷ್ಟೇ ಅಲ್ಲ, ‘ಟಾಯ್ಲೆಟ್‌ನಲ್ಲಿ ಟಿಶ್ಯೂ ಬದಲಾಗಿ ಯಾವ ಎಲೆ ಬಳಸಬಹುದು?’ ಎಂದು ಕೂಡಾ ಜನ ಕೇಳಿದ್ದರು ಎನ್ನುತ್ತಾರೆ ಅಮೆರಿಕದ ಯೋಗಶಿಕ್ಷಕಿ ಮತ್ತು ನಿಸರ್ಗಸ್ನೇಹಿ ಜೀವನದ ಕುರಿತು ಪ್ರತಿಪಾದನೆ ಮಾಡುತ್ತಿರುವ ಜೇನ್. ಹೀಗೆ ಕೇಳಿದವರೆಲ್ಲರೂ ಹಿಂದೆ ಯಾವತ್ತೂ ಗಿಡಗಳ ಕುರಿತು ಒಂದಿನಿತೂ ಆಸಕ್ತಿ ತೋರದಿದ್ದವರು.

ಮೊದಲ ಮಹಾಯುದ್ಧದ ನಂತರ ಎಲ್ಲೆಡೆ ಆಹಾರಕ್ಕಾಗಿ ಹಾಹಾಕಾರವೆದ್ದಿತ್ತು. ಆಗ ಬ್ರಿಟನ್ನಿನಲ್ಲಿ ಎದ್ದ ಹೊಸ ಆಶಯದ ಅಲೆ ‘ವಿಕ್ಟರಿ ಗಾರ್ಡನ್’. ಸಾವು, ನೋವು, ಹತಾಶೆಗಳ ನಡುವೆ, ನಮ್ಮ ಆಹಾರವನ್ನು ನಾವೇ ಬೆಳೆದು ಆರೋಗ್ಯ ವೃದ್ಧಿಸಿಕೊಳ್ಳುವ ಮೂಲಕ, ಎದುರಾದ ಸಮಸ್ಯೆಯ ವಿರುದ್ಧ ಜಯ ಗಳಿಸುವ ಆಶಯ ಅದು. ‘ವಿಕ್ಟರಿ ಗಾರ್ಡನ್’ ಮನೆಮನೆಯಲ್ಲೂ ಬಟಾಟೆ, ಬೀಟ್‌ರೂಟ್, ಜೋಳ, ಟೊಮ್ಯಾಟೊಗಳನ್ನು ಬೆಳೆದು ಆಹಾರ ಸ್ವಾವಲಂಬನೆಯ ರುಚಿ ತೋರಿಸಿತ್ತು.

ಉತ್ತರ ಅಮೆರಿಕ ರಾಷ್ಟ್ರವಾದ ಕ್ಯೂಬಾಕ್ಕೆ ಎದುರಾಗಿದ್ದು ಇನ್ನೊಂದು ರೀತಿಯ ಸಂಕಷ್ಟ. 1980ರ ದಶಕದಲ್ಲಿ ಅಮೆರಿಕದೊಂದಿಗೆ ವೈರತ್ವ ನೆಲೆಯೂರಿತ್ತು. ಮಿತ್ರರಾಷ್ಟ್ರವಾದ ಸೋವಿಯತ್ ಒಕ್ಕೂಟ ಛಿದ್ರಗೊಂಡು ಬಿಡಿ ದೇಶಗಳಾಗುವ ಹೊಯ್ದಾಟ ನಡೆದಾಗ, ಅಲ್ಲಿಂದ ಆಮದು ಸ್ತಬ್ಧಗೊಂಡಿತ್ತು. ಪೆಟ್ರೋಲಿಯಂ ಉತ್ಪನ್ನಗಳಿಂದ ಮೊದಲುಗೊಂಡು ಆಹಾರಧಾನ್ಯಗಳಿಗೂ ಒಕ್ಕೂಟವನ್ನೇ ನೆಚ್ಚಿಕೊಂಡಿದ್ದ ಕ್ಯೂಬಾ ಸ್ವಾವಲಂಬನೆಯ ಹಾದಿ ಹಿಡಿಯಲೇಬೇಕಿತ್ತು. ಆಗ ನಗರ, ಪಟ್ಟಣ, ಹಳ್ಳಿ ಎಲ್ಲ ಕಡೆ ಹಣ್ಣು, ತರಕಾರಿ, ಧಾನ್ಯಗಳನ್ನು ಸಾಂಪ್ರದಾಯಿಕವಾಗಿ ಬೆಳೆಯುವುದರ ಜೊತೆಗೆ ಪರಂಪರಾಗತ ಆಹಾರ ತಯಾರಿಕೆಗೆ ಒತ್ತು ದೊರೆಯಿತು. ಜನರಿಗೆ ತಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಮೂಡಿತು.

ಅಂತರ ಕಾಯ್ದುಕೊಳ್ಳುವಿಕೆಯಿಂದಾಗಿ ಪರಸ್ಪರ ದೂರವಾಗುತ್ತಿರುವ ಈ ಕಾಲದಲ್ಲೂ ಹೋಂ ಗಾರ್ಡನ್ ಅಥವಾ ಕೈದೋಟ ಎನ್ನುವ ಹವ್ಯಾಸ ಜನರನ್ನು ಹಿತ್ತಲಿಗೆ, ಖಾಲಿ ಜಾಗಕ್ಕೆ ಕಾಲಿಡುವಂತೆ ಪ್ರೇರೇಪಿಸುತ್ತಿದೆ.

ಹೀಗೆ ಒಂದಿಬ್ಬರಲ್ಲ, ಲಕ್ಷಾಂತರ ಜನರು ಬೀಜ ಬಿತ್ತುವಲ್ಲಿ, ಬೆಳೆಯುವುದರಲ್ಲಿ ಆಸಕ್ತಿ ತೋರಿದ್ದು ಈ ಕೋವಿಡ್ ಕಾಲದಲ್ಲಿ. ‘ಬಿತ್ತನೆ ಬೀಜಗಳ ಮಾರಾಟ ಒಂದೇ ವಾರದಲ್ಲಿ ಮೂರು ಪಟ್ಟು ಹೆಚ್ಚಾಗಿ, ಬೀಜ ಖಾಲಿಯಾಗುವ ಹೊತ್ತು ಬಂದಿತ್ತು’ ಎನ್ನುತ್ತಾರೆ ಒಬ್ಬ ಬೀಜ ಮಾರಾಟಗಾರ. ಸಂಸ್ಥೆಯೊಂದರ ವರದಿಯ ಪ್ರಕಾರ, ಟಿ.ವಿ ನೋಡುವುದನ್ನು ಬಿಟ್ಟರೆ ಗಾರ್ಡನಿಂಗ್ ಜನರ ನೆಚ್ಚಿನ ಹವ್ಯಾಸವಾಗಿ ಅಡುಗೆ, ಓದು ಹಾಗೂ ವ್ಯಾಯಾಮದಂತಹ ಚಟುವಟಿಕೆಗಳನ್ನು ಹಿಂದಿಕ್ಕಿತು. ಗಾರ್ಡನಿಂಗ್ ಆ್ಯಪ್‌ಗಳು, ಯುಟ್ಯೂಬ್ ಚಾನೆಲ್ಲುಗಳಿಗೆ ಎಲ್ಲಿಲ್ಲದ ಬೇಡಿಕೆ ಹುಟ್ಟಿತು.

ಬಿಡುವಿನ ವೇಳೆಯಲ್ಲಿ ಮಾಡಬಹುದಾದ ಚಟುವಟಿಕೆಗಳಲ್ಲಿ ಕೈದೋಟ ಬೆಳೆಯುವುದು ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯವನ್ನು ಉತ್ತಮಪಡಿಸುವ ಹವ್ಯಾಸವೆಂದು ಅಮೆರಿಕದ ಅಧ್ಯಯನ ವರದಿಯೊಂದು ಹೇಳಿದೆ. ‘ಹೊರಾಂಗಣದಲ್ಲಿ ಗಿಡಗಳ ಜೊತೆಗೆ ಕಳೆಯುವ ಸಮಯ ಮೈಗೆ ಕಸರತ್ತನ್ನು ನೀಡುವುದರೊಂದಿಗೆ ಮನಸ್ಸನ್ನೂ ಮಗ್ನವಾಗುವಂತೆ ಮಾಡುತ್ತದೆ. ಬೆಳೆಯುವುದೆಂದರೆ ಮಣ್ಣು, ನೀರು ಗಾಳಿಯೊಂದಿಗೆ ನೇರ ಸಂಬಂಧ ಹೊಂದುವುದು. ಆ ಕೆಲಸದಲ್ಲಿ ತೊಡಗಿದಾಗ, ನೀವು ಬೆಳೆದಿದ್ದನ್ನು ನೆರೆಯವರೊಂದಿಗೆ ಹಂಚಿಕೊಂಡಾಗ ಕೃತಕೃತ್ಯ ಭಾವ ಮನಸ್ಸನ್ನು ತುಂಬುತ್ತದೆ’.

‘ಮಾಡರ್ನ್ ಆರ್ಗ್ಯಾನಿಕ್ ಮೂವ್‌ಮೆಂಟ್’ ದೇಶವಿದೇಶಗಳಲ್ಲಿ ಪ್ರಚಲಿತವಾಗುತ್ತಿದೆ. ನಮಗೆಂದು ನಾವೇ ಬೆಳೆದುಕೊಳ್ಳುವಾಗ ವಿಷಕರ ರಾಸಾಯನಿಕಗಳನ್ನು ಬಳಸದೆ ಸುರಕ್ಷಿತ ವಿಧಾನಗಳಿಗೆ ಮೊರೆ ಹೋಗುತ್ತೇವೆ. ಕೆಲವು ಸಂಸ್ಥೆಗಳು ಕಂಪೋಸ್ಟ್ ತಯಾರಿಕೆ, ಎರೆಗೊಬ್ಬರ ತಯಾರಿಕೆ, ವರ್ಟಿಕಲ್ ಗಾರ್ಡನಿಂಗ್, ಮಣ್ಣು, ನೀರು ಕುರಿತಾದ ವಿವರಗಳು, ಬೀಜ, ಕೈಪಿಡಿ ಇತ್ಯಾದಿಗಳ ಮೂಲಕ ಜನರನ್ನು ತಲುಪುತ್ತಿವೆ.

ಕೈದೋಟದ ಹವ್ಯಾಸವೆಂದರೆ ನಮ್ಮ ಕುಟುಂಬದ ಆಹಾರಾಭ್ಯಾಸವನ್ನು ಪಳಗಿಸುವುದು. ಆಹಾರ ಸರಪಳಿಯನ್ನು ಚಿಕ್ಕದಾಗಿಸುವುದು ಹಾಗೂ ಉಳಿಕೆಯನ್ನು ನಮ್ಮದೇ ನೆಲಕ್ಕೆ ಮರಳಿಸುವುದು. ತ್ಯಾಜ್ಯ ನೀರಿನ ಸಮರ್ಥ ಬಳಕೆ, ಕಸದಿಂದ ಗೊಬ್ಬರ ಇಂಥವುಗಳ ಅರಿವಷ್ಟೇ ಅಲ್ಲ, ಹಸಿರು, ತಂಪಿನ ವಾತಾವರಣದ ನಿರ್ಮಾತೃಗಳೂ ನಾವೆಂಬ ಆತ್ಮವಿಶ್ವಾಸ ಗಳಿಸುವುದು. ದೂರದಿಂದ ಬರುವ ಬಟಾಟೆಯ ಬದಲು ನಿಮ್ಮಲ್ಲಿ ಬೆಳೆಯುವ ಗೆಣಸನ್ನು ಬಳಸಿದರೆ, ನೀವೊಂದಿಷ್ಟು ಇಂಗಾಲದ ಹೆಜ್ಜೆಯನ್ನು ಕಡಿಮೆಗೊಳಿಸುತ್ತೀರಿ. ಪ್ರಕೃತಿಯೊಡನೆ ಬೆರೆತು, ಬೀಜ ಮೊಳಕೆಯಿಂದ ಆಹಾರ ಸಿದ್ಧಗೊಳ್ಳುವವರೆಗಿನ ಎಲ್ಲ ಹಂತಗಳನ್ನೂ ಅರಿಯುತ್ತೀರಿ. ಆರೋಗ್ಯಕರ ಆಹಾರಾಭ್ಯಾಸ ನಿಮ್ಮದಾಗುತ್ತದೆ. ಮಕ್ಕಳನ್ನೂ ತೊಡಗಿಸಿದಿರೆಂದರೆ ಕೈದೋಟದ ಹವ್ಯಾಸ ಒಂದು ಸಂಸ್ಕೃತಿಯಾಗಿ ಬೆಳೆಯುವಲ್ಲಿ ನಿಮ್ಮ ಪಾಲಿನ ಕೊಡುಗೆ ನೀಡುತ್ತಿದ್ದೀರಿ ಎಂದೇ ಅರ್ಥ.

ಹವಾಮಾನ ಬದಲಾವಣೆಯ ವಿರುದ್ಧ ಜಾಗೃತಿ ಮೂಡಿದ ಕಳೆದ ದಶಕದಿಂದ ಅಮೆರಿಕದಲ್ಲಿ ವಿಕ್ಟರಿ ಗಾರ್ಡನ್ನುಗಳು ‘ಕ್ಲೈಮೇಟ್ ವಿಕ್ಟರಿ ಗಾರ್ಡನ್’ ಎಂದು ಹೊಸ ನಾಮಾಂಕಿತ ಪಡೆದಿವೆ. ಯುವ ಸಮುದಾಯ ಓಣಿ, ಬೀದಿಗಳ ಖಾಲಿ ಜಾಗದಲ್ಲಿ ಬೆಳೆದು ಅಲ್ಲೇ ಸುತ್ತಮುತ್ತ ತಾಜಾ ತಾಜಾ ಬಳಸುವ ಹೊಸ ಸಂಪ್ರದಾಯವನ್ನು ಹುಟ್ಟುಹಾಕಿದೆ.

ಈಗಿನ ಕೋವಿಡ್ ಸಂಕಷ್ಟಕ್ಕೆ ಸಡ್ಡು ಹೊಡೆಯಲು ಮತ್ತೆ ಕೈದೋಟ ಸಂಸ್ಕೃತಿ ನಮ್ಮ ನೆರವಿಗೆ ಬರಬೇಕಿದೆ. ‘ಕೋವಿಡ್ ವಿಕ್ಟರಿ ಗಾರ್ಡನ್’ಗಳಾಗಿ ತನು ಮನಗಳಿಗೆ ಹೊಸ ಚೈತನ್ಯ ನೀಡಬೇಕಿದೆ.

ವಾಚಕರ ವಾಣಿ

ಸಾರ್ವಜನಿಕ ಜೀವನದಲ್ಲಿ ಇರಲು ಯೋಗ್ಯರಲ್ಲ

ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರು ತಮ್ಮ ವಿರುದ್ಧ ಲೈಂಗಿಕ ಆರೋಪದ ಸಿ.ಡಿ. ಹೊರಬಂದಾಗ, ‘ಅದಕ್ಕೂ ನನಗೂ ಸಂಬಂಧವೇ ಇಲ್ಲ, ಸಿ.ಡಿ.ಯಲ್ಲಿರುವ ಯುವತಿಯನ್ನು ನಾನು ನೋಡಿಯೇ ಇಲ್ಲ. ನನ್ನ ವಿರುದ್ಧ ನಡೆಯುತ್ತಿರುವ ರಾಜಕೀಯ ಷಡ್ಯಂತ್ರ ಇದು’ ಎಂದೆಲ್ಲಾ ಆರ್ಭಟಿಸಿದ್ದರು. ಆದರೆ, ಈಗ ತನಿಖಾಧಿಕಾರಿಗಳ ಮುಂದೆ ‘ಆಕೆಯ ಸಹಮತದಿಂದಲೇ ಲೈಂಗಿಕ ಸಂಪರ್ಕ ಬೆಳೆಸಿದ್ದೆ. ಆಕೆಗೂ ನನಗೂ ಸ್ವಲ್ಪ ದಿನಗಳ ಹಿಂದಿನಿಂದ ಪರಿಚಯವಿತ್ತು’ ಎಂದು ಹೇಳಿಕೆ ನೀಡಿದ್ದಾರೆ ಎಂದು ವರದಿಯಾಗಿದೆ.

ಇದು ನಿಜವೇ ಆಗಿದ್ದಲ್ಲಿ, ಸಾರ್ವಜನಿಕವಾಗಿ ಸುಳ್ಳು ಹೇಳಿದ ಇವರು ಸಾರ್ವಜನಿಕ ಜೀವನದಲ್ಲಿ ಇರುವುದಕ್ಕೆ ಅನರ್ಹರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಅರ್ಜಿ ಶುಲ್ಕ ಹೆಚ್ಚಳ ಎಷ್ಟು ಸರಿ?

ಪೊಲೀಸ್ ಕಾನ್‌ಸ್ಟೆಬಲ್ ಪುರುಷ ಮತ್ತು ಮಹಿಳೆಯರ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಲಾಗಿದೆ. ಸದ್ಯ ನಿರುದ್ಯೋಗದ ಸಮಸ್ಯೆಯಿಂದ ತತ್ತರಿಸುತ್ತಿರುವ ಯುವಜನತೆಗೆ ಸರ್ಕಾರದ ಈ ಕ್ರಮ ನಿಜಕ್ಕೂ ಒಳ್ಳೆಯ ಬೆಳವಣಿಗೆ. ಆದರೆ, ಕಳೆದ ಬಾರಿ ವಿವಿಧ ವರ್ಗಗಳಿಗೆ ಕ್ರಮವಾಗಿ ₹ 250 ಹಾಗೂ ₹ 100 ಇದ್ದ ಅರ್ಜಿ ಶುಲ್ಕ ಈ ಬಾರಿ ₹ 400 ಹಾಗೂ ₹ 200 ಆಗಿದೆ. ಬೆಂಬಿಡದೆ ಕಾಡುತ್ತಿರುವ ಕೊರೊನಾ ಸೋಂಕು ಹಾಗೂ ಲಾಕ್‌ಡೌನ್ ಸಮಯದಲ್ಲಿ ಅಭ್ಯರ್ಥಿಗಳ ಮೇಲೆ ಬರೆ ಎಳೆದಂತಿದೆ ಈ ಹೆಚ್ಚಳ.

ಕೆಲ ತಿಂಗಳುಗಳ ಹಿಂದೆ ಅಧಿಸೂಚನೆ ಹೊರಡಿಸಿದ್ದ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೂ ಇದೇ ರೀತಿ ಅರ್ಜಿ ಶುಲ್ಕ ಹೆಚ್ಚಾಗಿತ್ತು. ಎಲ್ಲವೂ ಸರಿಯಾಗಿ, ಜನಜೀವನ ನೆಮ್ಮದಿಯಿಂದ ಉಸಿರಾಡಿದಾಗ ಅಗತ್ಯವಾಗಿ ಶುಲ್ಕ ಹೆಚ್ಚಳ ಮಾಡಲಿ. ಆದರೆ ಕೊರೊನಾ ಸೋಂಕಿನ ಸಂಕಷ್ಟದ ಪರಿಸ್ಥಿತಿಯಲ್ಲಿ ಇಂತಹ ಕ್ರಮ ಸರಿಯಲ್ಲ.

ಅನಿಲ್ ಕುಮಾರ್, ನಂಜನಗೂಡು

‘ಜನಗಣಮನ...!’

ಮತ್ತೆ ಪ.ಬಂಗಾಳದ
‘ಅಧಿನಾಯಕಿ’
ಮಮತಾ!
‘ಜಯ, ಹೇ’ ಎನ್ನೋಣ,
ರವೀಂದ್ರನಾಥ
ಟ್ಯಾಗೋರರ ಕ್ಷಮೆ
ಕೋರುತ್ತ!

ಸಿ.ಪಿ.ಕೆ., ಮೈಸೂರು

ಶಿಕ್ಷಕರು, ವಿದ್ಯಾರ್ಥಿಗಳಿಗೆ ಲಸಿಕೆ ಅಗತ್ಯ

ಕೇಂದ್ರ ಸರ್ಕಾರ ಆಯೋಜಿಸಿದ್ದ ಎಲ್ಲಾ ರಾಜ್ಯಗಳ ಶಿಕ್ಷಣ ಸಚಿವರ ಸಭೆಯಲ್ಲಿ ‘ದ್ವಿತೀಯ ಪಿ.ಯು ಪರೀಕ್ಷೆ ನಡೆಸುವುದು ಸೂಕ್ತ’ ಎಂಬ ಅಭಿಪ್ರಾಯ ವ್ಯಕ್ತವಾಗಿರುವುದು (ಪ್ರ.ವಾ., ಮೇ 24) ಸರಿಯಾಗಿಯೇ ಇದೆ. ಇದೇ ಸಂದರ್ಭದಲ್ಲಿ ದೆಹಲಿ ಮತ್ತು ಮಹಾರಾಷ್ಟ್ರ ಶಿಕ್ಷಣ ಸಚಿವರು, ಪರೀಕ್ಷೆಗೆ ಮುನ್ನ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಲಸಿಕೆ ನೀಡುವಂತೆ ಬೇಡಿಕೆ ಮಂಡಿಸಿರುವುದು ಸಮಂಜಸವಾಗಿದೆ.

ವೃತ್ತಿಪರ ಶಿಕ್ಷಣಕ್ಕೆ ಸನ್ನದ್ಧರಾಗುವ ಹಂತದಲ್ಲಿರುವ ದ್ವಿತೀಯ ಪಿಯು ವಿದ್ಯಾರ್ಥಿಗಳ ವಯಸ್ಸು 17 ಆಗಿರುವುದರಿಂದ ಸರ್ಕಾರವು ತಕ್ಷಣವೇ ಆದ್ಯತೆಯ ಮೇಲೆ ಕೂಡಲೇ ಈ ಮಕ್ಕಳು ಮತ್ತು ಶಿಕ್ಷಕರಿಗೆ ಮೊದಲ ಡೋಸ್ ಲಸಿಕೆ ನೀಡಬೇಕು. ಇದರಿಂದ, ಈಗಾಗಲೇ ಸಭೆಯಲ್ಲಿ ತೀರ್ಮಾನವಾಗಿರುವಂತೆ ಜುಲೈ ಮಧ್ಯಭಾಗದಲ್ಲಿ ಪರೀಕ್ಷೆ ನಡೆಸಲು ಯಾವ ತೊಂದರೆಯೂ ಆಗದು. ಅಲ್ಲದೆ ಪರೀಕ್ಷೆಗೆ ಮುನ್ನ ಎರಡನೇ ಡೋಸ್ ಲಸಿಕೆ ಹಾಕಲೂ ಯಾವುದೇ ಸಮಸ್ಯೆಯಾಗದು. ಪೂರ್ವನಿಗದಿಯಂತೆ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವ ಕಾರ್ಯವನ್ನೂ ಪರೀಕ್ಷಾ ಮಂಡಳಿಯ ಅಧಿಕಾರಿಗಳು ಪೂರ್ಣಗೊಳಿಸಿರುವುದರಿಂದ, ಜುಲೈನಲ್ಲಿ ಪರೀಕ್ಷೆ ನಡೆಸಿ, ಆಗಸ್ಟ್‌ನಲ್ಲಿ ಫಲಿತಾಂಶವನ್ನು ಕೂಡ ಪ್ರಕಟಿಸಿ, ಮಕ್ಕಳು ಹಾಗೂ ಪೋಷಕರಲ್ಲಿರುವ ಗೊಂದಲ, ಒತ್ತಡವನ್ನು ನಿವಾರಿಸುವ ಜರೂರು ಈಗ ಇದೆ.

ಟಿ.ಉಮಾ ಶಂಕರ್, ಬೆಂಗಳೂರು

ಆನೆ ನಡೆಯುವ ದಾರಿಯಲ್ಲಿ...

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಆನೆ ಕಾರಿಡಾರ್ ವಿಸ್ತರಿಸಿ, ಮಾನವ– ವನ್ಯಜೀವಿ ಸಂಘರ್ಷಕ್ಕೆ ಕೊನೆ ಹಾಡಲು ಒಂದು ಸಾವಿರ ಎಕರೆಯನ್ನು ಅರಣ್ಯ ಇಲಾಖೆಗೆ ಬಿಟ್ಟುಕೊಡಲು ಕಂದಾಯ ಇಲಾಖೆ ಮುಂದಾಗಿದೆ (ಪ್ರ.ವಾ., ಮೇ 24). ಆನೆ ನಡೆದದ್ದೇ ದಾರಿ ಎಂಬ ಮಾತಿನಂತೆ, ಸಾಮಾನ್ಯವಾಗಿ ಆನೆ ಪ್ರಯಾಣ ಮಾಡಿದ ದಾರಿಯಲ್ಲಿ ಜನಸಂಚಾರ ಕಡಿಮೆ. ಅಂತಹ ಜಾಗದಲ್ಲಿ (ಕಾಡಿನ ಅಂಚಿನಲ್ಲಿ) ರೆಸಾರ್ಟ್ ಸಂಸ್ಕೃತಿ ತಲೆ ಎತ್ತಿತು. ಇದರಿಂದ ಈ ಪ್ರದೇಶಕ್ಕೆ ಬಂದು ಹೋಗುವವರು ಮತ್ತು ವಾಹನ ಸಂಚಾರ ಜಾಸ್ತಿಯಾಗಿ ಆನೆಗಳು ಕಾಡು ಬಿಟ್ಟು ನಾಡಿಗೆ ಬರುವಂತಾಯಿತು. ಆದ್ದರಿಂದ ಅರಣ್ಯ ಇಲಾಖೆಯವರು ಆಗಲೇ ಆನೆ ದಾರಿಯ ಅಕ್ಕಪಕ್ಕದಲ್ಲಿ ರೆಸಾರ್ಟ್ ಸಂಸ್ಕೃತಿಗೆ ಅನುವು ಮಾಡಿಕೊಡದಿದ್ದರೆ ಈ ತೊಂದರೆ ತಪ್ಪಿಸಬಹುದಿತ್ತು.

ಗೊಡಬನಹಾಳ್ ಮಲ್ಲಿಕಾರ್ಜುನ, ಚಿತ್ರದುರ್ಗ

ಕಟುಕ ಮಗನಿಗೆ ಧಿಕ್ಕಾರ ಇರಲಿ

‘ನಮ್ಮಪ್ಪನ ಶವಸಂಸ್ಕಾರವನ್ನು ನೀವೇ ಮಾಡಿ; ಅವರ ಬಳಿಯಿದ್ದ ಹಣ ಕಳುಹಿಸಿಕೊಡಿ’ ಎಂದು ಮಗ ಹೇಳಿದ ಸುದ್ದಿ (ಪ್ರ.ವಾ., ಮೇ 24) ಓದಿ ಮನಸ್ಸು ಮುರುಟಿಹೋಯಿತು. ಕೊರೊನಾ ವೈರಾಣು ಮಾನವೀಯ ಹಾಗೂ ರಕ್ತ ಸಂಬಂಧಗಳನ್ನು ಕೊಂದು ಹಾಕಿದೆಯೇ ಎಂಬ ಪ್ರಶ್ನೆಯನ್ನು ಮೈಸೂರಿನಲ್ಲಿ ನಡೆದ ಈ ಘಟನೆ ಕಣ್ಣೆದುರು ತರುತ್ತದೆ. ನಿಜಕ್ಕೂ ಇದು ಇಡೀ ಮನುಕುಲಕ್ಕೇ ಸವಾಲಾಗುವ ಸಂಗತಿ. ಕೊರೊನಾದಿಂದ ಸಾವಪ್ಪಿದ ಗಂಡನ ಮುಖ ನೋಡದ ಹೆಂಡತಿ, ಅಪ್ಪನ ದೇಹವೂ ಬೇಡ, ಅವರ ಮುಖವನ್ನೂ ನೋಡಲಾರೆ ಅನ್ನುವ ಮಗ, ಅಂತ್ಯಸಂಸ್ಕಾರಕ್ಕೆ ಬರುತ್ತೇವೆಂದು ಹೇಳಿ ಬಾರದ ಬಂಧುಗಳು...

‘ಅಪ್ಪನ ಹಣ, ಎಟಿಎಂ ಕಾರ್ಡು, ದಾಖಲೆ ಅಷ್ಟನ್ನೇ ನಾನಿದ್ದ ಜಾಗಕ್ಕೆ ತಂದುಕೊಡಿ. ಹೆಣ ನೀವೇ ಸುಟ್ಟಾಕಿ’ ಎಂದ ಕಟುಕ ಮಗನಿಗೆ ಧಿಕ್ಕಾರ ಇರಲಿ. ಸಮಾಜ ಇಷ್ಟೊಂದು ಕ್ರೂರ ಹಾಗೂ ಅಮಾನವೀಯ ಆಗಬಾರದು. ಈ ಸಂದರ್ಭದಲ್ಲಿ ಮೃತ ವ್ಯಕ್ತಿಯ ಅಂತ್ಯಕ್ರಿಯೆಗೆ ವ್ಯವಸ್ಥೆ ಮಾಡಿದ ಮೈಸೂರಿನ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಅವರು ತೋರಿದ ಮಾನವೀಯತೆಗೆ, ಅವರ ತಾಳ್ಮೆಯ ಕಾರ್ಯಗಳಿಗೆ ಸಾವಿರ ನಮನಗಳು. ಇಂಥ ಜನಸೇವಕರ ಸಂಖ್ಯೆ ಹೆಚ್ಚಾಗಲಿ.

ಆರ್.ಜಿ.ಹಳ್ಳಿ ನಾಗರಾಜ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋವಿಡ್ 2ನೇ ಅಲೆಯ ಅಬ್ಬರ ಮತ್ತು ಇಳಿಕೆ (ಹೊಸ ಪ್ರಕರಣಗಳು)



- ಕಳೆದ 15 ದಿನಗಳಿಂದ ದೇಶದಾದ್ಯಂತ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಏಳು ರಾಜ್ಯಗಳಲ್ಲಿ ಮಾತ್ರ ನಿತ್ಯ 10,000ಕ್ಕೂ ಹೆಚ್ಚು ಪ್ರಕರಣ ವರದಿಯಾಗುತ್ತಿವೆ

- ದೇಶದ 93 ಜಿಲ್ಲೆಗಳಲ್ಲಿ ಕೋವಿಡ್ ಪಾಸಿಟಿವಿಟಿ (ದೃಢಪಡುವಿಕೆ) ಪ್ರಮಾಣ ಗಣನೀಯವಾಗಿ ಕುಸಿತ ಕಂಡಿದೆ
- ಬಹುತೇಕ ರಾಜ್ಯಗಳಲ್ಲಿ ಜಾರಿಗೆ ತಂದ ಕಟ್ಟುನಿಟ್ಟಿನ ಲಾಕ್‌ಡೌನ್ ಪರಿಣಾಮ, ಕೋವಿಡ್ ಪ್ರಕರಣಗಳ ಸಂಖ್ಯೆ ಕ್ರಮೇಣ ಇಳಿಕೆಯಾಗುತ್ತಿವೆ ಎಂದು ತಜ್ಞರು ಹೇಳಿದ್ದಾರೆ
- ದೆಹಲಿಯಲ್ಲಿ ಐದು ವಾರಗಳ ಕಠಿಣ ಲಾಕ್‌ಡೌನ್ ಹೇರಿದ್ದರಿಂದ ನಿತ್ಯದ ಪ್ರಕರಣಗಳು 26 ಸಾವಿರದಿಂದ 3 ಸಾವಿರದ ಸನಿಹಕ್ಕೆ ಬಂದಿವೆ. ಪಾಸಿಟಿವಿಟಿ ದರ ಶೇ 36ರಿಂದ ಶೇ 5ಕ್ಕೆ ಇಳಿದಿದೆ
- ಜನವರಿ 16ರಂದು ಲಸಿಕಾ ಅಭಿಯಾನ ಶುರುವಾಯಿತು. ಮುಂಚೂಣಿ ಕಾರ್ಯಕರ್ತರು ಹಾಗೂ 45 ವರ್ಷ ಮೇಲ್ಪಟ್ಟವರು ಲಸಿಕೆ ಹಾಕಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಜನರಲ್ಲಿ ರೋಗನಿರೋಧಕ ಶಕ್ತಿ ಸೃಷ್ಟಿಯಾಗುತ್ತಿದ್ದು, ಸೋಂಕಿನ ದರ ಇಳಿಕೆಗೆ ಲಸಿಕೆಯೂ ಕಾರಣವಾಗಿದೆ

ಕೋವಿಡ್ ಪ್ರಕರಣ ಇಳಿಕೆಯ ಆಶಾಕಿರಣ

ಕೋವಿಡ್‌-19ರ ಎರಡನೇ ಅಲೆಯು ಇಳಿಕೆಯತ್ತ ಸಾಗುತ್ತಿದೆ ಎಂಬ ಆಶಾಕಿರಣವು ಕಾಣಿಸಿಕೊಂಡಿದೆ. ಸೋಮವಾರ ದಾಖಲಾದ ಹೊಸ ಪ್ರಕರಣಗಳ ಸಂಖ್ಯೆ 1.96 ಲಕ್ಷ. ಮಂಗಳವಾರವೂ ಸರಿಸುಮಾರು ಇದೆ ಸಂಖ್ಯೆಯ ಹೊಸ ಪ್ರಕರಣಗಳು ಪತ್ತೆಯಾಗಿವೆ. ಕಳೆದ ವಾರದಿಂದ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿದೆ ಮತ್ತು ಗುಣಮುಖರ ಸಂಖ್ಯೆ ಏರುತ್ತಿದೆ. ಜನರ ಆತಂಕವು ಇಳಿಮುಖವಾಗುತ್ತಿದೆ.

ಈ ವರ್ಷ ಮಾರ್ಚ್‌ನಿಂದ ತೀವ್ರಗೊಂಡ ಕೋವಿಡ್‌-19ರ ಎರಡನೇ ಅಲೆಯು ಮೊದಲ ಅಲೆಯ ರೀತಿಯಲ್ಲಿ ಇರಲಿಲ್ಲ. ಹರಡುವಿಕೆಯ ದರ, ರೋಗ ಲಕ್ಷಣಗಳ ತೀವ್ರತೆ ಮತ್ತು ಸಾವಿನ ಪ್ರಮಾಣ ಎಲ್ಲವೂ ಹೆಚ್ಚೇ ಇತ್ತು. ರಕ್ತದಲ್ಲಿ ಆಮ್ಲಜನಕದ ಪ್ರಮಾಣ ಇಳಿಕೆಯಾಗುವ ಗಂಭೀರ ಸಮಸ್ಯೆಯೂ ಕಾಣಿಸಿಕೊಂಡಿತು. ಹಾಗಾಗಿಯೇ ಜನರಲ್ಲಿ ಹೆಚ್ಚು ಆತಂಕ ಮತ್ತು ಕಳವಳವನ್ನು ಎರಡನೇ ಅಲೆಯು ಮೂಡಿಸಿತ್ತು.

ಈ ತಿಂಗಳ 5ರಂದು ಭಾರತದಲ್ಲಿ 4,12,262 ಪ್ರಕರಣಗಳು ವರದಿಯಾಗಿದ್ದವು. ಇದು ದೇಶದಲ್ಲಿ ಈವರೆಗೆ ವರದಿಯಾದ ಗರಿಷ್ಠ ಸಂಖ್ಯೆ. ಮಹಾರಾಷ್ಟ್ರ (57,640), ಕರ್ನಾಟಕ (50,112), ಕೇರಳ (41,953), ಉತ್ತರ ಪ್ರದೇಶ (31,111), ತಮಿಳುನಾಡು (23,310) ರಾಜ್ಯಗಳಲ್ಲಿ ಭಾರಿ ಸಂಖ್ಯೆಯ ಪ್ರಕರಣಗಳು ದೃಢಪಟ್ಟಿದ್ದೇ ಈ ಹೆಚ್ಚಳಕ್ಕೆ ಕಾರಣ. ಹೊಸ ಪ್ರಕರಣಗಳು ಮಾರ್ಚ್‌ನಿಂದ ಸತತವಾಗಿ ಏರಿಕೆಯಾಗುತ್ತಲೇ ಇದ್ದವು. ಏಪ್ರಿಲ್ 15ರಂದು ಹೊಸ ಪ್ರಕರಣಗಳು ಎರಡು ಲಕ್ಷ ದಾಟಿದ್ದವು. ಏಪ್ರಿಲ್ 22ರ ಹೊತ್ತಿಗೆ ಮೂರು ಲಕ್ಷ, ಏಪ್ರಿಲ್ 30ರ ಹೊತ್ತಿಗೆ ನಾಲ್ಕು ಲಕ್ಷವನ್ನೂ ಮೀರಿ ಸಾಗಿದವು. ಈ ತ್ವರಿತವಾದ ಏರಿಕೆಯು ಆಸ್ಪತ್ರೆ ಮತ್ತು ಇತರ ಮೂಲಸೌಕರ್ಯಗಳ ಮೇಲೆ ಭಾರಿ ಒತ್ತಡ ಹೇರಿದ್ದಲ್ಲದೆ ದೇಶದಾದ್ಯಂತ ಕಳವಳಕ್ಕೆ ಕಾರಣವಾಗಿತ್ತು.

ಹಲವು ರಾಜ್ಯಗಳು ಮತ್ತು ದೊಡ್ಡ ನಗರಗಳಲ್ಲಿ ಕರ್ಫ್ಯೂ ಮತ್ತು ಲಾಕ್‌ಡೌನ್‌ನಂತಹ ಕಠಿಣ ಕ್ರಮಗಳನ್ನು ಕಳೆದ ಒಂದೂವರೆ ತಿಂಗಳಲ್ಲಿ ಕೈಗೊಳ್ಳಲಾಗಿದೆ. ಜನ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ. ಇದು ಪರಿಣಾಮ ಬೀರಿದಂತೆ ಕಾಣಿಸುತ್ತಿದೆ. ಅತಿ ಹೆಚ್ಚು ಪ್ರಕರಣಗಳು ವರದಿಯಾಗುತ್ತಿದ್ದ ಮಹಾರಾಷ್ಟ್ರ (22,122), ಕರ್ನಾಟಕ (25,311), ಕೇರಳ (17,821), ಉತ್ತರ ಪ್ರದೇಶದಲ್ಲಿ (3,894) ಸೋಮವಾರ ದೃಢಪಟ್ಟ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಇಳಿಕೆಯಾಗಿದೆ. ಏಪ್ರಿಲ್ 20ರಂದು ಗರಿಷ್ಠ ಎಂದರೆ 28,395 ಹೊಸ ಪ್ರಕರಣಗಳು ದಾಖಲಾಗಿದ್ದ ದೆಹಲಿಯಲ್ಲಿ ಸೋಮವಾರ 1,550 ಹೊಸ ಪ್ರಕರಣಗಳಷ್ಟೇ ಪತ್ತೆಯಾಗಿವೆ.

ಸಕ್ರಿಯ ಪ್ರಕರಣಗಳ ಸಂಖ್ಯೆಯಲ್ಲಿಯೂ ಇಳಿಕೆ ಕಾಣಿಸಿದೆ. ಇದೇ 9ರಂದು ದೇಶದಲ್ಲಿ ಈವರೆಗಿನ ಗರಿಷ್ಠ ಎಂದರೆ 37.41 ಲಕ್ಷ ಸಕ್ರಿಯ ಪ್ರಕರಣಗಳು ಇದ್ದವು. ಅದರ ಸಂಖ್ಯೆಯು ಸೋಮವಾರ 25.81 ಲಕ್ಷಕ್ಕೆ ಕುಸಿದಿದೆ.

ಸಾವಿನ ಸಂಖ್ಯೆ ಕುಸಿಯದಿರಲು ಕಾರಣವೇನು?

ದೇಶದಲ್ಲಿ ಕೋವಿಡ್‌ನಿಂದಾಗಿ ಮೂರು ಲಕ್ಷಕ್ಕೂ ಹೆಚ್ಚು ಸಾವುಗಳು ಸಂಭವಿಸಿವೆ. ಅದರಲ್ಲಿ ಅರ್ಧದಷ್ಟು ಸಾವುಗಳು ಎರಡನೇ ಅಲೆಯ ಸಂದರ್ಭದಲ್ಲಿ ಸಂಭವಿಸಿವೆ. ಮಾರ್ಚ್ ನಂತರದ ಏಳು ವಾರಗಳಲ್ಲಿ ಸುಮಾರು 1.4 ಲಕ್ಷ ಮಂದಿ ಸತ್ತಿದ್ದಾರೆ ಎಂಬುದೇ ಕೋವಿಡ್ ಎರಡನೆಯ ಅಲೆಯು ಎಷ್ಟು ಅಪಾಯಕಾರಿ ಎಂಬುದನ್ನು ಸೂಚಿಸುತ್ತದೆ.

ಮೇ ತಿಂಗಳಲ್ಲಿ ಸುಮಾರು 92 ಸಾವಿರ ಜನರು ಕೋವಿಡ್‌ನಿಂದಾಗಿ ಪ್ರಾಣ ಬಿಟ್ಟಿದ್ದಾರೆ ಎಂದು ಅಂಕಿಅಂಶಗಳು ಹೇಳುತ್ತವೆ. ಪ್ರಮುಖ ನಗರ ಹಾಗೂ ರಾಜ್ಯಗಳಲ್ಲಿ ಲಾಕ್‌ಡೌನ್ ಹಾಗೂ ಕಟ್ಟುನಿಟ್ಟಿನ ನಿಯಮಗಳ ಜಾರಿಯಿಂದಾಗಿ ಸೋಂಕಿನ ಪ್ರಕರಣಗಳು ಕಡಿಮೆಯಾಗಿವೆ. ಆದರೂ ಸಾವಿನ ಸಂಖ್ಯೆ ಹೆಚ್ಚು ಕಾಣಿಸಿದೆ. ಈ ತಿಂಗಳಲ್ಲಿ ಕಡತಗಳಲ್ಲಿ ದಾಖಲಾಗಿರುವ ಎಲ್ಲಾ ಸಾವುಗಳು ಇದೇ ತಿಂಗಳಲ್ಲಿ ಸಂಭವಿಸಿದ್ದಲ್ಲ ಎಂಬುದು ಇದಕ್ಕೆ ಕಾರಣ. ಎರಡು ವಾರಗಳ ಹಿಂದೆ ಸತ್ತವರ ಲೆಕ್ಕವನ್ನೂ ಮೇ ತಿಂಗಳಲ್ಲಿ ತೆಗೆದುಕೊಂಡಿರುವುದರಿಂದ ಈ ತಿಂಗಳಲ್ಲಿ ಸತ್ತವರ ಸಂಖ್ಯೆ ಅತಿ ಹೆಚ್ಚು ಕಾಣಿಸುತ್ತಿದೆ.

ಉದಾಹರಣೆಗೆ ಹೇಳುವುದಾದರೆ, ಕಳೆದ ಭಾನುವಾರ ಮಹಾರಾಷ್ಟ್ರದಲ್ಲಿ 1,320 ಮಂದಿ ಸತ್ತಿದ್ದಾರೆ ಎಂದು ಅಂಕಿಅಂಶಗಳು ಹೇಳಿವೆ. ಆದರೆ ವಾಸ್ತವದಲ್ಲಿ, ಅವರಲ್ಲಿ 726 ಮಂದಿ ಎರಡು ವಾರಕ್ಕೂ ಹಿಂದೆ ಸತ್ತವರು. ಅವರ ದಾಖಲೆಗಳನ್ನು ಭಾನುವಾರ ಅಪ್‌ಲೋಡ್ ಮಾಡಲಾಗಿದೆ. ಅಂದರೆ, ಆ ದಿನ ಸತ್ತವರ ಸಂಖ್ಯೆಯು 594 ಮಾತ್ರ. ತಾಂತ್ರಿಕ ಸಮಸ್ಯೆಗಳಿಂದಾಗಿ ಹಿಂದಿನ ಸಾವಿನ ಪ್ರಕರಣಗಳು ತಡವಾಗಿ ವರದಿಯಾಗಿವೆ. ತಮಿಳುನಾಡು ಮತ್ತು ಕರ್ನಾಟಕದಲ್ಲೂ ಇಂಥ ಬೆಳವಣಿಗೆಗಳು ನಡೆದಿವೆ ಎಂದು ಹೇಳಲಾಗಿದೆ. ಈಗ ಎಲ್ಲಾ ರಾಜ್ಯಗಳಲ್ಲೂ ಸೋಂಕು ಹಾಗೂ ಸಾವಿನ ಸಂಖ್ಯೆ ನಿಯಂತ್ರಣಕ್ಕೆ ಬರುತ್ತಿದೆ ಎಂದು ಅಂಕಿಅಂಶಗಳು ಹೇಳುತ್ತವೆ.

ಸತ್ತವರ ಸಂಖ್ಯೆಯನ್ನು ತಡವಾಗಿ ವರದಿ ಮಾಡುವುದು ಎಲ್ಲಾ ರಾಜ್ಯಗಳಲ್ಲೂ ನಡೆದಿದೆ. ಕರ್ನಾಟಕದಲ್ಲಿ ಮಾರ್ಚ್ ತಿಂಗಳಲ್ಲಿ ಸಂಭವಿಸಿರುವ ಕೆಲವು ಸಾವುಗಳನ್ನು ಈಗ ದಾಖಲಿಸಲಾಗುತ್ತಿದೆ ಎಂದು ಹೇಳಲಾಗಿದೆ. ಹೀಗೆ ಬಾಕಿ ಪ್ರಕರಣಗಳ ವಿವರಗಳೆಲ್ಲವೂ ಕಡತವನ್ನು ಸೇರಿದ ನಂತರ ಪ್ರಕರಣಗಳು ಹಾಗೂ ಸಾವಿನ ಸಂಖ್ಯೆಯು ಗಣನೀಯವಾಗಿ ಕಡಿಮೆಯಾಗುವ ನಿರೀಕ್ಷೆ ಇದೆ.

ಸಾವಿನ ಸಂಖ್ಯೆಯಲ್ಲಿ ಏರಿಳಿತ



- ಕೋವಿಡ್‌ನಿಂದ ಮೃತರಾದವರ ಸಂಖ್ಯೆ ಮೇ 23ರಂದು 3 ಲಕ್ಷದ ಗಡಿ ದಾಟಿತು
- ಮೊದಲ ಅಲೆಗೆ ಹೋಲಿಸಿದರೆ ಎರಡನೇ ಅಲೆಯಲ್ಲಿ ಸಾವಿನ ಪ್ರಮಾಣ ಅಧಿಕವಾಗಿದೆ
- ರಾಷ್ಟ್ರೀಯ ಮಟ್ಟದಲ್ಲಿ ಮರಣ ಪ್ರಮಾಣ ಶೇ 1.14ಕ್ಕೆ ಏರಿಕೆಯಾಗಿದೆ

ಜೂನ್‌ನಲ್ಲಿ ನಿಯಂತ್ರಣಕ್ಕೆ

ಮೇ ತಿಂಗಳ ಕೊನೆಯ ಹೊತ್ತಿಗೆ ಪ್ರತಿ ದಿನ ವರದಿಯಾಗುವ ಪ್ರಕರಣಗಳ ಸಂಖ್ಯೆಯು 1.50 ಲಕ್ಷಕ್ಕೆ ಕುಸಿಯಲಿದೆ. ಜೂನ್ ತಿಂಗಳ ಕೊನೆಗೆ ದಿನದ ಹೊಸ ಪ್ರಕರಣಗಳು 20 ಸಾವಿರಕ್ಕೆ ಇಳಿಯಲಿವೆ. ಜುಲೈ ಹೊತ್ತಿಗೆ ಸಾಂಕ್ರಾಮಿಕವು ಸಂಪೂರ್ಣ ನಿಯಂತ್ರಣಕ್ಕೆ ಬರಲಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ವಿಜ್ಞಾನಿಗಳು ಅಭಿವೃದ್ಧಿಪಡಿಸಿರುವ 'ಸೂತ್ರ' ಗಣಿತಶಾಸ್ತ್ರೀಯ ಮಾದರಿಯನ್ನು ಬಳಸಿಕೊಂಡು ಈ ಲೆಕ್ಕ ಹಾಕಲಾಗಿದೆ. ಸೋಂಕಿಗೆ ಒಳಗಾಗುವ ಅಪಾಯ ಇರುವವರ ಪ್ರಮಾಣ, ಪರೀಕ್ಷೆಗೆ ಒಳಪಟ್ಟು ಕೋವಿಡ್ ದೃಢಪಟ್ಟವರ ಪ್ರಮಾಣ, ಪತ್ತೆಯಾಗದ ಪ್ರಕರಣಗಳ ಪ್ರಮಾಣಗಳನ್ನು ಗಣನೆಗೆ ತೆಗೆದುಕೊಂಡು ಈ ಸೂತ್ರವು ಸಾಂಕ್ರಾಮಿಕದ ಹರಡುವಿಕೆಯನ್ನು ಲೆಕ್ಕ ಹಾಕುತ್ತದೆ.

ಉತ್ತರ ಮತ್ತು ಮಧ್ಯ ಭಾರತದ ಹಲವು ರಾಜ್ಯಗಳು ಎರಡನೇ ಅಲೆಯ ಶಿಖರಾವಸ್ಥೆಯನ್ನು ದಾಟಿ ಹೋಗಿವೆ. ದಕ್ಷಿಣ ಭಾರತದ ಹಲವು ರಾಜ್ಯಗಳಲ್ಲಿ ಕೂಡ ಗರಿಷ್ಠ ಹರಡುವಿಕೆಯ ಘಟ್ಟವು ಮುಗಿದಿದೆ. ಅತಿ ಹೆಚ್ಚು ಪ್ರಕರಣಗಳು ದಾಖಲಾಗುತ್ತಿದ್ದ ಮಹಾರಾಷ್ಟ್ರ, ದೆಹಲಿ, ಉತ್ತರ ಪ್ರದೇಶ, ಕರ್ನಾಟಕ, ಕೇರಳ, ರಾಜಸ್ಥಾನ, ಗುಜರಾತ್, ಹರಿಯಾಣ ಇದರಲ್ಲಿ ಸೇರಿವೆ. ದಕ್ಷಿಣದಲ್ಲಿ ತಮಿಳುನಾಡು ಮತ್ತು ಪುದುಚೇರಿಯಲ್ಲಿ ಈ ತಿಂಗಳ ಕೊನೆಯ ಹೊತ್ತಿಗೆ ಗರಿಷ್ಠ ಪ್ರಕರಣಗಳು ಕಾಣಿಸಿಕೊಳ್ಳಬಹುದು.

ನಗರಗಳು ಅಲ್ಪ ನಿರಾಳ

ಕೋವಿಡ್ ಎರಡನೇ ಅಲೆಯು ದೇಶದ ಪ್ರಮುಖ ನಗರಗಳನ್ನು ಹೈರಾಣಾಗಿಸಿತ್ತು. ಅಂದಾಜಿಸಿದ್ದಕ್ಕಿಂತ ಹೆಚ್ಚಿನ ವೇಗದಲ್ಲಿ ಪ್ರಸರಣ ಕಂಡದ್ದು ಹಾಗೂ ಆಮ್ಲಜನಕದ ಕೊರತೆ ತೀವ್ರಗೊಂಡದ್ದು ಸಾವಿರಾರು ಮಂದಿಯ ಸಾವಿಗೆ ಕಾರಣವಾಯಿತು. ಇದರಿಂದಾಗಿ ಕೆಲವು ರಾಜ್ಯ ಸರ್ಕಾರಗಳು ಒಲ್ಲದ ಮನಸ್ಸಿನಿಂದ ಪ್ರಮುಖ ನಗರಗಳಲ್ಲಿ ಲಾಕ್‌ಡೌನ್ ಹಾಗೂ ಕಠಿಣ ನಿರ್ಬಂಧಗಳನ್ನು ಜಾರಿ ಮಾಡುವಂತಾಯಿತು. ಆದರೆ, ಈಗ ಬಹುತೇಕ ಎಲ್ಲಾ ನಗರಗಳಲ್ಲಿ ಕೋವಿಡ್ ನಿಯಂತ್ರಣಕ್ಕೆ ಬಂದಿದ್ದು, ಕೆಲವು ನಗರಗಳಲ್ಲಿ ಮೂರನೇ ಅಲೆ ಎದುರಿಸಲು ಸಿದ್ಧತೆಗಳನ್ನು ಆರಂಭಿಸಲಾಗಿದೆ.

- ದೇಶದ ರಾಜಧಾನಿ ದೆಹಲಿಯಲ್ಲಿ ಸೋಮವಾರ 1,550 ಪ್ರಕರಣಗಳು ದಾಖಲಾಗಿವೆ. ಮಾರ್ಚ್ 30ರ ನಂತರ ದಾಖಲಾದ ಕನಿಷ್ಠ ಪ್ರಮಾಣ ಇದಾಗಿದೆ. ಹಿಂದಿನ 24 ಗಂಟೆಗಳಲ್ಲಿ ದೆಹಲಿಯಲ್ಲಿ ಕೋವಿಡ್‌ನಿಂದ ಸತ್ತವರ ಸಂಖ್ಯೆಯು 207ಕ್ಕೆ ಇಳಿದಿದೆ. ಜೂನ್ 1ರಿಂದ ನಗರದಲ್ಲಿ ಅನ್‌ಲಾಕ್ ಪ್ರಕ್ರಿಯೆ ಆರಂಭವಾಗುವ ಸೂಚನೆ ಇದೆ
- ಕೋವಿಡ್ ಎರಡನೇ ಅಲೆಯ ನಿರ್ವಹಣೆಯಲ್ಲಿ ಮುಂಬೈ ನಗರವು ದೇಶಕ್ಕೇ ಮಾದರಿಯಾಗಿತ್ತು. ಅಲ್ಲಿಯೂ ಸೋಂಕು ಹಾಗೂ ಸಾವಿನ ಸಂಖ್ಯೆ ಇಳಿಮುಖವಾಗುತ್ತಿದೆ. ಹಿಂದಿನ 24 ಗಂಟೆಗಳಲ್ಲಿ ಇಲ್ಲಿ ಹೊಸ ಸೋಂಕಿತರ ಪ್ರಮಾಣವು 1,049 ಇದ್ದರೆ ಸತ್ತವರ ಸಂಖ್ಯೆ 48 ಮಾತ್ರ
- ಕೋಲ್ಕತ್ತದಲ್ಲಿ ಹೊಸ ಸೋಂಕಿತರ ಸಂಖ್ಯೆ ಇತರ ನಗರಗಳಿಗೆ ಹೋಲಿಸಿದರೆ ಸ್ವಲ್ಪ ಹೆಚ್ಚಿದೆ. ಆದರೆ ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಕಳೆದ 24 ಗಂಟೆಗಳಲ್ಲಿ ಹೊಸ ಸೋಂಕಿತರ ಸಂಖ್ಯೆಯು 3,121 ಹಾಗೂ ಸಾವಿನ ಸಂಖ್ಯೆ 35 ಇತ್ತು
- ಚೆನ್ನೈಯಲ್ಲಿ ಹೊಸ ಸೋಂಕಿತರು ಹಾಗೂ ಸತ್ತವರ ಸಂಖ್ಯೆಯು ಕ್ರಮವಾಗಿ 5,047 ಮತ್ತು 81 ಇದೆ. ಹಿಂದಿನ ಕೆಲವು ದಿನಗಳಿಗೆ ಹೋಲಿಸಿದರೆ ಇಲ್ಲಿಯೂ ಪರಿಸ್ಥಿತಿ ನಿಯಂತ್ರಣಕ್ಕೆ ಬರುವುದು ಕಾಣಿಸುತ್ತಿದೆ

ಗುಣಮುಖರ ಸಂಖ್ಯೆ ಏರಿಕೆ



ಆಧಾರ:covid19india.org

ಪ್ರಜಾವಾಣಿ ಗ್ರಾಫಿಕ್ಸ್

'ಗ್ರಾಮಗಳಲ್ಲೂ ಕೋವಿಡ್ ಗ್ರಾಹಕರ ಆತ್ಮವಿಶ್ವಾಸಕ್ಕೇ ಪೆಟ್ಟು'

• ಅನ್ನಪೂರ್ಣಾ ಸಿಂಗ್

ಪ್ರಜಾವಾಣಿ ಸಂದರ್ಶನ

ಅದಿತಿ ನಾಯರ್

ಕೋವಿಡ್ ಸಾಂಕ್ರಾಮಿಕದ ಎರಡನೆಯ ಅಲೆಯು ಗ್ರಾಹಕರ ಆತ್ಮವಿಶ್ವಾಸದ ಮೇಲೆ ಬಹುಕಾಲ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು ಐಸಿಆರ್‌ಎ ರೇಟಿಂಗ್ಸ್ ಸಂಸ್ಥೆಯ ಪ್ರಧಾನ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ. ಅವರ ಜೊತೆಗಿನ ಮಾತುಕತೆಯ ಆಯ್ದಭಾಗ ಇಲ್ಲಿದೆ.

• ವೈರಾಣು ಈಗ ಗ್ರಾಮೀಣ ಭಾರತವನ್ನೂ ಪ್ರವೇಶಿಸಿದೆ. ಎರಡನೆಯ ಅಲೆಯ ನಂತರದಲ್ಲಿ ಆರ್ಥಿಕ ಪುನಶ್ಚೇತನ ಹೇಗಿರಲಿದೆ?

ಎರಡನೆಯ ಅಲೆಯ ಸಂದರ್ಭದಲ್ಲಿ ಪ್ರತಿದಿನ ವರದಿಯಾಗುತ್ತಿರುವ ಕೋವಿಡ್ ಪ್ರಕರಣಗಳ ಸಂಖ್ಯೆ ತೀವ್ರವಾಗಿ ಹೆಚ್ಚಿದೆ. ಗ್ರಾಮೀಣ ಪ್ರದೇಶಗಳಿಗೂ ಈ ಮಾತು ಅನ್ವಯ. ಇದು ಗ್ರಾಹಕರ ಆತ್ಮವಿಶ್ವಾಸದ ಮೇಲೆ ಬಹುಕಾಲ ಕೆಟ್ಟ ಪರಿಣಾಮ ಬೀರಲಿದೆ. ಕೋವಿಡ್ ಚಿಕಿತ್ಸೆಗೆ ಮಾಡುವ ಭಾರಿ ವೆಚ್ಚ ಹಾಗೂ ಇಂಧನ ದರ ದುಬಾರಿಯಾಗಿರುವ ಪರಿಣಾಮವಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಗ್ರಾಹಕರು ಮಾಡಬಹುದಾದ ಇತರ ವೆಚ್ಚಗಳು ಗಣನೀಯವಾಗಿ ತಗ್ಗಬಹುದು. ಹಿಂದಿನ ಲಾಕ್‌ಡೌನ್ ವೇಳೆ ಖರೀದಿಸಲು ಆಗದಿದ್ದಂತಹ ಗೃಹೋಪಯೋಗಿ ವಸ್ತುಗಳನ್ನು ಗ್ರಾಹಕರು 2020ರ ಹಬ್ಬಗಳ ಸಂದರ್ಭದಿಂದ ಖರೀದಿಸಲಾರಂಭಿಸಿದರು. ಇಂತಹ ಖರೀದಿಗಳು ಮುಂದೆ ಕಡಿಮೆ ಆಗಬಹುದು. ತೀರಾ ಅಗತ್ಯವಲ್ಲದ ವಸ್ತುಗಳ ಖರೀದಿಯು ಸದ್ಯದ ಸಂದರ್ಭದಲ್ಲಿ ಸೀಮಿತ ಆಗಬಹುದು.

• ಜಿಡಿಪಿ, ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ), ವಿದೇಶಗಳ ಜೊತೆಗಿನ ವಹಿವಾಟು ಅಂಕಿ-ಅಂಶಗಳೆಲ್ಲ ಮುಂದಿನ ತಿಂಗಳುಗಳಲ್ಲಿ ಉತ್ತಮವಾಗಿ ಕಾಣಿಸಬಹುದು. ಏಕೆಂದರೆ, ಹಿಂದಿನ ವರ್ಷದ ಇದೇ ಅವಧಿಯಲ್ಲಿ ಈ ಅಂಕಿ-ಅಂಶಗಳು ತಳಮಟ್ಟದಲ್ಲಿದ್ದವು. ಈಗ ಈ ಅಂಕಿ-ಅಂಶಗಳು ಅರ್ಥಶಾಸ್ತ್ರಜ್ಞರು ಮತ್ತು ನೀತಿ ನಿರೂಪಕರ ಪಾಲಿಗೆ ಹೇಗೆ ಧ್ವನಿಸುತ್ತವೆ?

ಆಟೊಮೊಬೈಲ್ ಉತ್ಪಾದನೆ, ವಾಹನಗಳ ನೋಂದಣಿ, ತೈಲ ಹೊರತಾದ ಇತರ ಉತ್ಪನ್ನಗಳ ರಫ್ತು, ಜಿಎಸ್‌ಟಿ ಇ-ವೇ ಬಿಲ್ ಇತ್ಯಾದಿಗಳಿಗೆ ಸಂಬಂಧಿಸಿದ ಅಂಕಿ-ಅಂಶಗಳು ಕಳೆದ ವರ್ಷದ ಏಪ್ರಿಲ್‌ಗೆ ಹೋಲಿಸಿದರೆ ಈ ವರ್ಷದ ಏಪ್ರಿಲ್‌ನಲ್ಲಿ ಭಾರಿ ಏರಿಕೆ ದಾಖಲಿಸಿವೆ. ಕಳೆದ ವರ್ಷ ಏಪ್ರಿಲ್‌ನಲ್ಲಿ ಲಾಕ್‌ಡೌನ್ ಕಾರಣದಿಂದಾಗಿ ಇವೆಲ್ಲ ಕಡಿಮೆ ಮಟ್ಟದಲ್ಲಿದ್ದವು. ಹಾಗಾಗಿ, ಕಳೆದ ವರ್ಷದ ಏಪ್ರಿಲ್‌ಗೆ ಹೋಲಿಸಿದಾಗ ಈ ವರ್ಷದ ಏಪ್ರಿಲ್‌ನಲ್ಲಿ ಐಐಪಿ ಸೂಚ್ಯಂಕವು ಶೇಕಡ 140ರಿಂದ ಶೇ 150ರಷ್ಟು ಬೆಳವಣಿಗೆ ಕಾಣಬಹುದು. ಆದರೆ ಈ ಬೆಳವಣಿಗೆಗೆ ಯಾವ ಅರ್ಥವೂ ಇಲ್ಲ.

ನಾವು 2021ರ ಏಪ್ರಿಲ್ ತಿಂಗಳ ಆರ್ಥಿಕ ಸೂಚಕಗಳನ್ನು ಕೋವಿಡ್ ಪೂರ್ವದ ಮಟ್ಟದ (2019ರ ಏಪ್ರಿಲ್) ಜೊತೆ ಹೋಲಿಸಿದ್ದೇವೆ. ದೇಶಿ ಪ್ರಯಾಣಿಕ ವಿಮಾನ ಸಂಚಾರ, ವಾಹನ ನೋಂದಣಿ, ವಾಹನ ಉತ್ಪಾದನೆ, ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಸೇರಿದಂತೆ ಒಟ್ಟು 13 ಸೂಚಕಗಳು 2019ರ ಏಪ್ರಿಲ್‌ಗಿಂತ ಈ ವರ್ಷದ ಏಪ್ರಿಲ್‌ನಲ್ಲಿ ಕಡಿಮೆ ಪ್ರಮಾಣದಲ್ಲಿವೆ. ವಿದ್ಯುತ್ ಉತ್ಪಾದನೆ, ರೈಲ್ವೆ ಸರಕು ಸಾಗಣೆ, ಬಂದರುಗಳ ಮೂಲಕ ಸರಕು ಸಾಗಣೆ, ಜಿಎಸ್‌ಟಿ ಇ-ವೇ ಬಿಲ್ ಸೃಷ್ಟಿ ಇವು ಈ ವರ್ಷದ ಏಪ್ರಿಲ್‌ನಲ್ಲಿ ಹೆಚ್ಚಾಗಿವೆ.

ಕೆಲವು ಸೂಚಕಗಳು ಈ ಬಾರಿಯ ಏಪ್ರಿಲ್‌ನಲ್ಲಿಯೂ ಇಳಿಕೆಯ ಹಾದಿಯಲ್ಲಿವೆ. ಇದು ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದು ಹಾಗೂ ದೇಶದ ವಿವಿಧ ಭಾಗಗಳಲ್ಲಿ ನಿರ್ಬಂಧಗಳನ್ನು ಜಾರಿಗೊಳಿಸಿದ್ದರ ಪ್ರತಿಫಲನದಂತೆ ಇದೆ. ಈ ಸ್ಥಿತಿಯು ಮೇ ತಿಂಗಳಲ್ಲೂ ಮುಂದುವರಿದಿದೆ.

• ಹೆಚ್ಚಿನ ರಾಜ್ಯಗಳು ಲಾಕ್‌ಡೌನ್ ಜಾರಿಗೊಳಿಸಿವೆ. ಇದು ಆರ್ಥಿಕ ಪುನಶ್ಚೇತನದ ಗತಿಯ ಮೇಲೆ ಪರಿಣಾಮ ಬೀರಲಿದೆಯೇ? ಆರ್ಥಿಕ ಚಟುವಟಿಕೆಗಳು ಮಾಮೂಲಿನಂತೆ ಯಾವಾಗ ಆಗಬಹುದು?

2020ರ ಏಪ್ರಿಲ್-ಮೇ ತಿಂಗಳಲ್ಲಿ ಜಾರಿಯಲ್ಲಿದ್ದ ರಾಷ್ಟ್ರವ್ಯಾಪಿ ಲಾಕ್‌ಡೌನ್‌ಗೆ ಹೋಲಿಸಿದರೆ ಈ ಬಾರಿಯ ಲಾಕ್‌ಡೌನ್ ನಿರ್ಬಂಧಗಳು ಅಷ್ಟೊಂದು ಕಠಿಣವಾಗಿಲ್ಲ. ಸ್ಥಳೀಯ ಲಾಕ್‌ಡೌನ್‌ಗಳು ಈಗ ವ್ಯಾಪಕವಾಗಿ ಜಾರಿಗೆ ಬಂದಿವೆ. ಹಾಲಿ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ಶೇ 27.5ರಷ್ಟು ಇರಲಿದೆ ಎಂದು ಮೊದಲು ಅಂದಾಜು ಮಾಡಿದ್ದೆವು. ಈಗ ಅದನ್ನು ಶೇ 15ರಿಂದ ಶೇ 20ಕ್ಕೆ ತಗ್ಗಿಸಿದ್ದೇವೆ. ಹಾಲಿ ಆರ್ಥಿಕ ವರ್ಷದ ದ್ವಿತೀಯಾರ್ಧದಲ್ಲಿ ಪರಿಸ್ಥಿತಿ ಸಹಜವಾಗುವತ್ತ ಸಾಗಬಹುದು ಎಂಬುದು ನಮ್ಮ ನಂಬಿಕೆ. ಆದರೆ, ಇದು ರಾಜ್ಯಗಳಲ್ಲಿ ಕೋವಿಡ್ ಲಸಿಕೆ ಹಾಕುವುದರ ಮೇಲೆ ಅವಲಂಬಿತವಾಗಿದೆ.

• ಲಾಕ್‌ಡೌನ್ ಹಾಗೂ ಬೇಡಿಕೆ ಕುಸಿತದ ಕಾರಣದಿಂದ ಪರೋಕ್ಷ ತೆರಿಗೆ ಮೂಲಕ ಬರುವ ಆದಾಯವು ಮೇ-ಜೂನ್ ಅವಧಿಯಲ್ಲಿ ತಗ್ಗಬಹುದು. ನೇರ ತೆರಿಗೆಯ ಸಂಗ್ರಹವೂ ಕಡಿಮೆ ಆಗಬಹುದೇ?

ಮೇ-ಜೂನ್ ಅವಧಿಯಲ್ಲಿ ಪರೋಕ್ಷ ತೆರಿಗೆ ಸಂಗ್ರಹದ ಮೇಲೆ ಕೆಟ್ಟ ಪರಿಣಾಮ ಆಗುವ ನಿರೀಕ್ಷೆ ಇದೆ. ತೀರಾ ಅವಶ್ಯಕವಲ್ಲದ ವಸ್ತುಗಳ ಖರೀದಿಯ ಮೇಲೆ ಲಾಕ್‌ಡೌನ್ ನಿರ್ಬಂಧಗಳು ಪರಿಣಾಮ ಉಂಟುಮಾಡಲಿವೆ. ಬೇಡಿಕೆ ತಗ್ಗಿರುವ ಸಂದರ್ಭದಲ್ಲಿ ಕೆಲವು ವಸ್ತುಗಳ ಬೆಲೆ ಭಾರಿ ಮಟ್ಟದಲ್ಲಿ ಏರಿಕೆ ಕಂಡಿರುವುದು ಹಲವು ವಲಯಗಳ ಕಂಪನಿಗಳ ಲಾಭವನ್ನು ಕಡಿಮೆ ಮಾಡಬಹುದು. ಇದರಿಂದಾಗಿ ನೇರ ತೆರಿಗೆ ಸಂಗ್ರಹದಲ್ಲಿ ದೊಡ್ಡ ಮಟ್ಟದ ಹೆಚ್ಚಳ ಸಾಧ್ಯವಾಗುವುದಿಲ್ಲ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ಅಸ್ಸಾಂನಲ್ಲಿ ಕಠಿಣ ಲಾಕ್‌ಡೌನ್ ಹೇರುವ ಭರದಲ್ಲಿ ಪೊಲೀಸರು ತರಕಾರಿ ವ್ಯಾಪಾರಿಗಳ ಮೇಲೆ ಹಿಂಸೆ ಎಸಗಿದ್ದಾರೆ ಎಂಬುದನ್ನು ಬಿಂಬಿಸುವ ಚಿತ್ರ ವೈರಲ್ ಆಗಿದೆ. ಪೊಲೀಸರ ಈ ವರ್ತನೆಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಖಂಡನೆ ವ್ಯಕ್ತವಾಗಿದೆ. 'ಪೊಲೀಸರಿಗೆ ರೈತರು ಬೆಳೆದ ಬೆಳೆಗಳ ಬೆಲೆ ತಿಳಿದಿಲ್ಲ. ಅವರು ಖಾಕಿ ಕಳಚಿಟ್ಟು ರೈತರ ರೀತಿ ಹೊಲಕ್ಕೆ ಇಳಿದು ದುಡಿದರೆ ಗೊತ್ತಾಗುತ್ತದೆ' ಎಂದು ಟ್ವಿಟರ್ ಬಳಕೆದಾರರೊಬ್ಬರು ಬರೆದಿದ್ದಾರೆ.

ವೈರಲ್ ಆಗಿರುವ ಚಿತ್ರವನ್ನು ರಿವರ್ಸ್ ಇಮೇಜ್ ತಂತ್ರದ ಮೂಲಕ ಪರಿಶೀಲಿಸಿದಾಗ, ಅದು 2020ನೇ ಇಸ್ವಿಯಲ್ಲಿ ಸೆರೆಹಿಡಿದ ಚಿತ್ರ ಎಂಬುದು ಕಂಡುಬಂದಿದೆ. ಈ ಚಿತ್ರವು ಅಸ್ಸಾಂಗೆ ಸಂಬಂಧಿಸಿಲ್ಲ. ಇದು ಪಶ್ಚಿಮ ಬಂಗಾಳದ ಚಿತ್ರ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ಖಚಿತಪಡಿಸಿದೆ. ಕೃಷಿ ಕಾಯ್ದೆಗಳನ್ನು ಖಂಡಿಸಿ ಪ್ರತಿಪಕ್ಷಗಳು ಹಾಗೂ ರೈತರು ನಡೆಸಿದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ್ದಾಗ ಈ ಚಿತ್ರ ತೆಗೆಯಲಾಗಿತ್ತು ಎಂದು ಸ್ಪಷ್ಟಪಡಿಸಿದೆ.

ಗುಂಡಣ್ಣ



ದಿನ ಭವಿಷ್ಯ

ಬುಧವಾರ ಮೇ 26, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ರೋಹಿಣಿ ಪೂರ್ಣಿಮಾ ಗಂ. 27-56 (ಸಾ. 5-11) ಬುಧವಾರ ನಿತ್ಯ ನಕ್ಷತ್ರ ಅನೂರಾಧ ಗಂ. 51-12 (ರಾ. 2-29) ಶಿವ ನಾಮ ಯೋಗ ಗಂ 45-22 ಭದ್ರೆ ಕರಣ ಗಂ. 1-0 ಉಪರಿ ಭವ ಕರಣ ಗಂ. 26-56 ವಿಷ ಗಂ. 4-48 ಅಮೃತ ಗಂ. 27-9 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 5-56 ಸೂರ್ಯಾಸ್ತ: 6-37 ಅದೃಷ್ಟ ಸಂಖ್ಯೆ 8

ಮೇಷ: ಭಾವನಾತ್ಮಕ ಸಂಬಂಧಗಳಿಗೆ ಬೆಲೆ ಕೊಟ್ಟು ಸಮಾಜದಲ್ಲಿ ಉನ್ನತಿಯನ್ನು ಕಾಣಲಿದ್ದೀರಿ. ಸಂಬಂಧಗಳನ್ನು ಗಟ್ಟಿ ಹಾಗೂ ಸ್ಥಿರಗೊಳಿಸಿಕೊಳ್ಳುವಿರಿ. ಬಂಧು ಬಾಂಧವರೊಂದಿಗೆ ದಿನವಿಡೀ ಸಂಭ್ರಮಿಸುವ ಸಾಧ್ಯತೆ.

ವೃಷಭ: ಕಲಾವಿದರು, ಸಾಹಿತಿಗಳು ಹಾಗೂ ಬರಹಗಾರರು ಹೆಚ್ಚಿನ ಮನ್ನಣೆ ಪಡೆಯಲಿದ್ದೀರಿ. ಮಹಿಳಾ ಉದ್ಯಮಿಗಳು ಯಶಸ್ಸನ್ನು ಕಾಣುವ ದಿನವಾಗಲಿದೆ. ವಸ್ತ್ರಾಭರಣಗಳನ್ನು ಖರೀದಿಸುವ ಸಾಧ್ಯತೆಯೂ ಕಂಡುಬರುತ್ತಿದೆ.

ಮಿಥುನ: ಚಿಂತನ-ಮಂಥನ ನಡೆಸಿ ಹೊಸ ಹೆಜ್ಜೆಯನ್ನು ಇಡಲಿದ್ದೀರಿ. ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಪ್ರಾಪ್ತಿಯಾಗುವ ಸಾಧ್ಯತೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿಶೇಷ ಖರ್ಚು.

ಕರ್ಕಾಟಕ: ದುಡುಕಿನ ನಿರ್ಧಾರದಿಂದಾಗಿ ಅಪಾಯವನ್ನು ತಂದುಕೊಳ್ಳುವ ಸಾಧ್ಯತೆ. ವಾಹನ ಚಲಾಯಿಸುವಾಗ ಅತ್ಯಂತ ಜಾಗರೂಕರಾಗಿರುವುದು ಉತ್ತಮ. ಸ್ನೇಹಿತರ ಸಕಾಲಿಕ ನೆರವನ್ನು ಪಡೆದು ಕಾರ್ಯಸಾಧನೆ.

ಸಿಂಹ: ಸಂದರ್ಭಾನುಸಾರವಾಗಿ ಬದಲಾವಣೆಯೊಂದಿಗೆ ಕೆಲಸ-ಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ. ಜನನಾಯಕರಿಗೆ ಒಂದು ರೀತಿಯ ಮುಜುಗರ ಸಾಧ್ಯತೆ. ಮಹಿಳೆಯರು ಅಗ್ನಿಯ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಎಚ್ಚರಿಕೆ ವಹಿಸಿ.

ಕನ್ಯಾ: ಜಾಣತನದಿಂದ ಕೆಲಸ ಮಾಡಿಸಿಕೊಳ್ಳುವಲ್ಲಿ ಯಶಸ್ಸು. ಹಿರಿಯರ ಉತ್ತಮವಾದ ಸಲಹೆ ಸಹಕಾರಗಳು ದೊರಕುವುದು. ಸಂತಾನಾಪೇಕ್ಷಿಗಳಿಗೆ ಸಂತಾನ ಪ್ರಾಪ್ತವಾಗುವ ಲಕ್ಷಣಗಳು ಕಂಡುಬರುತ್ತಿದೆ.

ತುಲಾ: ಅನೇಕ ಸಮಯದಿಂದ ನಿಮ್ಮನ್ನು ಕಾಡುತ್ತಿರುವ ಚಿಂತೆಗಳು ಪರಿಹಾರವಾಗಲಿವೆ. ನಿಮ್ಮ ಜೀವನದ ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ. ಮನೆಯವರ ಆರೋಗ್ಯದ ಬಗ್ಗೆ ಗಮನ ಹರಿಸಿ.

ವೃಶ್ಚಿಕ: ನೀವು ನೀಡಿದ ಭರವಸೆಯನ್ನು ಉಳಿಸಿಕೊಳ್ಳುವ ಸಲುವಾಗಿ ಹೋರಾಡಬೇಕಾಗುವುದು. ವ್ಯವಹಾರದಲ್ಲಿ ಮಿಶ್ರಫಲ. ಕುಟುಂಬ ಸಮೇತ ಮಂಗಳಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆಯೂ ಕಂಡುಬರುತ್ತಿದೆ.

ಧನು: ವಿನಾಕಾರಣ ಉದ್ವೇಗಕ್ಕೆ ಒಳಗಾಗುವ ಸಾಧ್ಯತೆ. ಸಮಾಧಾನದಿಂದ ಎಲ್ಲವನ್ನೂ ಪರಿಹರಿಸಿಕೊಳ್ಳುವುದು ಉತ್ತಮ. ಸಂಗಾತಿಯ ಸಕಾಲಿಕ ವಿಶ್ವಾಸದ ನುಡಿಗಳಿಂದಾಗಿ ನೆಮ್ಮದಿಯನ್ನು ಹೊಂದುವಿರಿ.

ಮಕರ: ಹೊಸ ಷರತ್ತಿನೊಂದಿಗೆ ಬೇರೊಂದು ಉದ್ಯಮದಲ್ಲಿ ತೊಡಗಿಕೊಂಡು ಯಶಸ್ಸು. ಬಂಧು ಬಾಂಧವರೊಂದಿಗೆ ಸಂತೃಪ್ತಿಯಿಂದ ಸಂತಸವನ್ನು ಹಂಚಿಕೊಳ್ಳುವಿರಿ. ವಿಪರೀತವಾದ ಖರ್ಚನ್ನು ತಡೆಗಟ್ಟುವುದು ಉತ್ತಮ.

ಕುಂಭ: ನಿಮ್ಮ ಕಾರ್ಯ ನಿಷ್ಠೆಯಿಂದಾಗಿ ನೀವು ಕೈಗೊಂಡ ಕಾರ್ಯಗಳೆಲ್ಲವೂ ಸಫಲವಾಗುವವು. ಸರ್ಕಾರಿ ಕೆಲಸಗಳು ನಿಮ್ಮ ನಿರೀಕ್ಷೆಗೂ ಮೀರಿದ ರೀತಿಯಲ್ಲಿ ಕೂಡಿಬರುವವು. ವಿದ್ಯಾರ್ಥಿಗಳಿಗೆ ಭವಿಷ್ಯವನ್ನು ರೂಪಿಸಿಕೊಳ್ಳುವ ಧಾವಂತ.

ಮೀನ: ವ್ಯವಹಾರ ವಹಿವಾಟಿನಲ್ಲಿ ಉತ್ತಮವಾದ ಅನುಕೂಲಗಳು ದೊರೆತು ಯಶಸ್ಸು. ಅನಿವಾರ್ಯ ಪ್ರವಾಸ ಕೈಗೊಳ್ಳುವ ಸಾಧ್ಯತೆ. ಹಿರಿಯರ ಸಲಹೆ ಸೂಚನೆಗಳಿಂದಾಗಿ ಎಲ್ಲ ರೀತಿಯ ಕ್ಲೇಶಗಳು ದೂರವಾಗಿ ನೆಮ್ಮದಿ.

ನಿಮ್ಮ ಜನ್ಮದಿನ 26-ಮೇ ಈ ದಿನ ಅತ್ಯಂತ ಶುಭಕರ. ಜನಸಾಮಾನ್ಯರೊಂದಿಗೆ ಬೆರೆಯುವುದು ನಿಮ್ಮ ಜಾಯಮಾನ. ಇದು ಕೆಲವೊಮ್ಮೆ ನಿಮ್ಮ ದೌರ್ಬಲ್ಯವಾಗಿಯೂ ಕಾಣಬಹುದು. ನಿಮ್ಮ ಪರೋಪಕಾರ ಮನೋಭಾವವನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಯೂ ಇದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ವ್ಯಾಮೋಹ

ತನುಭವವ್ಯಾಮೋಹ ಮುಸುಕಿತಾ ವ್ಯಾಸನಂ |
ಜನಿಪುದದು ಪ್ರಕೃತಿತಂತ್ರದೆ ಹೃದಯತಲದೊಳ್ ||
ಕ್ಷಣಮಾತ್ರಮಾತ್ರಮಾನುಮದು ಕಣ್ಣೀರ ಬರಿಸುವುದು ||
ಗಣಿಸಬೇಡದನು ನೀಂ - ಮಂಕುತಿಮ್ಮ || 421 ||

ಪದ-ಅರ್ಥ: ತನುಭವವ್ಯಾಮೋಹ = ಮಗ ಮೇಲಿನ ಮೋಹ, ಕ್ಷಣಮಾತ್ರಮಾನುಮದು = ಕ್ಷಣಮಾತ್ರ-ಮಾನುಂ(ಒಂದು ಕ್ಷಣ ಮಾತ್ರ) + ಅದು, ಗಣಿಸಬೇಡದನು = ಗಣಿಸಬೇಡ(ಲೆಕ್ಕಿಸಬೇಡ) + ಅದನು.

ವಾಚ್ಯಾರ್ಥ: ಪರಮಜ್ಞಾನಿ ವ್ಯಾಸರನ್ನು ಮಗನ ವ್ಯಾಮೋಹ ಮುಸುಕಿತು. ಈ ವ್ಯಾಮೋಹ ಪ್ರಕೃತಿಯಿಂದ ಸಹಜವಾಗಿ ನಮ್ಮ ಹೃದಯದಾಳದಲ್ಲಿ ನೆಲೆಸಿರುತ್ತದೆ. ಅದು ಕ್ಷಣ ಮಾತ್ರವಾದರೂ ಕಣ್ಣೀರನ್ನು ಬರಿಸುತ್ತದೆ. ಅದನ್ನು ಹೆಚ್ಚು ಗಣಿಸಬೇಡ.

ವಿವರಣೆ: ವ್ಯಾಮೋಹವೆಂದರೆ ಅತಿಯಾದ ಮೋಹ. ಮೋಹವನ್ನು ಬಿಡಬೇಕು ಎಂದು ಹೇಳುವುದು ಬಲು ಸುಲಭ. ಆದರೆ ಬಿಡುವುದು ಬಹಳ ಕಷ್ಟ. ಎಂತೆಂತಹ ಮಹಾಜ್ಞಾನಿಗಳನ್ನು ಈ ಮೋಹ ಬಿಡಲಿಲ್ಲ.

ವೇದವ್ಯಾಸರು ಪ್ರಪಂಚ ಕಂಡ ಅತ್ಯಂತ ಶ್ರೇಷ್ಠ ದಾರ್ಶನಿಕರು. ಕಾಡಿನಂತೆ ಹರಡಿದ್ದ ವೇದವನ್ನು ವಿಭಾಸಿದ್ದರಿಂದ ಅವರಿಗೆ ವೇದವ್ಯಾಸರೆಂಬ ಹೆಸರು ಬಂದಿತು. ಪುರಾಣಗಳ ಪ್ರಕಾರ ಅವರು ವಿಷ್ಣುವಿನ ಒಂದು ಅವತಾರ. ಶೃತಿ, ಸ್ಮೃತಿ, ಪುರಾಣಗಳನ್ನು ಕೊಟ್ಟವರು. ಅಂಥ ಮಹಾಜ್ಞಾನಿಗೆ ಒಬ್ಬನೇ ಪುತ್ರ ಶುಕಾಚಾರ್ಯ. ಆತ ಹುಟ್ಟುವಾಗಲೇ ಪರಮಜ್ಞಾನಿಯಾಗಿದ್ದನಂತೆ. ಆತನಿಗೆ ಜ್ಞಾನದ ಒಳನೋಟಗಳು ದೊರಕಿ ವಿರಾಗಿಯಾದ. ಆ ವಿರಾಗದ ಮನೋಧರ್ಮದಲ್ಲಿ ಮನೆಯನ್ನು ತೊರೆದು ಹೊರಟುಹೋದ. ಪ್ರೀತಿಯ ತಂದೆಯಾದ ವೇದವ್ಯಾಸರಿಗೆ ಮನಸ್ಸು ಕಲಕಿ ಹೋಯಿತು, ಪುತ್ರಮೋಹ ಅವರನ್ನು ಹಿಂಡಿಬಿಟ್ಟಿತು. ವ್ಯಾಸರು ಮಗನನ್ನು ಹುಡುಕಿಕೊಂಡು ಹೊರಟು, 'ಮಗನೇ ಶುಕ' ಎಂದು ಕೂಗುತ್ತ ದುಃಖದಿಂದ ಕಾಡೆಲ್ಲ ಅಲೆದರು; ಕಣ್ಣೀರು ಧಾರೆಯಾಯಿತು. ಆಗೊಂದು ಅದ್ಭುತ ನಡೆಯಿತು. ಕಾಡಿನ ಮರಗಿಡಗಳೆಲ್ಲ ಅವರ ಕರೆಯನ್ನು ಕೇಳಿ ತಾವೇ ಮಾರ್ನುಡಿದುವಂತೆ. ಆಗ ವ್ಯಾಸರಿಗೆ ಅರ್ಥವಾಯಿತು. ತನ್ನ ಜ್ಞಾನಿ ಮಗ ನಿಸರ್ಗದ ಒಂದು ಭಾಗವೇ ಆಗಿದ್ದಾನೆ, ಬಯಲಾಗಿದ್ದಾನೆ. ಬಯಲಾದವನಿಗೆ ಮನೆ ಇಲ್ಲ. ಮನೆ ಏಕೆ? ಪ್ರಪಂಚವೇ ಅವನ ಮನೆ. ಅವರ ಮನದ ಮೋಹ ಕರಗಿತು, ಪಿತೃತ್ವ ಸಾರ್ಥಕವಾಯಿತು.

ಅಸಾಮಾನ್ಯ ಜ್ಞಾನಿಗಳಾದ ವೇದವ್ಯಾಸರಿಗೇ ಈ ಮೋಹ ಕಾಡಿದ್ದರೆ ಸಾಮಾನ್ಯರ ಗತಿ ಏನು? ಪ್ರಕೃತಿ ಈ ಮೋಹವನ್ನು ನಮ್ಮ ಹೃದಯದಲ್ಲಿ ನೆಲೆಯಾಗುವಂತೆ ಮಾಡಿದೆ. ಮೋಹ ಸರಿಯಾದ ಪ್ರಮಾಣದಲ್ಲಿದ್ದರೆ ಒಳ್ಳೆಯದು. ಅದು ನಮ್ಮಿಂದ ಕಾರ್ಯಗಳನ್ನು ಮಾಡಿಸುತ್ತದೆ, ಧನಾತ್ಮಕವಾಗಿ ಚಿಂತಿಸುವಂತೆ ಮಾಡುತ್ತದೆ. ಆದರೆ ಈ ಮೋಹ ಹೆಚ್ಚಾದಾಗ ಎಂಥ ಧೃಡಮನಸ್ಸಿನವರ ಕಣ್ಣಲ್ಲೂ ನೀರು ತರಿಸುತ್ತದೆ. ಆದ್ದರಿಂದ ವಿವೇಕಿಗಳಾದವರು ಮೋಹ, ವ್ಯಾಮೋಹವಾಗದಂತೆ ನೋಡಿಕೊಳ್ಳುತ್ತಾರೆ. ಬಂದದ್ದನ್ನು ಸಮಚಿತ್ತತೆಯಿಂದ ಸ್ವೀಕರಿಸುತ್ತಾರೆ.

ಅದಕ್ಕೆ ಕಗ್ಗ ಹೇಳುತ್ತದೆ, 'ಗಣಿಸಬೇಡದನು ನೀಂ' ಎಂದರೆ ಮೋಹವನ್ನು ಅತಿಯಾಗಿಸಿಕೊಳ್ಳಬೇಡ. ಅದು ಪ್ರಕೃತಿಸಹಜವಾದರೂ ವಿವೇಕದಿಂದ ನಿಗ್ರಹಿಸಬೇಕು. ❖

ಪದಬಂಧ 4608

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಇದು ಕನ್ನಡಿಗನ ಯೂನಿವರ್ಸಿಟಿ(6)
4.ತಿರುಪೆ ಬೇಡುವ ವ್ಯಕ್ತಿ(4)
5.ನಾದಿನಿ ಹಿಡಿದಿರುವ ವಾದ್ಯ!(3)
7.ಹೊಗಳಿಕೆ ಅಥವಾ ಸ್ತುತಿ(3)
9.ಇದು ನಿಶ್ಚಯವಾದುದು(3)
12.ಹಡಗನ್ನು ಬೇರೆ ದಿಕ್ಕಿಗೆ ತಿರುಗಿಸುವ ಸಾಧನ(3)
13.ಬಿಸಿಲು ಕುದುರೆ ಇಲ್ಲಿದೆ (4)
15.ಪ್ರಪಂಚದ ನಡವಳಿಕೆಯಿದು(6)

ಮೇಲಿಂದ ಕೆಳಕ್ಕೆ
1.ಈತ ನಾಶ ಮಾಡುವವನು(4)
2.ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡವನು(2)
3.ಒಬ್ಬಟ್ಟು ಇಲ್ಲಿದೆ (3)
6.ಎಲ್ಲಾ ದಿಕ್ಕುಗಳಲ್ಲಿನ ರಾಜ್ಯಗಳನ್ನು ಗೆಲ್ಲುವುದು(4)
7.ಕೊನೆಗೆ ಅರ್ಥವಿರುವ ವಸ್ತು(3)
8.ಬಳ್ಳಿಯೊಡೆಯುತ್ತಿರುವ ಮಿಂಚು(4)
10.ಮಣಿಗಳನ್ನು ಪೋಣಿಸಿದ ಹಾರ(4)
11.ಮೃತರಾದವರನ್ನ ಬದುಕಿಸುವ ಸುಧೆ(3)
14.ಅತಿ ಅಸಕ್ತಿಯುಳ್ಳವ ತಿರುಗಿದ್ದಾನಲ್ಲಾ?(2)



4607ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಶರಸಂಧಾನ4.ವಾಯುವ್ಯ 5.ವಾಯಸ6.ನೆಗಡಿ8.ಮಯ 9.ಸತಿ11.ಲಿಕನ14.ವಿಷಾದ 15.ಗುಲಾಬಿ16.ವಿಧಾನಸೌಧ **ಮೇಲಿಂದ ಕೆಳಕ್ಕೆ:** 1.ಶತಪದ 2.ಸಂಪಾದಕೀಯ3.ನವಾಬ 4.ವಾಸನೆ7.ಗರಡಿ8.ಮರುಕ 9.ಸಮುದ್ರಯಾನ 10.ಅನುಬಂಧ12.ನವಿಲು13.ಪದವಿ

ಸುಡೊಕು 4994

		3	5		6		4	7
	9			4			8	
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4993 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಆಶಾ ಕಾರ್ಯಕರ್ತೆಯರಿಗೆ ಸೌಲಭ್ಯಗಳ ಕೊರತೆ: ಸರ್ಕಾರಕ್ಕೆ ನೋಟಿಸ್

ನವದೆಹಲಿ (ಪಿಟಿಐ): ದೇಶದಾದ್ಯಂತ ಆಶಾ ಕಾರ್ಯಕರ್ತೆಯರು ಸಂಕಷ್ಟದ ಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡುವಲ್ಲಿ ಸರ್ಕಾರಗಳು ವಿಫಲವಾಗಿವೆ ಎಂಬ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನೋಟಿಸ್ ನೀಡಿದೆ.

ದೇಶದ ಗ್ರಾಮೀಣ ಜನಸಂಖ್ಯೆಯ ಆರೋಗ್ಯ ನಿರ್ವಹಣೆ ಬಹುತೇಕ ಆಶಾ ಕಾರ್ಯಕರ್ತರನ್ನೇ ಅವಲಂಬಿಸಿದೆ. ಆದರೆ, ಅವರಿಗೆ ಅಗತ್ಯ ಸೌಲಭ್ಯಗಳನ್ನು ಸರ್ಕಾರಗಳು ಒದಗಿಸುತ್ತಿಲ್ಲ ಎಂಬ ಆರೋಪ ನಿಜವಾಗಿದ್ದರೆ ಗ್ರಾಮೀಣ ಪ್ರದೇಶದ ಆರೋಗ್ಯ ನಿರ್ವಹಣೆಯಲ್ಲಿ ಗಂಭೀರ ರೀತಿಯ ಸಮಸ್ಯೆಗಳು ಎದುರಾಗುತ್ತವೆ. ಕೋವಿಡ್–19 ನಿರ್ವಹಣೆಯಲ್ಲಿ ಆಶಾ ಕಾರ್ಯಕರ್ತೆಯರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಆಯೋಗ ಹೇಳಿದೆ.

ದೂರಿನ ಕುರಿತು ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿಗಳು, ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ನೋಟಿಸ್ ನೀಡಿದ್ದು 6 ವಾರಗಳ ಒಳಗೆ ಉತ್ತರಿಸುವಂತೆ ಸೂಚಿಸಲಾಗಿದೆ.

ಆರ್‌ಎಲ್‌ಡಿಗೆ ಜಯಂತ್ ನೂತನ ಸಾರಥಿ

ಜಯಂತ್ ಚೌಧರಿ

ನವದೆಹಲಿ (ಪಿಟಿಐ): ಜಯಂತ್ ಚೌಧರಿ ಅವರು ರಾಷ್ಟ್ರೀಯ ಲೋಕ ದಳದ (ಆರ್‌ಎಲ್‌ಡಿ) ನೂತನ ಅಧ್ಯಕ್ಷರಾಗಿ ಮಂಗಳವಾರ ನೇಮಕಗೊಂಡಿರುವುದಾಗಿ ಪಕ್ಷದ ಪ್ರಕಟಣೆ ತಿಳಿಸಿದೆ.

ಜಯಂತ್ ಅವರ ತಂದೆ ಅಜಿತ್ ಸಿಂಗ್ ಅವರು ಮೇ 6ರಂದು ಕೋವಿಡ್‌–19ನಿಂದ ಮೃತಪಟ್ಟಿದ್ದರು. ಪಕ್ಷದ ಉಪಾಧ್ಯಕ್ಷರಾಗಿದ್ದ 42 ವರ್ಷ ವಯಸ್ಸಿನ ಜಯಂತ್ ಅವರಿಗೆ ಪಕ್ಷದ ಅಧ್ಯಕ್ಷ ಸ್ಥಾನ ನೀಡುವ ನಿರ್ಧಾರವನ್ನು ತೆಗೆದುಕೊಂಡಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬುದ್ಧ ಹೇಳಿದ ಮೈತ್ರಿ ...

• ಗಿರೀಶ್ ಮೂಗ್ತಿಹಳ್ಳಿ

ಇಂದು ಬುದ್ಧಪೂರ್ಣಿಮಾ. ಮೈತ್ರಿಯ ವಿಶೇಷತೆಯ ಬಗ್ಗೆ ಅರಿವನ್ನು ವಿಸ್ತರಿಸಿದವನು ಬುದ್ಧ. ಮನುಷ್ಯ ಕರುಣೆಯನ್ನು ಮಾತ್ರ ಅನುಷ್ಠಾನ ಮಾಡಿದರೆ ಸಾಲದು; ಮೈತ್ರಿಯ ಅನುಷ್ಠಾನ ಆವಶ್ಯಕ ಎಂದು ಸಾರಿದ

ಸಿದ್ಧಾರ್ಥನ ಸೋದರಸಂಬಂಧಿ ದೇವದತ್ತನ ಬಾಣಕ್ಕೆ ಹಕ್ಕಿಯೊಂದು ಸಿಕ್ಕಿ, ನರಳುತ್ತಾ ಸಿದ್ಧಾರ್ಥನ ಬಳಿ ಬಂದು ಬೀಳುತ್ತದೆ. ಆಗ ಹಕ್ಕಿ ಯಾರಿಗೆ ಸೇರಬೇಕೆಂಬ ಜಿಜ್ಞಾಸೆ ಮೂಡುತ್ತದೆ. ಕ್ಷತ್ರಿಯರ ನಿಯಮದಂತೆ ಬೇಟೆಯಾಡಿದವನಿಗೆ ಸೇರಬೇಕೆ, ಅಥವಾ ಮಾನವೀಯತೆಯುಳ್ಳ ಜೀವರಕ್ಷಕನಿಗೆ ಸೇರಬೇಕೆ - ಎಂಬ ತಾರ್ಕಿಕ ಪ್ರಶ್ನೆಗೆ ಪಂಚಾಯ್ತಿಯಲ್ಲಿ ಸಿದ್ಧಾರ್ಥನಿಗೆ ಗೆಲುವಾಗುತ್ತದೆ. ಹಾಗೆಯೇ, ರೋಹಿಣೀನದಿ ನೀರಿನ ಹಂಚಿಕೆ ವಿಚಾರದಲ್ಲಿ ಯುದ್ಧವನ್ನು ವಿರೋಧಿಸಿ ಅಹಿಂಸೆಯನ್ನು ಎತ್ತಿಹಿಡಿದ ಸಿದ್ಧಾರ್ಥನನ್ನು ಶಾಕ್ಯಸಂಘದ ನಿಯಮದಂತೆ ಸಾಮ್ರಾಜ್ಯದಿಂದ ಬಹಿಷ್ಕಾರ ಹಾಕುತ್ತಾರೆ. ಈ ಎರಡು ಘಟನೆಗಳು ಸಿದ್ಧಾರ್ಥನ ಜೀವಪರ ದನಿಗೆ ನಿದರ್ಶನಗಳು.

ಇಲ್ಲಿ ಮೊದಲನೆಯ ಘಟನೆ ಜೀವಿ(ಹಕ್ಕಿ)ಗೆ ಸಂಬಂಧಿಸಿದ್ದಾದರೆ, ಎರಡನೇ ಘಟನೆ ಮನುಷ್ಯನಿಗೆ ಸಂಬಂಧಿಸಿದ್ದು. ಎರಡರಲ್ಲೂ ಜೀವರಕ್ಷಣೆಯೇ ಪ್ರಧಾನ. ಈ ಎರಡು ಅಂಶಗಳನ್ನು ಸೇರಿಸಿ ಬುದ್ಧನು 'ಮೈತ್ರಿ' ಎಂದು ಕರೆದನು. ಸಾಮಾನ್ಯ ಅರ್ಥದಲ್ಲಿ 'ಮೈತ್ರಿ' ಪದಕ್ಕೆ ಸ್ನೇಹ; ಗೆಳೆತನ ಎಂಬ ಅರ್ಥಗಳಿವೆ. ಆದರೆ ಬುದ್ಧ ಹೇಳಿದ 'ಮೈತ್ರಿ'ಗೆ ಒಂದು ಮೀಮಾಂಸೆ ಇದೆ. ಬಹು ವಿಸ್ತಾರವಾದ ವ್ಯಾಪ್ತಿ ಇದೆ. ಬುದ್ಧನು ಪ್ರಥಮ ಉಪದೇಶದಲ್ಲಿ ಸದ್ಗುಣಗಳ ಮಾರ್ಗದ ಬಗ್ಗೆ ಹೇಳುವಾಗ 'ಮೈತ್ರಿ'ಯನ್ನು ಪ್ರಸ್ತಾಪಿಸುತ್ತಾನೆ. ಬುದ್ಧನ ದೃಷ್ಟಿಯಲ್ಲಿ ಮೈತ್ರಿ ಎಂದರೆ 'ಎಲ್ಲರಿಗೂ ಸಹಭಾವನೆಯನ್ನು ವಿಸ್ತರಿಸುವುದು – ಕೇವಲ ಮಿತ್ರರಿಗಷ್ಟೇ ಅಲ್ಲ, ವೈರಿಗಳಿಗೂ ಸಹ. ಮಾನವರಿಗಷ್ಟೇ ಅಲ್ಲ, ಎಲ್ಲಾ ಜೀವಿಗಳಿಗೂ'. 'ಮನುಷ್ಯನಿಗೆ ಪ್ರೀತಿ ಅಗತ್ಯ. ಆದರೆ ಅದೊಂದೇ ಸಾಲದು, ನಮಗೆ ಬೇಕಾದದ್ದು ಮೈತ್ರಿ. ಅದು ಪ್ರೀತಿಗಿಂತ ಹೆಚ್ಚು ವಿಶಾಲ. ಮೈತ್ರಿಗೆ ಮನುಷ್ಯರೊಂದಿಗೆ ಮಾತ್ರವಲ್ಲ, ಎಲ್ಲಾ ಜೀವಿಗಳೊಂದಿಗೆ ಸಹಬಾಳ್ವೆ ಎಂಬ ಅರ್ಥವಿದೆ' ಎಂದು ಅವನು ಹೇಳುತ್ತಾನೆ.

ಧಮ್ಮದ ವಿಚಾರದಲ್ಲಿ ಬುದ್ಧ ತನ್ನ ಮಾರ್ಗವನ್ನು ಸ್ಪಷ್ಟಪಡಿಸುತ್ತಾನೆ. 'ತಾನು, ಅನೇಕ ಮಾನವರಲ್ಲಿ ಒಬ್ಬ. ತನ್ನ ಸಂದೇಶ ಮನುಷ್ಯರಿಗೆ ಮನುಷ್ಯ ಬೋಧಿಸಿದ ಉಪದೇಶ' ಎಂದು ಹೇಳುತ್ತಾನೆ. ಇವನ ಮಾರ್ಗದಲ್ಲಿ ಪರಮಾತ್ಮನಾಗಲಿ, ಆತ್ಮನಾಗಲಿ ಇಲ್ಲ. ಮರಣೋತ್ತರ ಜೀವನಕ್ಕೆ ಸ್ಥಾನವಿಲ್ಲ. ಪ್ರಪಂಚವು ದುಃಖಮಯವಾಗಿದೆ, ಆ ದುಃಖವನ್ನು ಹೇಗೆ ನಿವಾರಿಸಬೇಕು ಎಂಬುದು ಧಮ್ಮದ ಗುರಿಯಾಗಿದೆ ಎಂದು ಹೇಳುತ್ತಾನೆ. ಬುದ್ಧನ ಪ್ರಕಾರ ಧರ್ಮ ಸದ್ಧರ್ಮವಾಗಬೇಕಾದರೆ ಪ್ರಜ್ಞೆ (ಸರಿಯಾಗಿ ಆಲೋಚಿಸುವುದು), ಶೀಲ (ಸರಿಯಾಗಿ ನಡೆದುಕೊಳ್ಳುವುದು), ಕರುಣೆ (ಸರಿಯಾಗಿ ನೆರವಾಗುವುದು), ಮೈತ್ರಿ (ಎಲ್ಲಾ ಜೀವಿಗಳ ಮೇಲೆಯೂ ಪ್ರೀತಿ) ಇವುಗಳನ್ನು ಪಡೆಯಬೇಕು.

ಪ್ರತಿಯೊಂದಕ್ಕೂ ಮನಸ್ಸೇ ಕೇಂದ್ರ ಎಂದು ಹೇಳುವ ಬುದ್ಧನು ಮನಸ್ಸಿನ ಸಂಸ್ಕರಣಕ್ಕೆ ಒತ್ತು ಕೊಡುತ್ತಾನೆ. ಮನಸ್ಸಿನ ಪರಿಶುದ್ಧಿಗೆ ಉತ್ತಮ ಸಾಧನಗಳಾಗಿ, ಚಿತ್ತದ ಸರ್ವಶ್ರೇಷ್ಠ ಮತ್ತು ದಿವ್ಯ ಅವಸ್ಥೆಗಳಾಗಿ ನಾಲ್ಕು ಬ್ರಹ್ಮವಿಹಾರಗಳನ್ನು ತಿಳಿಸುತ್ತಾನೆ. ಅವುಗಳೆಂದರೆ ಮೈತ್ರಿ, ಕರುಣೆ, ಮುದಿತಾ, ಉಪೇಕ್ಷಾ. ಇವುಗಳಲ್ಲಿ ಮೈತ್ರಿಗೆ ಮೊದಲ ಸ್ಥಾನ.

ಬುದ್ಧನ ಪ್ರಕಾರ ಮನುಷ್ಯನು ಮೈತ್ರಿಭಾವವನ್ನು ಅನುಸರಿಸುವಾಗ ಅವನಿಗಾಗುವ ಎಲ್ಲಾ ಅವಮಾನ, ಅನ್ಯಾಯಗಳನ್ನು ಸಹಿಸಿಕೊಂಡು, ಆಕ್ರಮಣಕಾರರ ಮೇಲೆಯೂ ಮೈತ್ರಿಯನ್ನು ತಾಳುತ್ತಾ ಹೋಗಬೇಕು. ಆಗ ಮನಸ್ಸನ್ನು ಭೂಮಿಯಂತೆ ಅಚಲವಾಗಿ, ಗಾಳಿಯಂತೆ ಸ್ವಚ್ಛವಾಗಿ ಮತ್ತು ನದಿಯಂತೆ ಆಳವಾಗಿ ಇಟ್ಟುಕೊಳ್ಳಲು ಸಾಧ್ಯ. ಹೀಗೆ ಮಾಡಿದರೆ ಮೈತ್ರಿಯು ಕ್ಷೋಭೆಗೆ ಒಳಗಾಗುವುದಿಲ್ಲ. ಮೈತ್ರಿ ಹೃದಯದಲ್ಲಿ ಹುಟ್ಟಿದರೂ ಅದರ ವ್ಯಾಪ್ತಿ ಅನಂತವಾಗಿರಬೇಕು. ಮಾಡುವ ಆಲೋಚನೆ ವಿಶಾಲವೂ ಆಳತೆಯನ್ನು ಮೀರಿದ್ದು ಆಗಬೇಕು. ಯಾವ ದ್ವೇಷ ಭಾವನೆಯೂ ಇರಬಾರದು. ಮನುಷ್ಯ ಕರುಣೆಯನ್ನು ಮಾತ್ರ ಅನುಷ್ಠಾನ ಮಾಡಿದರೆ ಸಾಲದು; ಮೈತ್ರಿಯ ಅನುಷ್ಠಾನ ಆವಶ್ಯಕ. ಏಕೆಂದರೆ ಮೈತ್ರಿ ಸಹೃದಯ ಸ್ವಾತಂತ್ರ್ಯ. ಅದು ಎಲ್ಲವನ್ನು ಒಳಗೊಳ್ಳುತ್ತದೆ, ಮಿಂಚುತ್ತದೆ, ಹೊಳೆಯುತ್ತದೆ, ಜ್ವಲಿಸುತ್ತದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಭವಿಷ್ಯ

Astrology

ಓಂ ಶ್ರೀ ದುರ್ಗಾದೇವಿ ಅನುಗ್ರಹ ಜ್ಯೋತಿಷ್ಯಾಲಯ ಕಟೀಲು ದುರ್ಗಾಪರಮೇಶ್ವರಿ ಅಮ್ಮನವರ ಆರಾಧಕರು. ಪಂಡಿತ್ ಮೋಹನ್ ದಾಸ್ ಶರ್ಮ (ಉಡುಪಿ) ನಿಮ್ಮ ಕುಟುಂಬದ ಸಮಸ್ಯೆಗಳಾದ ನಿಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಬುದ್ಧಿ, ಜ್ಞಾನಶಕ್ತಿ, ಆರೋಗ್ಯ ಸಮಸ್ಯೆ ತೊಂದರೆಯಿದ್ದರೆ ನಿಮ್ಮ ಗಂಡ ಪರಸ್ತ್ರೀಯಿಂದ ನಿಮ್ಮ ಸಂಸಾರದಲ್ಲಿ ತೊಂದರೆ, ನಿಮ್ಮ ಗಂಡ ನಿಮ್ಮ ಮಾತುಗಳನ್ನು ಕೇಳಬೇಕು. ನಿಮ್ಮ ಅತ್ತೆಯಿಂದ ನಿಮ್ಮ ಸಂಸಾರದಲ್ಲಿ ತೊಂದರೆ ಆಗುತ್ತಿದೆಯೇ? ನಿಮ್ಮ ಸೊಸೆಯಿಂದ ನಿಮ್ಮ ಕುಟುಂಬದಲ್ಲಿ ತೊಂದರೆ ಆಗುತ್ತಿದೆಯೇ, ನೀವು ಮಾಡತಕ್ಕಂತಹ ವ್ಯಾಪಾರದಲ್ಲಿ ಲಾಭ ನಷ್ಟ ಸಮಸ್ಯೆ, ಪ್ರೀತಿಯಲ್ಲಿ ನಂಬಿ ಮೋಸಹೋಗಿದ್ದೀರಾ, ವಾಸ್ತುದೋಷ,ಕುಜದೋಷ, ಕಾಳಸರ್ಪದೋಷ, ಮಾಂಗಲ್ಯದೋಷ, ನಿಮ್ಮ ಜನ್ಮಲಗ್ನದಲ್ಲಿ ಮದುವೆ ವಿಚಾರದಲ್ಲಿ ಕಂಕಣ ತೊಂದರೆಯಾಗುತ್ತಿದ್ದರೆ ನೀವು ಕೊಟ್ಟಂತಹ ಹಣ ನಿಮಗೇ ವಾಪಾಸ್ ಬರಬೇಕು, ನೀವಿಷ್ಟಪಟ್ಟಂತಹ ಸ್ತ್ರೀ / ಪುರುಷ ನಿಮ್ಮಂತೆ ವಶೀಕರಣ ಆಗಬೇಕು. ಗಂಡ ಹೆಂಡತಿ ಕಿರಿಕಿರಿಯಿಂದ ಡೈವರ್ಸ್ ಪ್ರಾಬ್ಲಮ್ ಇರುವುದರಿಂದ ನಿಮ್ಮ ಸಂಸಾರ ಹಾಳಾಗುತ್ತಿದಿಯೇ, ಅಧಿಕಾರಿಗಳಿಂದ ನೀವು ಮಾಡತಕ್ಕಂತಹ ಕೆಲಸದಲ್ಲಿ ತೊಂದರೆಯಾಗುತ್ತಿದೆಯಾ, ಅಣ್ಣ - ತಮ್ಮಂದಿರ ಅಸ್ತಿಯಲ್ಲಿ ತೊಂದರೆ, ಶತ್ರುಗಳಿಂದ ನಿಮ್ಮ ಕುಟುಂಬಕ್ಕೆ ತೊಂದರೆಯೇ, ಮರಣ ಭಯವನ್ನು ನಿಮ್ಮ ಕುಟುಂಬದಲ್ಲಿ ಮಾಟಮಂತ್ರ ಪ್ರಯೋಗದಿಂದ ನಿಮ್ಮ ಕುಟುಂಬ ಸರ್ವನಾಶ ಆಗುತ್ತಿದೆಯೇ, ನಿಮ್ಮೆಲ್ಲಾ ಕಠಿಣಸಮಸ್ಯೆಗಳಿಗೂ ತಾಯಿ ಕೇರಳ ಭಗವತಿ ದೇವಿ ಮತ್ತು ಕಟೀಲು ದುರ್ಗಾಪರಮೇಶ್ವರಿದೇವಿ ಅಮ್ಮನವರ ಪೂಜಾ ಶಕ್ತಿಯಿಂದ ಅಮಾವಾಸ್ಯೆ ಹುಣ್ಣಿಮೆ ಸೂರ್ಯ ಚಂದ್ರ ಗ್ರಹಣದಿಂದ ಜಪಸಿದ್ಧಿಗಳಿಂದ ಕೇವಲ 48 ಗಂಟೆಗಳಲ್ಲಿ 100% ಶಾಶ್ವತ ಪರಿಹಾರ ಮಾಡುತ್ತಾರೆ. 9663631199 ಮಲ್ಲೇಶ್ವರಂ, ಬೆಂಗಳೂರು

★ನುಡಿದಂತೆ ನಡೆಯುವುದು★ "ವಂಶಪಾರಂಪರಿಕ ಜ್ಯೋತಿಷ್ಯರು," ಆರೋಗ್ಯ, ಸಂತಾನ, ಸ್ತ್ರೀಪುರುಷ ವಶೀಕರಣ, ಗಂಡಹೆಂಡತಿ ಕಲಹ, ನಾಗಸಾಧುಗಳ ಭಾನಮತಿ ಪ್ರಯೋಗದಿಂದ 100%ಪರಿಹಾರ. 7829724990

ಉಚಿತ ಭವಿಷ್ಯ ಶ್ರೀ ಕೇರಳ ದುರ್ಗಾಂಬಿಕಾದೇವಿ ಆರಾಧಕರು ಪ್ರಧಾನ ತಾಂತ್ರಿಕರು ಮೋಡಿ ಮಾಂತ್ರಿಕರು. ದೈವಶಕ್ತಿ ಜ್ಯೋತಿಷ್ಯರು ಪಂಡಿತ್ ಗುರೂಜಿ ವಶೀಕರಣ ಸ್ಪೆಷಲಿಸ್ಟ್ ನಿಮ್ಮಾವುದೇ ಸುಖದುಃಖ ಮನನೊಂದ ಯಾವುದೇ ಗುಪ್ತಸಮಸ್ಯೆಗಳಿಗೂ 1 ದಿನದಲ್ಲಿ ಪರಿಹಾರ.9743010743

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

★||ಶ್ರೀಶಾಕಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11 ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ||.ವಿವೇಕಾನಂದಜೋಶಿ. 9008968867

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ವಾಹನ

Four Wheelers Selling

Others

TATA YODHA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

73.6kW ಇಂಜಿನ್

ಕೊಡುಗೆಗಳು ₹25,000/-* ದವರೆಗೆ

ಎಕ್ಸ್‌ಚೇಂಜ್ ₹20,000/-* ದವರೆಗೆ

ಕೇವಲ ₹2,360/– ಪಾವತಿಸಿ 2 ವರ್ಷ/ 75,000 ಕಿ.ಮೀ. ಮೇಂಟೆನೆನ್ಸ್ ಪಡೆಯಿರಿ

ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore 72597 84441
95389 35533
Mysore 95389 35533
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 9880142353
Hubli/Haveri/Gadag/Bellary/ Raichur - 96209 55858
Bagalkot/Bijapur/Gulbarga/ Bidar - 73899 44057
Belgaum - 91088 64572
* ಷರತ್ತುಗಳು ಅನ್ವಯಿಸುತ್ತದೆ.

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ವ್ಯಾಪಾರ

Business to Business

Finance

ಮುದ್ರಾ, ಯೋಜನೆಯಲ್ಲಿ ಕೃಷಿ ಸ್ಥಿರಾಸ್ತಿ ವೈಯಕ್ತಿಕ ಬಿಸಿನೆಸ್ ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲ ಲಭ್ಯ 9172930942, 9449896870

ಅಕ್ರಮ ಜಲಾಶಯ ನಿರ್ಮಾಣ: ಕರ್ನಾಟಕ ವಿರುದ್ಧ ಆರೋಪ

ಮೇಕೆದಾಟು: ಪರಿಶೀಲನೆಗೆ ಎನ್‌ಜಿಟಿ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸರ್ಕಾರವು ಮೇಕೆದಾಟು ಬಳಿ ಕಾವೇರಿ ನದಿಗೆ ಅಡ್ಡಲಾಗಿ ಅಕ್ರಮವಾಗಿ ಅಣೆಕಟ್ಟೆ ನಿರ್ಮಿಸುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಸಮಿತಿಯೊಂದನ್ನು ರಚಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ), ಈ ಸಂಬಂಧ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದೆ.

ಅರಣ್ಯ, ಪರಿಸರ ಸಚಿವಾಲಯದ ಅನುಮತಿ ಪಡೆಯದೆಯೇ ಮೇಕೆದಾಟು ಜಲಾಶಯ ನಿರ್ಮಿಸಲು ಕರ್ನಾಟಕ ಸರ್ಕಾರ ಸಿದ್ಧತೆ ನಡೆಸಿದೆ ಎಂಬ ಪತ್ರಿಕಾ ವರದಿ ಆಧರಿಸಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿರುವ ನ್ಯಾಯಮೂರ್ತಿ ಆರ್‌.ರಾಮಕೃಷ್ಣನ್ ಹಾಗೂ ತಜ್ಞ ಸದಸ್ಯ ಕೆ.ಸತ್ಯಗೋಪಾಲ್ ಅವರನ್ನು ಒಳಗೊಂಡ ಎನ್‌ಜಿಟಿಯ ದಕ್ಷಿಣ (ಚೆನ್ನೈ)ದ ಪೀಠ, ಜುಲೈ 5ರೊಳಗೆ ವರದಿ ಸಲ್ಲಿಸುವಂತೆ ಸಮಿತಿಗೆ ಸೂಚಿಸಿದೆ.

ಉದ್ದೇಶಿತ ಯೋಜನಾ ಪ್ರದೇಶದ ಬಳಿ ಇರುವ ಕಾವೇರಿ ವನ್ಯಜೀವಿ ತಾಣ ಹಾಗೂ ಮೇಕೆದಾಟು ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ಯಾವುದೇ ರೀತಿಯ ಉಲ್ಲಂಘನೆ ಕಂಡುಬಂದಲ್ಲಿ ವಾಸ್ತವ ವರದಿಯನ್ನು ಸಲ್ಲಿಸಬೇಕು ಎಂದು ಸಮಿತಿಗೆ ನಿರ್ದೇಶನ ನೀಡಲಾಗಿದೆ.

ಕೇಂದ್ರದ ಪರಿಸರ ಮತ್ತು ಅರಣ್ಯ ಸಚಿವಾಲಯ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ಕಾವೇರಿ ನೀರಾವರಿ ನಿಗಮ ನಿಯಮಿತ ಹಾಗೂ ಕರ್ನಾಟಕದ ಅರಣ್ಯ ಇಲಾಖೆಯ ಹಿರಿಯ (ಹೆಚ್ಚುವರಿ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಿಂತ ಉನ್ನತ ಸ್ಥಾನದ) ಅಧಿಕಾರಿಗಳನ್ನು ಈ ಸಮಿತಿ ಒಳಗೊಳ್ಳಲಿದೆ. ಕರ್ನಾಟಕದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯು ನೋಡಲ್ ಅಧಿಕಾರಿಯಾಗಲಿದ್ದು, ಸ್ಥಳ ಪರಿಶೀಲನೆಗೆ ಬರುವ ಸಮಿತಿ ಸದಸ್ಯರಿಗೆ ಎಲ್ಲ ಅಗತ್ಯ ವ್ಯವಸ್ಥೆ ಕೈಗೊಳ್ಳಬೇಕು ಎಂದು ಪೀಠ ಹೇಳಿದೆ.

ಅನುಮತಿ ಪಡೆಯದೇ ಜಲಾಶಯದ ನಿರ್ಮಾಣಕ್ಕೆ ಸಕಲ ಸಿದ್ಧತೆಗಳನ್ನು ನಡೆಸಲಾಗಿದೆ. ಅಲ್ಲದೆ, ಉದ್ದೇಶಿತ ಯೋಜನಾ ಪ್ರದೇಶದ ಬಳಿ ಪರಿಕರಗಳನ್ನು ಸಂಗ್ರಹಿಸಲಾಗಿದೆ ಎಂಬ ಕುರಿತು ಪ್ರತಿಕ್ರಿಯೆ ನೀಡುವಂತೆ ಸೂಚಿಸಿ ಕೇಂದ್ರದ ಪರಿಸರ, ಅರಣ್ಯ ಮತ್ತು ಜಲಶಕ್ತಿ ಸಚಿವಾಲಯ, ಕೇಂದ್ರದ ಜಲ ಆಯೋಗ, ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳಿಗೆ ಈ ಸಂಬಂಧ ನೋಟಿಸ್ ಜಾರಿ ಮಾಡಲಾಗಿದೆ.

ಮೇಕೆದಾಟು ಬಳಿ ಜಲಾಶಯ ನಿರ್ಮಾಣಕ್ಕೆ ಮುಂದಾಗಿದ್ದರಿಂದ ಪರಿಸರದ ಕುರಿತ ಪ್ರಶ್ನೆ ಉದ್ಭವಿಸಿದೆ. 2021ರ ಏಪ್ರಿಲ್ 15ರಂದು ಪ್ರಕಟವಾಗಿರುವ ಪತ್ರಿಕಾ ವರದಿಗಳಲ್ಲಿನ ಆರೋಪಗಳನ್ನು ಅವಲೋಕಿಸಲಾಗಿದ್ದು, ಈ ಸಂಬಂಧ ನ್ಯಾಯಮಂಡಳಿಯ ಮಧ್ಯಸ್ಥಿಕೆ ವಹಿಸುವುದು ಸೂಕ್ತ ಎಂಬ ನಿರ್ಧಾರಕ್ಕೆ ಬರಲಾಗಿದೆ ಎಂದು ಹಸಿರು ಪೀಠ ತಿಳಿಸಿದೆ.

ಕಾವೇರಿಯ ಹೆಚ್ಚುವರಿ ನೀರನ್ನು ಬೆಂಗಳೂರು ಹಾಗೂ ಸುತ್ತಮುತ್ತಲಿನ ಜನತೆಗೆ ಕುಡಿಯಲು ಪೂರೈಸುವ ಹಾಗೂ ವಿದ್ಯುತ್ ಉತ್ಪಾದಿಸುವ ಉದ್ದೇಶದಿಂದ ಕರ್ನಾಟಕ ಮೇಕೆದಾಟು ಬಳಿ ಸಮಾನಾಂತರ ಜಲಾಶಯ ನಿರ್ಮಿಸುವ ಯೋಜನೆ ರೂಪಿಸಿದೆ. ಆದರೆ, ಹೆಚ್ಚುವರಿ ನೀರು ಬಳಸುವ ಕರ್ನಾಟಕದ ಉದ್ದೇಶಕ್ಕೆ ತಡೆ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿರುವ ತಮಿಳುನಾಡು ಸರ್ಕಾರ, ಕಾವೇರಿಯ 45 ಟಿಎಂಸಿ ಅಡಿ ಹೆಚ್ಚುವರಿ ನೀರನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ವೆಲ್ಲಾರು, ಗುಂಡಾರು ಮತ್ತು ವೈಗೈ ನದಿಗಳೊಂದಿಗೆ ಕಾವೇರಿಯನ್ನು ಜೋಡಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಮಲೇಷ್ಯಾ: ಮೆಟ್ರೊ ರೈಲು ಡಿಕ್ಕಿ– 200ಕ್ಕೂ ಹೆಚ್ಚು ಜನರಿಗೆ ಗಾಯ

ಕ್ವಾಲಾಲಂಪುರ (ಎಪಿ): ಇಲ್ಲಿನ ಮೆಟ್ರೊ ರೈಲು ಸುರಂಗವೊಂದರಲ್ಲಿ ಸೋಮವಾರ ಎರಡು ಲಘು ರೈಲುಗಳು (ಎಲ್‌ಆರ್‌ಟಿ) ಡಿಕ್ಕಿ ಹೊಡೆದದ್ದರಿಂದ 200ಕ್ಕೂ ಹೆಚ್ಚಿನ ಜನರು ಗಾಯಗೊಂಡಿದ್ದಾರೆ.

'ವಿಶ್ವದ ಅತಿ ಎತ್ತರದ ಅವಳಿ ಗೋಪುರಗಳಾದ ಪೆಟ್ರೋನಾಸ್ ಟವರ್ಸ್ ಬಳಿಯ ಸುರಂಗದಲ್ಲಿ 213 ಪ್ರಯಾಣಿಕರನ್ನೊಳಗೊಂಡ ಮೆಟ್ರೊ ರೈಲು ಹಾಗೂ ಪರೀಕ್ಷಾರ್ಥ ಪ್ರಯಾಣದಲ್ಲಿದ್ದ ರೈಲು ಪರಸ್ಪರ ಡಿಕ್ಕಿಯಾಗಿವೆ' ಎಂದು ಸಾರಿಗೆ ಸಚಿವ ಸಿಯಾಂಗ್ ತಿಳಿಸಿದ್ದಾರೆ.

ಪ್ರಜಾವಾಣಿ LIVE
Prajavani.net Prajavani Prajavani
ಸಂವಾದ
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಕೊರೊನಾ ಹೊಡೆತಕ್ಕೆ ನಲುಗಿರುವ ಸಣ್ಣ ಉದ್ಯಮಗಳ ಚೇತರಿಕೆ ಹೇಗೆ?
ಸಂವಾದದಲ್ಲಿ ಭಾಗವಹಿಸುವವರು

ಆರ್‌.ಶಿವಕುಮಾರ್
ಅಧ್ಯಕ್ಷ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆಗಳ ಒಕ್ಕೂಟ

ಕೆ.ಬಿ.ಅರಸಪ್ಪ
ಅಧ್ಯಕ್ಷ, ಕಾಸಿಯಾ ಕರ್ನಾಟಕ


ಪ್ರದೀಪ್ ಜಿ ಪೈ
ಸಂಚಾಲಕ, ಬಿಜೆಪಿ ರಾಜ್ಯ ಕೈಗಾರಿಕಾ ಪ್ರಕೋಷ್ಠ

ಇಂದು ಮಧ್ಯಾಹ್ನ 12 ರಿಂದ 1

ಎಲ್ಲಿದೆ ಅಂತರ... ಕೊಪ್ಪಳದ ಬ್ಯಾಂಕ್ ಆಫ್ ಇಂಡಿಯಾದ ಎದುರು ಮಂಗಳವಾರ ತಮ್ಮ ಬ್ಯಾಂಕ್ ಖಾತೆಗಳಿಗೆ ಜಮೆ ಆಗಿರುವ ನರೇಗಾ ಯೋಜನೆಯ ಕೂಲಿ ಹಣವನ್ನು ಪಡೆಯಲು ಪರಸ್ಪರ ಅಂತರ ಮರೆತು ಜಮಾಯಿಯಿಸಿದ್ದ ರೈತರು

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ವಿಶಾಖಪಟ್ಟಣ: ಎಚ್‌ಪಿಸಿಎಲ್ ಘಟಕದಲ್ಲಿ ಬೆಂಕಿ

ವಿಶಾಖಪಟ್ಟಣ (ಪಿಟಿಐ): ಇಲ್ಲಿನ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್ (ಎಚ್‌ಪಿಸಿಎಲ್) ಸ್ಥಾವರದಲ್ಲಿ ಮಂಗಳವಾರ ಮಧ್ಯಾಹ್ನ ದೊಡ್ಡ ಪ್ರಮಾಣದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಯಾವುದೇ ಸಾವು–ನೋವು ಸಂಭವಿಸಿಲ್ಲ.

'ದೊಡ್ಡ ಪ್ರಮಾಣದಲ್ಲಿ ಬೆಂಕಿ ಕಾಣಿಸಿಕೊಂಡ ತಕ್ಷಣವೇ ಅದನ್ನು ನಂದಿಸಲಾಗಿದೆ. ಇಲ್ಲಿ ಕೆಲಸ ಮಾಡುವ ಎಲ್ಲರೂ ಸುರಕ್ಷಿತವಾಗಿದ್ದಾರೆ. ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ' ಎಂದು ಜಿಲ್ಲಾಧಿಕಾರಿ ವಿ.ವಿನಯ್ ಚಂದ್ ಹೇಳಿದರು.

ಎಚ್‌ಪಿಸಿಎಲ್ ಹಳೆಯ ಟರ್ಮಿನಲ್‌ನಲ್ಲಿರುವ ಕಚ್ಚಾ ತೈಲ ಶುದ್ಧೀಕರಣ ಘಟಕ -3 ರಲ್ಲಿ ಬೆಂಕಿ ಕಾಣಿಸಿಕೊಂಡಿದೆ. ದಟ್ಟ ಹೊಗೆ ಆವರಿಸಿತ್ತು ಎಂದು ಮೂಲಗಳು ತಿಳಿಸಿವೆ. ಎಚ್‌ಪಿಸಿಎಲ್ ತಂಡಗಳು, ನೌಕಾದಳದ ಪೂರ್ವ ಕಮಾಂಡ್ ಮತ್ತು ಆಂಧ್ರಪ್ರದೇಶದ ವಿಪತ್ತು ನಿರ್ವಹಣೆ ಹಾಗೂ ಅಗ್ನಿಶಾಮಕ ಸೇವೆಗಳ ವಿಭಾಗದ ಸಿಬ್ಬಂದಿ ತಕ್ಷಣವೇ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

ನ್ಯೂಯಾರ್ಕ್: ₹ 7.2 ಕೋಟಿ ಬಹುಮಾನದ ಟಿಕೆಟ್ ಹಿಂದಿರುಗಿಸಿದ ಭಾರತೀಯ ಕುಟುಂಬ

ನ್ಯೂಯಾರ್ಕ್ (ಪಿಟಿಐ): ಆತುರದಲ್ಲಿ ಏನೆಲ್ಲ ಆಗುತ್ತೆ. ಅದೃಷ್ಟ ನಮ್ಮ ಪರವಾಗಿದ್ದರೆ ನಮಗೆ ಸಿಗಬೇಕಾದದ್ದು ಸಿಕ್ಕೇ ಸಿಗುತ್ತದೆ ಎಂಬುದಕ್ಕೆ ಅಮೆರಿಕದಲ್ಲಿ ನಡೆದಿರುವ ಈ ಪ್ರಕರಣ ಸಾಕ್ಷಿಯಾಗಿದೆ. ಜತೆಗೆ ಭಾರತೀಯ ಕುಟುಂಬವೊಂದರ ಔದಾರ್ಯ ಮನೆಮಾತಾಗಿದೆ.

1 ಮಿಲಿಯನ್ ಡಾಲರ್ (₹ 7.2 ಕೋಟಿ) ಬಹುಮಾನ ಗೆದ್ದಿದ್ದ ಲಕ್ಕಿ ಡ್ರಾ ಟಿಕೆಟ್ ಅನ್ನು ಸರಿಯಾಗಿ ಗಮನಿಸದ ಮಹಿಳೆಯೊಬ್ಬರು ಅದನ್ನು ಬಿಸಾಡುವಂತೆ ಹೇಳಿ ಹೊರಟು ಹೋಗಿದ್ದರು. ಆದರೆ, ಅವರ ಅದೃಷ್ಟ ಹೇಗಿತ್ತೆಂದರೆ ಮತ್ತೆ ಆ ಬಹುಮಾನ ಬಂದಿರುವ ಟಿಕೆಟ್ ಅವರ ಕೈಸೇರಿದೆ. ಭಾರತೀಯ ಮೂಲದ ಕುಟುಂಬವು ತಮ್ಮ ಅಂಗಡಿಯ ಬಹುಕಾಲದ ಗ್ರಾಹಕಿಯಾಗಿದ್ದ ಆ ಮಹಿಳೆಗೆ ಟಿಕೆಟ್ ಹಿಂದಿರುಗಿಸುವ ಮೂಲಕ ಮೆಚ್ಚುಗೆಗೆ ಪಾತ್ರವಾಗಿದೆ.

ಆಗಿದ್ದಿಷ್ಟು: ಲೀ ರೋಸ್ ಫೀಗಾ ಎಂಬ ಗ್ರಾಹಕಿ ಮಾರ್ಚ್‌ನಲ್ಲಿ ಮೆಸಾಚುಸೆಟ್ಸ್‌ನ ಸೌತ್‌ವಿಕ್‌ನಲ್ಲಿರುವ ಭಾರತೀಯ ಮೂಲದ ಕುಟುಂಬ ನಡೆಸುತ್ತಿರುವ ಲಕಿ ಸ್ಟಾಪ್ ಎಂಬ ಅಂಗಡಿಯಲ್ಲಿ ಡೈಮಂಡ್ ಮಿಲಿಯನ್ ಸ್ಕ್ರಾಚ್-ಆಫ್ ಟಿಕೆಟ್ ಖರೀದಿಸಿದ್ದರು,

ಆದರೆ, ಟಿಕೆಟ್ ಅನ್ನು ಸಂಪೂರ್ಣವಾಗಿ ಸ್ಕ್ರಾಚ್ ಮಾಡದೆ ಬಿಸಾಡಲಾಗಿತ್ತು. ಕಸದ ಬುಟ್ಟಿಯಲ್ಲಿದ್ದ ಪೂರ್ಣಗೊಳ್ಳದ 30 ಡಾಲರ್ ಬೆಲೆಯ ಟಿಕೆಟ್ ಅನ್ನು ಅಂಗಡಿಯ ಮಾಲೀಕರ ಮಗ ಅಭಿ ಶಾ ಅವರು ಗಮನಿಸಿದ್ದಾರೆ. ಈ ಬಗ್ಗೆ ತಾಯಿ ಅರುಣಾ ಶಾ ಅವರನ್ನು ವಿಚಾರಿಸಿದಾಗ ಆ ಟಿಕೆಟ್ ಅನ್ನು ಕಾಯಂ ಗ್ರಾಹಕರೊಬ್ಬರಿಗೆ ಮಾರಿದ್ದಾಗಿ ತಿಳಿಸಿದರು. ಬಳಿಕ, ಟಿಕೆಟ್ ಅನ್ನು ಸ್ಕ್ರ್ಯಾಚ್ ಮಾಡಿದಾಗ ಅದಕ್ಕೆ 1 ಮಿಲಿಯನ್ ಡಾಲರ್ ಬಹುಮಾನ ಬಂದಿರುವುದು ತಿಳಿಯಿತು ಎಂದು ಅಭಿ ಸ್ಥಳೀಯ ಚಾನಲ್‌ವೊಂದಕ್ಕೆ ತಿಳಿಸಿದ್ದಾರೆ.

'ನಾನು ರಾತ್ರೋರಾತ್ರಿ ಮಿಲಿಯನೇರ್ ಆಗಿದ್ದೆ. ಒಂದು ಕ್ಷಣ ಆ ಹಣದ ಮೂಲಕ ಟೆಸ್ಲಾ ಕಾರು ಖರೀದಿಸುವ ಬಯಕೆಯಾಗಿತ್ತು. ಆದರೆ, ಬಳಿಕ ಅದನ್ನು ಹಿಂದಿರುಗಿಸಲು ನಿರ್ಧರಿಸಿದೆ' ಎಂದು ಅಭಿ ಹೇಳಿದ್ದಾರೆ.

'ನಮ್ಮ ಬಳಿ ಆ ಟಿಕೆಟ್ ಇದ್ದಾಗ 2 ರಾತ್ರಿ ನಿದ್ದೆಯೇ ಬರಲಿಲ್ಲ. ಅಭಿ, ಭಾರತದಲ್ಲಿರುವ ತನ್ನ ಅಜ್ಜಿ ತಾತನಿಗೆ ಕರೆ ಮಾಡಿ ಸಲಹೆ ಕೇಳಿದನು. ಟಿಕೆಟ್ ಹಿಂದಿರುಗಿಸು. ಆ ಹಣ ನಮಗೆ ಬೇಡ ಎಂದು ಅವರು ಸಲಹೆ ನೀಡಿದರು' ಎಂದು ಲಕ್ಕಿ ಸ್ಟಾಪ್ ಅಂಗಡಿ ಮಾಲೀಕ ಮೌನೀಶ್ ಶಾ ಹೇಳಿದ್ದಾರೆ.

ಪ್ರಜಾವಾಣಿ ಗೌರವಾರ್ಪಣೆ

Log on to : https://homages.deccanherald.com
or
Scan QR code to access booking form

SAD DEMISE



Sri MARIYANKA
1937 - 2021, Maddur, Mandya
Retd Asst Ex Engineer, KPWD,
84 years, passed away on 15 May 2021 due to cardiac arrest at home in Bengaluru.
Bereaved family members
Krishna, Shreya & Daksh
Jahnavi, Ravishankar & Vibha
Phone: +91-9900235054

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಅನಿತ ಕೃಷ್ಣ
W/o ಬಿ.ಸಿ. ಕೃಷ್ಣ
ಇವರು ದಿನಾಂಕ 25.05.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇಂತಿ ದುಃಖತಪ್ತರು
ಪತಿ, ಮಕ್ಕಳು, ಮೊಮ್ಮಗಳು ಮತ್ತು ಕುಟುಂಬ ಸದಸ್ಯರು

16ನೇ ವರ್ಷದ ಚಿರಸ್ಮರಣೆ

ಶ್ರೀ ಟಿ. ಅಣ್ಣಯಪ್ಪ
ಮಾ|| ತಾ|| ಪಂ|| ಸದಸ್ಯರು, ಮಾರಗೊಂಡಹಳ್ಳಿ
ನೀವು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆಯುತ್ತಿದ್ದೇವೆ. ಸದಾ ನಿಮ್ಮ ಆಶೀರ್ವಾದ ನಮಗಿರಲಿ.
ಶ್ರೀಮತಿ ದೊಡ್ಡ ಅಮ್ಮಯ್ಯಮ್ಮ ಮತ್ತು ಮಕ್ಕಳು
ಎ. ಶ್ರೀನಿವಾಸಮೂರ್ತಿ– 9880427590

ಪ್ರಜಾವಾಣಿ ಗೌರವಾರ್ಪಣೆ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
or
Scan QR
ಅಥವಾ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ
ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಸಂಪರ್ಕಿಸಿರಿ
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331

ಸಂಕ್ಷಿಪ್ತ ಸುದ್ದಿ

'ಪಾಕಿಸ್ತಾನಕ್ಕೆ ನೆರವು ಸ್ಥಗಿತ: ನಿಲುವಿನಲ್ಲಿ ಬದಲಾವಣೆ ಇಲ್ಲ'

ವಾಷಿಂಗ್ಟನ್/ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನಕ್ಕೆ ಭದ್ರತಾ ನೆರವು ಸ್ಥಗಿತೊಳಿಸುವ ಬಗ್ಗೆ ಅಮೆರಿಕದ ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತೆಗೆದುಕೊಂಡಿದ್ದ ತೀರ್ಮಾನವನ್ನೇ ಮುಂದುವರಿಸಲು ಅಧ್ಯಕ್ಷ ಜೋ ಬೈಡನ್ ನಿರ್ಧರಿಸಿದ್ದಾರೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಪೆಂಟಗಾನ್ ಹೇಳಿದೆ.

2018ರ ಜನವರಿಯಲ್ಲಿ ಅಮೆರಿಕದ ಆಗಿನ ಅಧ್ಯಕ್ಷ ಟ್ರಂಪ್ ಅವರು ಪಾಕಿಸ್ತಾನಕ್ಕೆ ನೀಡುವ ಎಲ್ಲ ರೀತಿಯ ಭದ್ರತಾ ನೆರವನ್ನು ಸ್ಥಗಿತಗೊಳಿಸುವ ನಿರ್ಧಾರ ತೆಗೆದುಕೊಂಡಿದ್ದರು. ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಇಸ್ಲಾಮಾಬಾದ್ ವಹಿಸುತ್ತಿರುವ ಪಾತ್ರ ತೃಪ್ತಿದಾಯಕವಾಗಿಲ್ಲ ಎಂಬ ಕಾರಣಕ್ಕೆ ಅವರು ಈ ತೀರ್ಮಾನ ತೆಗೆದುಕೊಂಡಿದ್ದರು.

'ಪಾಕಿಸ್ತಾನಕ್ಕೆ ನೀಡುವ ಭದ್ರತಾ ನೆರವು ಈಗ ಸ್ಥಗಿತಗೊಂಡಿದೆ. ಮುಂದಿನ ದಿನಗಳಲ್ಲಿ ಈ ನಿಲುವು ಬದಲಾಗುತ್ತದೆಯೇ ಎಂಬ ಊಹಾಪೋಹಗಳಿಗೆ ನಾನು ಉತ್ತರಿಸಲು ಆಗುವುದಿಲ್ಲ' ಎಂದು ಪೆಂಟಗಾನ್ ಪತ್ರಿಕಾ ಕಾರ್ಯದರ್ಶಿ ಜಾನ್ ಕಿರ್ಬಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೇರಳ ಸ್ಪೀಕರ್: ಎಂ.ಬಿ. ರಾಜೇಶ್ ಆಯ್ಕೆ

ತಿರುವನಂತಪುರ (ಪಿಟಿಐ): ಆಡಳಿತಾರೂಢ ಸಿಪಿಐ(ಎಂ)ನ ಎಂ.ಬಿ.ರಾಜೇಶ್ ಅವರು ಕೇರಳ ವಿಧಾನಸಭೆಯ ನೂತನ ಸಭಾಧ್ಯಕ್ಷರಾಗಿ ಮಂಗಳವಾರ ಆಯ್ಕೆಯಾದರು.

ನೂತನ ಸಭಾಧ್ಯಕ್ಷರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಯುಡಿಎಫ್‌ನಿಂದ ಸ್ಪರ್ಧಿಸಿದ್ದ ಪಿ.ವಿ.ವಿಷ್ಣುನಾಥ 40 ಮತಗಳನ್ನು ಪಡೆದರೆ ರಾಜೇಶ್ 96 ಮತಗಳನ್ನು ಪಡೆದು ಜಯಗಳಿಸಿದರು.

ಮತದಾನದ ವೇಳೆ ಶಾಸಕರಾದ ಕೆ.ಬಾಬು, ಎಂ.ವಿನ್ಸೆಂಟ್ ಮತ್ತು ವಿ.ಅಬ್ದುರಹಿಮನ್ ಅನಾರೋಗ್ಯದ ಕಾರಣದಿಂದ ಗೈರು ಹಾಜರಾಗಿದ್ದರು. ಶಾಸಕ ಕನ್ನಮಂಗಲಮ್ ಹಂಗಾಮಿ ಸಭಾಧ್ಯಕ್ಷರ ಸ್ಥಾನದಲ್ಲಿ ಇದ್ದ ಕಾರಣ ಮತದಾನದಿಂದ ದೂರ ಉಳಿದಿದ್ದರು.

ರಾಜೇಶ್ ಅವರು ರಾಜ್ಯ ವಿಧಾನಸಭೆಗೆ ಪ್ರವೇಶ ಪಡೆಯುವ ಮೊದಲು 10 ವರ್ಷ ಸಂಸತ್ ಸದಸ್ಯರಾಗಿದ್ದರು. ಸಿಪಿಐ (ಎಂ) ರಾಜ್ಯ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ನಂತರ ಮಾರ್ಕ್ಸಿಸ್ಟ್ ಪಕ್ಷದ ಯುವ ಘಟಕ ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾದ (ಡಿವೈಎಫ್‌ಐ) ರಾಜ್ಯ ಮತ್ತು ರಾಷ್ಟ್ರೀಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಮಾಲಿಯಲ್ಲಿ ಮಿಲಿಟರಿ ದಂಗೆ: ಅಧ್ಯಕ್ಷ, ಪ್ರಧಾನಿ ಬಂಧನ

ಬಮಾಕೊ (ಎಪಿ): ಒಂಬತ್ತು ತಿಂಗಳ ಹಿಂದೆ ನಡೆದ ದಂಗೆಯಲ್ಲಿ ಅಧಿಕಾರವನ್ನು ವಶಪಡಿಸಿಕೊಂಡಿದ್ದ ಸೇನೆಯ ಇಬ್ಬರು ಸದಸ್ಯರನ್ನು ಸರ್ಕಾರದ ಪುನರ್‌ರಚನೆ ವೇಳೆಯಲ್ಲಿ ಕೈಬಿಟ್ಟ ಕೆಲವೇ ಗಂಟೆಗಳಲ್ಲಿ ದಂಗೆಕೋರ ಮಿಲಿಟರಿ ಪಡೆಯು ಸೋಮವಾರ ಮಾಲಿಯ ಅಧ್ಯಕ್ಷ ಹಾಗೂ ಪ್ರಧಾನಿಯನ್ನು ಬಂಧಿಸಿದ್ದಾರೆ ಎಂದು ವಿಶ್ವಸಂಸ್ಥೆಯು ತಿಳಿಸಿದೆ.

ಬಂಧಿತ ಮಾಲಿ ಅಧ್ಯಕ್ಷ ಬಹ್ ಎನ್ಡಾವ್ ಹಾಗೂ ಪ್ರಧಾನಿ ಮೊಕ್ಟರ್ ಓವಾನೆ ಅವರನ್ನು ಕಾಟಿಯ ಮಿಲಿಟರಿ ಪ್ರಧಾನ ಕಚೇರಿಗೆ ಕರೆದೊಯ್ಯಲಾಗಿದೆ. ದಂಗೆ ಎದ್ದಿರುವ ಮಿಲಿಟರಿಯ ಕ್ರಮವನ್ನು ಖಂಡಿಸಿರುವ ಆಫ್ರಿಕನ್ ಒಕ್ಕೂಟ ಹಾಗೂ ವಿಶ್ವಸಂಸ್ಥೆಯು ಇಬ್ಬರನ್ನು ಶೀಘ್ರವೇ ಬಿಡುಗಡೆ ಮಾಡಬೇಕೆಂದು ತಾಕೀತು ಮಾಡಿವೆ.

ಜ್ವಾಲಾಮುಖಿ ಸ್ಫೋಟ: ಸತ್ತವರ ಸಂಖ್ಯೆ 32ಕ್ಕೆ ಏರಿಕೆ

ಕಿನ್ಶಾಸ (ಎಪಿ): ಪೂರ್ವ ಕಾಂಗೋದಲ್ಲಿ ಜ್ವಾಲಾಮುಖಿ ಸ್ಫೋಟದಿಂದ ಸಾವನ್ನಪ್ಪಿದವರ ಸಂಖ್ಯೆ 32ಕ್ಕೆ ಏರಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜ್ವಾಲಾಮುಖಿ ಸ್ಫೋಟದಿಂದ ಗೋಮಾ ಪ್ರದೇಶದ ಹೊರವಲಯದಲ್ಲಿ ಅನೇಕ ಮನೆಗಳು ನಾಶವಾಗಿವೆ.

ನೈರಗೊಂಗೊ ಪರ್ವತವು ಶನಿವಾರ ಕೆಂಪು ಬಣ್ಣಕ್ಕೆ ತಿರುಗಿತ್ತು. ನಂತರ ಜ್ವಾಲಾಮುಖಿ ಸ್ಫೋಟಗೊಂಡು ಇದರಲ್ಲಿನ ಲಾವಾರಸವು ಪರ್ವತದ ಬುಡದಲ್ಲಿರುವ ಅನೇಕ ಹಳ್ಳಿಗಳಿಗೆ ಹರಡಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ



ಎಂ. ರಾಜಗೋಪಾಲ್
ಮಾಜಿ ರಾಜ್ಯಸಭಾ ಸದಸ್ಯರು ಹಾಗೂ ಮಾಜಿ ಒಕ್ಕಲಿಗರ ಸಂಘದ ಅಧ್ಯಕ್ಷರು
ಇವರು ದಿನಾಂಕ 23.05.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಆತ್ಮಕ್ಕೆ ಶಾಂತಿ ಹಾಗೂ ಕುಟುಂಬಕ್ಕೆ ಆತ್ಮಸ್ಥೈರ್ಯ ಕೊಡಲೆಂದು ಪ್ರಾರ್ಥಿಸುತ್ತೇವೆ.
ಇಂತಿ ದುಃಖಿತಪ್ತರು
ವಿ. ಕೃಷ್ಣಪ್ಪ ರವರು ಅಧ್ಯಕ್ಷರು ಒಕ್ಕಲಿಗರ ಸಂಘ ಹಾಗೂ ಆಡಳಿತ ಮಂಡಳಿ ಸದಸ್ಯರು.

ಪತ್ನಿ ಆತ್ಮಹತ್ಯೆ ಪ್ರಕರಣ: ಮಲಯಾಳಂ ನಟ ಉನ್ನಿ ದೇವ್ ಬಂಧನ

ತಿರುವನಂತಪುರ (ಪಿಟಿಐ): ಮಲಯಾಳಂ ನಟ ಉನ್ನಿ ದೇವ್ ಅವರನ್ನು ಅವರ ಪತ್ನಿ ಪ್ರಿಯಾಂಕಾ ಅವರ ಸಾವಿನ ಪ್ರಕರಣದಲ್ಲಿ ಮಂಗಳವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಲ್ಲಿನ ಶಾಲೆಯೊಂದರಲ್ಲಿ ದೈಹಿಕ ಶಿಕ್ಷಣ ಶಿಕ್ಷಕಿಯಾಗಿದ್ದ ಪ್ರಿಯಾಂಕಾ, ತನ್ನ ಗಂಡನ ವಿರುದ್ಧ ಕೌಟುಂಬಿಕ ದೌರ್ಜನ್ಯ ಪ್ರಕರಣ ದಾಖಲಿಸಿದ ಮರು ದಿನ (ಮೇ 12) ವೆಂಬಾಯಂನಲ್ಲಿ ಇರುವ ತಮ್ಮ ಮನೆಯ ಕೋಣೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು.

ಪೊಲೀಸರು ಉನ್ನಿ ದೇವ್ ಅವರನ್ನು ಎರ್ನಾಕುಲಂ ಜಿಲ್ಲೆಯ ಅವರ ಮನೆಯಲ್ಲಿ ವಶಕ್ಕೆ ತೆಗೆದುಕೊಂಡಿದ್ದಾರೆ. ಅವರು ಮಲಯಾಳಂನ ಹಿರಿಯ ನಟ, ದಿವಂಗತ ರಾಜನ್ ಪಿ. ದೇವ್ ಅವರ ಪುತ್ರ.

ಕೋವಿಡ್ ಸಾಂಕ್ರಾಮಿಕದ ಮೂರನೇ ಅಲೆ: ಏಮ್ಸ್ ನಿರ್ದೇಶಕ ರಣದೀಪ್ ಗುಲೇರಿಯಾ ಹೇಳಿಕೆ

ಮಕ್ಕಳ ಮೇಲೆ ಪರಿಣಾಮದ ಪುರಾವೆಗಳಿಲ್ಲ

ನವದೆಹಲಿ (ಪಿಟಿಐ): ಕೋವಿಡ್ ಮುಂದಿನ ಅಲೆಯು ಮಕ್ಕಳ ಮೇಲೆ ಹೆಚ್ಚಿನ ಪರಿಣಾಮ ಬೀರಲಿದೆ ಎಂಬುದಕ್ಕೆ ಯಾವುದೇ ಆಧಾರಗಳಿಲ್ಲ ಎಂದು ಸರ್ಕಾರದ ಪ್ರಮುಖ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಭಾರತದಲ್ಲಿ ಕೋವಿಡ್–19 ಮೂರನೇ ಅಲೆಯು ಮಕ್ಕಳ ಮೇಲೆ ಬೀರಬಹುದಾದ ಪರಿಣಾಮಗಳ ಕುರಿತು ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಏಮ್ಸ್ ನಿರ್ದೇಶಕ ರಣದೀಪ್ ಗುಲೇರಿಯಾ, ಮಕ್ಕಳ ಮೇಲೆ ಕೊರೊನಾ ವೈರಸ್ ಸೋಂಕು ತೀವ್ರವಾಗಿ ಪರಿಣಾಮ ಬೀರುವುದು ಅಥವಾ ಕೋವಿಡ್–19 ಮುಂದಿನ ಅಲೆಯಲ್ಲಿ ಮಕ್ಕಳಲ್ಲಿ ಸೋಂಕು ಪ್ರಕರಣಗಳು ಏರಿಕೆಯಾಗಲಿವೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ ಎಂದಿದ್ದಾರೆ.

‘ಕೋವಿಡ್ ಮೊದಲ ಮತ್ತು ಎರಡನೇ ಅಲೆಗಳ ದತ್ತಾಂಶಗಳ ಪ್ರಕಾರ, ಸಾಮಾನ್ಯವಾಗಿ ಮಕ್ಕಳು ಕೊರೊನಾ ವೈರಸ್ ಸೋಂಕು ತಗುಲುವುದರಿಂದ ರಕ್ಷಣೆ ಪಡೆದಿದ್ದಾರೆ. ಅಕಸ್ಮಾತ್ ಮಕ್ಕಳಿಗೆ ಕೋವಿಡ್ ದೃಢಪಟ್ಟರೂ ಅವರಲ್ಲಿ ಅಲ್ಪ ಪ್ರಮಾಣದ ಸೋಂಕು ಮಾತ್ರ ಇರುವುದನ್ನು ಗಮನಿಸಲಾಗಿದೆ’ ಎಂದು ಗುಲೇರಿಯಾ ಹೇಳಿದ್ದಾರೆ.

‘ಆದರೆ, ಸಾಂಕ್ರಾಮಿಕ ಸಂದರ್ಭದಲ್ಲಿ ಮಕ್ಕಳು ಬೇರೆ ರೀತಿಯ ಪರಿಣಾಮಗಳಿಗೆ ಒಳಗಾಗಿದ್ದಾರೆ. ಅಧಿಕ ಒತ್ತಡ ಮತ್ತು ಮಾನಸಿಕ ಸಮಸ್ಯೆಗಳು, ಸ್ಮಾರ್ಟ್‌ಫೋನ್‌ಗಳ ಮೇಲೆ ಅತಿಯಾದ ಅವಲಂಬನೆ, ಶಿಕ್ಷಣ ಮತ್ತು ಕಲಿಕೆಯ ಅವಕಾಶಗಳ ಕೊರತೆ ಎದುರಾಗಿದೆ. ಗ್ರಾಮೀಣ ಭಾಗಗಳಲ್ಲಿ ಶಾಲಾ ಮಕ್ಕಳ ಶಿಕ್ಷಣಕ್ಕೆ ತೀವ್ರ ಹೊಡೆತ ಬಿದ್ದಿದೆ’ ಎಂದು ವಿವರಿಸಿದ್ದಾರೆ.

‘ಕೊರೊನಾ ವೈರಸ್ ಸೋಂಕು ದೇಹದೊಳಗೆ ಎಸಿಇ ಎನ್‌ಜೈಮ್‌ಗಳ (ಕಿಣ್ವ) ಸಹಕಾರದಿಂದ ಹರಡುತ್ತಿರುವುದಾಗಿ ಊಹಿಸಲಾಗಿದೆ. ಆದರೆ, ವೈರಸ್ ವೃದ್ಧಿಸಲು ಸಹಕಾರ ನೀಡುವ ಎಸಿಇ ಎನ್‌ಜೈಮ್‌ಗಳು ವಯಸ್ಕರಿಗಿಂತ ಮಕ್ಕಳಲ್ಲಿ ಕಡಿಮೆ ಪ್ರಮಾಣದಲ್ಲಿರುತ್ತವೆ. ಹಾಗಾಗಿ, ಮಕ್ಕಳಲ್ಲಿ ಸೋಂಕು ತಗುಲುವ ಸಾಧ್ಯತೆಗಳು ಕಡಿಮೆ ಎಂದು ಕಲ್ಪಿಸಿಕೊಳ್ಳಲಾಗಿದೆ’ ಎಂದು ಗುಲೇರಿಯಾ ತಿಳಿಸಿದ್ದಾರೆ.

‘ಈ ಸಿದ್ಧಾಂತವನ್ನು ಹರಿಯಬಿಟ್ಟಿರುವವರ ಪ್ರಕಾರ, ಈವರೆಗೂ ಮಕ್ಕಳ ಮೇಲೆ ಹೆಚ್ಚಿನ ಪರಿಣಾಮಗಳು ಆಗಿಲ್ಲ. ಹಾಗಾಗಿ, ಮೂರನೇ ಅಲೆಯಲ್ಲಿ ಮಕ್ಕಳಿಗೆ ಹೆಚ್ಚು ಸೋಂಕು ತಗುಲುವ ಸಾಧ್ಯತೆ ಇದೆ. ಆದರೆ, ಮಕ್ಕಳಲ್ಲಿ ಸೋಂಕು ತೀವ್ರವಾಗಲಿದೆ ಎಂಬುದಕ್ಕೆ ಯಾವುದೇ ಪುರಾವೆಗಳು ಈವರೆಗೂ ಕಂಡು ಬಂದಿಲ್ಲ’ ಎಂದಿದ್ದಾರೆ.

ಕೋವಿಡ್–19 ಮೂರನೇ ಅಲೆಯು ದೇಶದಲ್ಲಿ ಅಪ್ಪಳಿಸಬಹುದು ಎಂದು ಅಂದಾಜಿಸಿರುವುದನ್ನು ಪ್ರಸ್ತಾಪಿಸಿರುವ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕೇಂದ್ರ ಹಾಗೂ ರಾಜ್ಯಗಳು ಮಕ್ಕಳು ಮತ್ತು ಶಿಶುಗಳ ರಕ್ಷಣೆಗೆ ಅಗತ್ಯವಿರುವ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಲಹೆ ನೀಡಿದೆ. ಈ ಸಂಬಂಧ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮುಖ್ಯಸ್ಥರಾದ ಪ್ರಿಯಾಂಕ್ ಕಾನೂಂಗೊ ಕೇಂದ್ರ ಆರೋಗ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ.

ಕೋವಿಡ್ ಸೇವೆಯಲ್ಲಿ ಸುಧಾರಣೆ ತನ್ನಿ

‘ಮುಂದಿನ ಅಲೆ ಅಥವಾ ಮುಂಬರುವ ವಾರಗಳಲ್ಲಿ ಮಕ್ಕಳ ಮೇಲೆ ಕೊರೊನಾ ಹೆಚ್ಚು ಪ್ರಭಾವ ಬೀರಲಿದೆ ಎಂದು ಹೇಳಲು ಯಾವುದೇ ಕಾರಣಗಳಿಲ್ಲ. ಆದರೆ ಮಕ್ಕಳಿಗೆ ಸಂಬಂಧಿಸಿದ ಕೋವಿಡ್ ಸೇವೆಗಳಲ್ಲಿ ಸುಧಾರಣೆಗಳನ್ನು ತರಬೇಕಾಗಿದೆ’ ಎಂದು ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯ (ಎನ್‌ಟಿಎಜಿಐ) ‘ಕೋವಿಡ್ ವರ್ಕಿಂಗ್ ಗ್ರೂಪ್’ನ ಮುಖ್ಯಸ್ಥ ಡಾ.ಎನ್.ಕೆ.ಅರೋರಾ ತಿಳಿಸಿದ್ದಾರೆ.

‘ಈಗಿನ ತಳಿಯು ಮಕ್ಕಳು ಮತ್ತು ಯುವಕರ ಮೇಲೆ ಹೆಚ್ಚು ಪರಿಣಾಮ ಬೀರಲಿದೆ ಎಂಬುದರ ಬಗ್ಗೆ ಭಾರತದ ಅಂಕಿಅಂಶಗಳು ಹೇಳುತ್ತಿಲ್ಲ. ಆದರೆ, ಇತ್ತೀಚೆಗೆ ಈ ವಯಸ್ಸಿನ ರೋಗಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದನ್ನು ನಾವು ಗಮನಿಸಬಹುದು. ಈ ಸಂದರ್ಭದಲ್ಲಿ ಮೂರನೇ ಅಲೆಯ ಬಗ್ಗೆ ಏನೂ ಹೇಳಲು ಸಾಧ್ಯವಿಲ್ಲ ’ಎಂದು ಅರೋರಾ ಅವರು ಹೇಳಿದ್ದಾರೆ.

‘ಸೋಂಕು ಪೀಡಿತರು ಮನೆಯಲ್ಲಿದ್ದಂತೆಯೇ ಚಿಕಿತ್ಸೆ’

ವಾಷಿಂಗ್ಟನ್ (ಪಿಟಿಐ): ಕೋವಿಡ್–19ನ ಅಲ್ಪ ಅಥವಾ ಸಾಧಾರಣ ಮಟ್ಟದ ಲಕ್ಷಣಗಳು ಕಂಡುಬಂದ ಕೂಡಲೇ ಮನೆಯಲ್ಲಿ ಇರುವಂತೆಯೇ ವರ್ಚುವಲ್ ಸ್ವರೂಪದಲ್ಲಿ ಆರೋಗ್ಯ ಸೇವೆಯನ್ನು ನೀಡಲು ಅನುವಾಗುವಂತಹ ಸರಳ ಹಾಗೂ ನವೀನವಾದ ಕಾರ್ಯಕ್ರಮವನ್ನು ಡೆಲಾಯ್ಟ್ ಕಂಪನಿ ಅಭಿವೃದ್ಧಿಪಡಿಸಿದೆ.

ಹರಿಯಾಣದ ಕರ್ನಲ್ ಜಿಲ್ಲೆಯಲ್ಲಿ ಇದನ್ನು ಆಧರಿಸಿದ ‘ಸಂಜೀವಿನಿ ಪರಿಯೋಜನಾ’ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಂದರ್ಭದಲ್ಲಿ ಮಾತನಾಡಿದ ಕಂಪನಿ ಸಿಇಒ ಪುನೀತ್ ರೆಂಜೆನ್ ಅವರು, ‘ರೋಗಿಗಳಿಗೆ ಅಲ್ಪಾವಧಿಯಲ್ಲಿ ಆರೋಗ್ಯ ಆರೈಕೆ ಸೇವೆಯನ್ನು ಒದಗಿಸಲು ಈ ಕಾರ್ಯಕ್ರಮ ಸಹಕಾರಿ’ ಎಂದು ಹೇಳಿದರು.

ಕಾರ್ಯಕ್ರಮದಡಿ ಇಡೀ ನಿರ್ವಹಣೆ ವ್ಯವಸ್ಥೆ ನಡುವೆ ಪರಸ್ಪರ ಸಂಪರ್ಕ ಇರುತ್ತದೆ. ಕೇಂದ್ರೀಕೃತ ನಿರ್ವಹಣಾ ಕೇಂದ್ರದಿಂದ ಟೆಲಿಮೆಡಿಸಿನ್ ಹಾಗೂ ವರ್ಚುಯಲ್ ಆರೋಗ್ಯ ಸೇವೆಯಿಂದ ಆಶಾ ಕಾರ್ಯಕರ್ತೆಯರವರೆಗೆ. ಸ್ಥಳೀಯ ಆಡಳಿತ, ಜಿಲ್ಲಾಡಳಿತ, ಪೊಲೀಸ್ ವರಿಷ್ಠಾಧಿಕಾರಿ ಎಲ್ಲರೂ ಪರಸ್ಪರ ಸಂಪರ್ಕದಲ್ಲಿ ಇರುತ್ತಾರೆ.

‘ಕೋವಿಡ್‌ನಿಂದಾಗಿ ನಾನು ಭಾರತದಲ್ಲಿ 30 ಸಿಬ್ಬಂದಿ ಕಳೆದುಕೊಂಡಿದ್ದೇನೆ. ನನ್ನ ತಾಯಿಗೂ ಕೋವಿಡ್ ಸೋಂಕು ದೃಢಪಟ್ಟಿತ್ತು. ಮನೆಯಲ್ಲಿದ್ದೇ ಅವರು ಆರೈಕೆ ಪಡೆದರು. ಆಕ್ಸಿಮೀಟರ್ ರೀಡಿಂಗ್ ಮಾಹಿತಿ, ದೇಹದ ತಾಪಮಾನ, ಒಟ್ಟು ಆರೋಗ್ಯ ಸ್ಥಿತಿ ಕುರಿತು ವೈದ್ಯರಿಗೆ ನಿಯಮಿತವಾಗಿ ಸಂದೇಶ ಕಳುಹಿಸಲಾಗುತ್ತಿತ್ತು. ಹಾಗೂ ಚಿಕಿತ್ಸಾ ಸಲಹೆ ಪಡೆಯಲಾಗುತ್ತಿತ್ತು. ತಾಯಿಗೆ ಈ ವ್ಯವಸ್ಥೆಯಡಿ ಚಿಕಿತ್ಸೆ ಆಗಬಹುದಾದರೆ, ಎಲ್ಲರಿಗೂ ಬಳಕೆಯಾಗಲಿ ಎಂಬ ಚಿಂತನೆಯ ಪರಿಣಾಮವಾಗಿ ಈಗ ಕರ್ನಲ್ ಜಿಲ್ಲೆಯಲ್ಲಿ ಜಾರಿಗೆ ಬಂದಿದೆ’ ಎಂದರು.

‘19,420 ವಯಲ್ಸ್ ಆ್ಯಂಫೊಟೆರಿಸಿನ್ ಹಂಚಿಕೆ’

ನವದೆಹಲಿ: ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಮೇ 24ರಂದು ಹೆಚ್ಚುವರಿಯಾಗಿ 19,420 ವಯಲ್ಸ್ ಆ್ಯಂಫೊಟೆರಿಸಿನ್ ಲಸಿಕೆ ಹಂಚಿಕೆ ಮಾಡಲಾಗಿದೆ ಎಂದು ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡ ಮಂಗಳವಾರ ತಿಳಿಸಿದರು. ಮೂಗು, ಕಣ್ಣು, ಕೆಲವೊಮ್ಮೆ ಮಿದುಳಿಗೆ ಹಾನಿ ಮಾಡುವ ಮ್ಯೂಕರ್‌ಮೈಕೊಸಿಸ್ (ಕಪ್ಪು ಶಿಲೀಂಧ್ರ) ಚಿಕಿತ್ಸೆಗೆ ಆ್ಯಂಫೊಟೆರಿಸಿನ್ ಬಳಸಲಾಗುತ್ತದೆ.

ಪ್ರಜಾವಾಣಿ DH ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 24 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 25 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ ‘ಡೆಕ್ಕನ್ ಹೆರಾಲ್ಡ್’ ಹಾಗೂ ‘ಪ್ರಜಾವಾಣಿ’ ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1.	**ಮೈಥಿಲಿ ರಾಮಸ್ವಾಮಿ**, 2ಬಿ, ಹಿಮಗಿರಿ ಅಪಾರ್ಟ್‌ಮೆಂಟ್, 77, 4ನೇ ಮೇನ್ ಮಲ್ಲೇಶ್ವರಂ, ಬೆಂಗಳೂರು	20,000
2.	**ಭಾಸ್ಕರ್ ಎಂ.ವಿ.**, ನಂ. 73, 3ನೇ ಮುಖ್ಯರಸ್ತೆ, 8ನೇ ಕ್ರಾಸ್, ಶ್ರೇಯಸ್ ಕಾಲೊನಿ, ಜೆ.ಪಿ.ನಗರ 7ನೇ ಹಂತ, ಬೆಂಗಳೂರು	10,000
3.	**ಸುಮಾ ಭಾಸ್ಕರ್**, ನಂ. 73, 3ನೇ ಮುಖ್ಯರಸ್ತೆ, 8ನೇ ಕ್ರಾಸ್, ಶ್ರೇಯಸ್ ಕಾಲೊನಿ, ಜೆ.ಪಿ.ನಗರ 7ನೇ ಹಂತ, ಬೆಂಗಳೂರು	10,000
4.	**ಶ್ರೀಕರ್ ಬಿ.**, ನಂ. 73, 3ನೇ ಮುಖ್ಯರಸ್ತೆ, 8ನೇ ಕ್ರಾಸ್, ಶ್ರೇಯಸ್ ಕಾಲೊನಿ, ಜೆ.ಪಿ.ನಗರ 7ನೇ ಹಂತ, ಬೆಂಗಳೂರು	10.000
5.	**ಶ್ರೀನಿವಾಸ ಮಂಚಯ್ಯ**, ಕಾಳಪ್ಪ ಬ್ಲಾಕ್ ಶ್ರೀನಗರ, ಬೆಂಗಳೂರು	5,000
6.	**ಡಿ.ಎಸ್.ನಾಗಭೂಷಣ**, ಎಚ್‌ಐಜಿ–5, ನುಡಿ, ಕಲ್ಲಹಳ್ಳಿ ಎಕ್ಸ್‌ಟೆನ್ಷನ್, ವಿನೋಬಾನಗರ, ಶಿವಮೊಗ್ಗ	5,000
7.	**ಪ್ರದೀಪ್ ಬೆಳ್ಳಾವಿ**, ಎಫ್–007, ಕಂಫರ್ಟ್ ಫ್ಲೋರಾ, 4ನೇ ಕ್ರಾಸ್, 6ನೇ ಮೇನ್, ವಿಜಯ ಬ್ಯಾಂಕ್ ಲೇಔಟ್, ಬೆಂಗಳೂರು	5,000
8.	**ಶ್ರೀಮತಿ ಶಿವರುದ್ರಮ್ಮ ದ್ಯಾವಲಿಂಗಯ್ಯ** ಅವರ ಸ್ಮರಣೆಯಲ್ಲಿ **ಸಿ.ಡಿ. ಚಂದ್ರಶೇಖರಯ್ಯ**, ನಂ. 438, 7ನೇ ಮೇನ್, 8ನೇ ಬ್ಲಾಕ್, ಬನಶಂಕರಿ 6ನೇ ಹಂತ, ಬೆಂಗಳೂರು	5,000
9.	**ಬಿ. ವೀಣಾಕುಮಾರಿ, ಗುರುಶ್ರೀ**, ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ ರಸ್ತೆ, ಎಂಬಿಎಸ್ ಲೇಔಟ್, ಬೊಮ್ಮನಕಟ್ಟೆ, ಶಿವಮೊಗ್ಗ	5,000
10.	**ಡಾ.ಜಿ.ಟಿ. ಗೋವಿಂದಪ್ಪ**, ನಂ. 2434–5, ಮಾನಸ, ಎಸ್‌ಎಸ್ ಲೇಔಟ್, ಎ ಬ್ಲಾಕ್, ಎಸ್‌ಬಿಸಿ ಮಹಿಳಾ ಕಾಲೇಜು ಬಳಿ, ದಾವಣಗೆರೆ	5,000
11.	**ರಾಧಾಕೃಷ್ಣ ಎಸ್.**, ನಂ. 106, ಮೊದಲನೇ ಮುಖ್ಯರಸ್ತೆ, ನೇತಾಜಿ ನಗರ, ಆಲನಹಳ್ಳಿ, ಮೈಸೂರು	5,000
12.	**ಸಿ.ಎನ್. ರೇಣುಕಾದೇವಿ**, ನಂ. 502, ಸಮೃದ್ಧಿ ಅಪಾರ್ಟ್‌ಮೆಂಟ್, 7ನೇ ಮುಖ್ಯರಸ್ತೆ, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ	4,000
13.	**ರೇಣುಕಾ ಸಣ್ಣೆಲ್ಲಪ್ಪನವರ**, ಶಿವಬಸವ ನಗರ, ಬೆಳಗಾವಿ	4,000
14.	**ಲತಾ ಬಾಲಕೃಷ್ಣ**, ಅನುಭವ ನಗರ, ಬೆಂಗಳೂರು	2,001
15.	**ಕೆ.ಎಸ್. ರಾಮಭಟ್ಟ**, ನಂ. 363, 6ನೇ ಮುಖ್ಯರಸ್ತೆ, ನಾಗೇಂದ್ರ ಬ್ಲಾಕ್, ಬೆಂಗಳೂರು	2,000
16.	**ಕಲಾವತಿ ರಾಜಣ್ಣ**, ನಂ. 361/480, ರಾಮಮಂದಿರ ಹತ್ತಿರ, ಒಕ್ಕಲಗೇರಿ, ನಂಜನಗೂಡು	2,000
17.	**ರೊನಾಲ್ಡ್ ಗೋಮ್ಸ್**, ನಂ. 502, ಟಿಯಾರಾ, ಆಳ್ವಾರೆಸ್ ರಸ್ತೆ, ಕದ್ರಿ, ಮಂಗಳೂರು	2,000
18.	**ಶರ್ಮಿಷ್ಠಾ ಪಾಲ್**, ನಂ. 320, ಐಐಎಸ್‌ಸಿ ಕ್ವಾಟರ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು	1,201
19.	**ಬಿ.ಕೆ. ವೇಣುಗೋಪಾಲ್**, ನಂ. 234/1, 2ನೇ ಕ್ರಾಸ್, ಬೆಳ್ಳಂದೂರು ಮುಖ್ಯರಸ್ತೆ, ಬಿಬಿಎಂಪಿ ಕಚೇರಿ ಎದುರು, ಬೆಂಗಳೂರು	1,001
20.	**ಕ್ಯಾ. ರವಿಶಂಕರ್ ರೆಡ್ಡಿ**, ಎಸ್.ವೈ. ನಂ. 8/3, 2ನೇ ಕ್ರಾಸ್, 4ನೇ ಮೇನ್, ಗಣೇಶ ಬ್ಲಾಕ್, ಸುಲ್ತಾನ್ ಪಾಳ್ಯ, ಆರ್.ಟಿ.ನಗರ ಬೆಂಗಳೂರು	1,001
21.	**ಎಲ್.ಎ. ಮಂಜುನಾಥ**, ನಂ. 5814, 23ನೇ ಕ್ರಾಸ್, ವಿಜಯನಗರ ಎರಡನೇ ಹಂತ, ಮೈಸೂರು	1,001
22.	**ಎಚ್.ಕೆ. ಮುರಳೀಧರ**, ನಿವೃತ್ತ ವಿಭಾಗೀಯ ವ್ಯವಸ್ಥಾಪಕ, ಕೆನರಾ ಬ್ಯಾಂಕ್, ನಂ. 563/ಎಸ್, 24ನೇ ಕ್ರಾಸ್, ಹೆಬ್ಬಾಳ, 2ನೇ ಹಂತ, ಮೈಸೂರು	1,001
23.	**ರವಿಶಂಕರ ಸ.**, ನಂ. 308, ಡೆಕ್ಕನ್ ಗ್ರೀನ್ಸ್ ಅಪಾರ್ಟ್‌ಮೆಂಟ್ಸ್, ಜ್ಞಾನಭಾರತಿ ವಾರ್ಡ್, ಮಲ್ಲತ್ತಹಳ್ಳಿ ಪೋಸ್ಟ್, ಬೆಂಗಳೂರು	1,000
24.	**ಜ್ಞಾನೇಶ್ವರ ಎಂ.ಎಸ್.**, ಇ/ಮ ಶಂಕರಪ್ಪ, ನೆಹರು ನಿಹಾಲ್ ಆರ್ಕೇಡ್ ಎದುರು, ಸಾವರ್ಲೈನ್ ರಸ್ತೆ, ಶಿವಮೊಗ್ಗ	1,000
25.	**ಎ.ಕೆ. ಅಪ್ಪಂಗಿ**, ನಂ. 2487, ಇ ಬ್ಲಾಕ್, 13ನೇ ಮೇನ್, 9ನೇ ಬಿ ಕ್ರಾಸ್,ಸಹಕಾರ ನಗರ, ಬೆಂಗಳೂರು	1,000
26.	**ಮೃತ್ಯುಂಜಯ**, ಶಿವಮೊಗ್ಗ	1,000
	ಒಟ್ಟು ಮೊತ್ತ	**1,10,206**
	ಇದುವರೆಗಿನ ಮೊತ್ತ	**27,48,700**

ಪ್ರಜಾವಾಣಿ ವಾಕ್ಯಬಂಧ ಸ್ಪರ್ಧೆ: ಮಂಜುನಾಥ್‌ಗೆ ಬಂಪರ್ ಬಹುಮಾನ

ಪ್ರಜಾವಾಣಿ ವಾಕ್ಯಬಂಧ

ಬೆಂಗಳೂರು: ಏಪ್ರಿಲ್ ಮತ್ತು ಮೇ ತಿಂಗಳು ನಡೆದ ‘ಪ್ರಜಾವಾಣಿ ವಾಕ್ಯಬಂಧ’ ಸ್ಪರ್ಧೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅಂತಿಮಗೊಳಿಸಲಾದ ಸ್ಪರ್ಧಿಗಳಲ್ಲಿ ಅದೃಷ್ಟಶಾಲಿಯಾದ ಹೊಸಪೇಟೆಯ ಮಂಜುನಾಥ ಬಿ. ಅವರು 43 ಇಂಚಿನ ಸ್ಮಾರ್ಟ್ ಟಿ.ವಿ.ಯನ್ನು ಬಂಪರ್ ಬಹುಮಾನವಾಗಿ ಗೆದ್ದುಕೊಂಡಿದ್ದಾರೆ.

ಮಂಜುನಾಥ್

ಏಪ್ರಿಲ್– ಮೇ ಅವಧಿಯಲ್ಲಿ 12 ದಿನಗಳ ಕಾಲ ಈ ಸ್ಪರ್ಧೆ ನಡೆದಿತ್ತು. ಒಟ್ಟು 14,000 ಸ್ಪರ್ಧಿಗಳು ಭಾಗವಹಿಸಿದ್ದರು. ಅರ್ಹತಾ ಮಾನದಂಡ ಅನುಸರಿಸಿ ವಿಜೇತರನ್ನು ಆಯ್ಕೆ ಮಾಡಲಾಯಿತು. ಒಟ್ಟು 120 ಮಂದಿ ಗಿಫ್ಟ್ ವೋಚರ್ ಬಹುಮಾನ ಗಳಿಸಿದ್ದಾರೆ.

ವಿಜೇತರ ವಿವರಗಳನ್ನು ತಿಳಿಯಲು http://bit.ly/winnerslistvakyabandha ಈ ಲಿಂಕ್ ಕ್ಲಿಕ್ ಮಾಡಬಹುದು.

ವಚನ ಸ್ಪರ್ಧೆ

ಬಸವ ಜಯಂತಿ ಅಂಗವಾಗಿ ಏರ್ಪಡಿಸಿದ್ದ, ವಿಶಿಷ್ಟ ರೀತಿಯಲ್ಲಿ ವಚನಗಳನ್ನು ಬರೆಯುವ ಸ್ಪರ್ಧೆಗೂ ಓದುಗರ ಪ್ರತಿಕ್ರಿಯೆ ಅತ್ಯುತ್ತಮವಾಗಿತ್ತು. ಕೆಲವರು ಆಕರ್ಷಕವಾಗಿ ವಚನಗಳನ್ನು ಬರೆದರು.
ಅತ್ಯುತ್ತಮವಾಗಿ ವಚನ ಬರೆದ 34 ಸ್ಪರ್ಧಿಗಳಲ್ಲಿ 20 ವಿಜೇತರನ್ನು ಲಕ್ಕಿ ಡ್ರಾ ಮೂಲಕ ಆಯ್ಕೆ ಮಾಡಲಾಯಿತು.

ವಿಜೇತರ ವಿವರಗಳನ್ನು ತಿಳಿಯಲು *http://bit.ly/vachanasparde* ಈ ಲಿಂಕ್ ಕ್ಲಿಕ್ ಮಾಡಬಹುದು.

‘ಕೋವಿಡ್ ನಿಗ್ರಹ: ಹಳ್ಳಿಗಳಲ್ಲಿ ಮೈಕ್ರೋ ಕಂಟೇನ್‌ಮೆಂಟ್ ವಲಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಪ್ರಕರಣಗಳು ಹೆಚ್ಚಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಮೈಕ್ರೋ ಕಂಟೇನ್‌ಮೆಂಟ್ ವಲಯ ನಿರ್ಮಾಣ ಮಾಡುವ ಮೂಲಕ ಸೋಂಕು ಹರಡುವುದನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಿದೆ’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಮೈಕ್ರೋ ಕಂಟೇನ್‌ಮೆಂಟ್ ವಲಯ ಸ್ಥಾಪಿಸುವ ಜವಾಬ್ದಾರಿಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಆರೋಗ್ಯ ಅಧಿಕಾರಿಗಳು ಮತ್ತು ಪೊಲೀಸರಿಗೆ ವಹಿಸಲಾಗಿದೆ’ ಎಂದರು.

‘ಸೋಂಕಿತರು ಹೆಚ್ಚಿನ ಸಂಖ್ಯೆಯಲ್ಲಿರುವ ಗ್ರಾಮಗಳಲ್ಲಿ ಮೈಕ್ರೋ ಕಂಟೇನ್‌ಮೆಂಟ್ ವಲಯಗಳನ್ನು ನಿರ್ಮಿಸಲಾಗುವುದು. ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿ ವಲಯ ನಿರ್ಮಿಸದ ಹೊರತು ಕೋವಿಡ್ ಹರಡುವುದನ್ನು ತಡೆಯಲು ಅಸಾಧ್ಯ. ಈ ವಲಯಗಳಿಗೆ ಭೇಟಿ ನೀಡಿ ಸೋಂಕಿತರ ಆರೋಗ್ಯ ತಪಾಸಣೆ ನಡೆಸುವಂತೆ ವೈದ್ಯರಿಗೆ ಸೂಚಿಸಲಾಗಿದೆ. ಸೋಂಕಿತರಿಗೆ ವಿಟಮಿನ್‌-ಸಿ, ಜಿಂಕ್ ಸೇರಿದಂತೆ ಕೋವಿಡ್‌ಗೆ ನೀಡಲಾಗುವ ಎಲ್ಲ ಔಷದೋಪಚಾರಗಳನ್ನು ನೀಡಲಾಗುವುದು’ ಎಂದು ಹೇಳಿದರು.



ಬೊಮ್ಮಾಯಿ

ಮುಖ್ಯಮಂತ್ರಿ ವಿಡಿಯೊ ಸಂವಾದ: ‘ಕೋವಿಡ್ ಪ್ರಕರಣಗಳು ಹೆಚ್ಚು ಕಾಣಿಸಿಕೊಂಡಿರುವ ಆಯ್ದ ಕೆಲವು ಗ್ರಾಮ ಪಂಚಾಯಿತಿಗಳ ಜೊತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಬುಧವಾರ (ಮೇ 26) ವಿಡಿಯೊ ಸಂವಾದ ನಡೆಸಲಿದ್ದಾರೆ. ಜೊತೆಗೆ, ಗ್ರಾಮಾಂತರ ಪ್ರದೇಶಗಳಲ್ಲಿನ ಕೋವಿಡ್ ಪರಿಸ್ಥಿತಿಯನ್ನೂ ಅವಲೋಕಿಸಲಿದ್ದಾರೆ’ ಎಂದು ಬೊಮ್ಮಾಯಿ ತಿಳಿಸಿದರು.

1000 ಚುಚುಮದ್ದು: ‘ರಾಜ್ಯದಲ್ಲಿ ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಸೋಂಕು ತಗಲಿದ ರೋಗಿಗಳ ಚಿಕಿತ್ಸೆಗೆ ಅಗತ್ಯ ಪ್ರಮಾಣದ ಔಷಧ ಪೂರೈಸುವ ಭರವಸೆಯನ್ನು ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ನೀಡಿದ್ದಾರೆ. ಬೆಂಗಳೂರು, ಧಾರವಾಡ ಸೇರಿದಂತೆ ಯಾವ ಜಿಲ್ಲೆಯಲ್ಲಿ ಈ ಸೋಂಕು ಹರಡುತ್ತಿದೆಯೋ ಅಲ್ಲಿ ಚಿಕಿತ್ಸೆಗೆ ವಿಶೇಷವಾದ ವಾರ್ಡ್ ನಿರ್ಮಿಸುವಂತೆ ಸೂಚನೆ ನೀಡಲಾಗಿದೆ. ಜೊತೆಗೆ, ಮಕ್ಕಳಿಗೆ ಚಿಕಿತ್ಸೆ ನೀಡಲು ಜಿಲ್ಲಾಮಟ್ಟದಲ್ಲಿ ಮಕ್ಕಳ ವಿಶೇಷ ವಾರ್ಡ್ ಮತ್ತು ಐಸಿಯು ಚಿಕಿತ್ಸಾ ಸೌಲಭ್ಯ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಲಾಗಿದೆ’ ಎಂದು ಅವರು ತಿಳಿಸಿದರು.

190 ಟನ್ ಆಮ್ಲಜನಕ ತಂದ ‘ಶಾರ್ದೂಲ’

ಮಂಗಳೂರು: ನೌಕಾಪಡೆಯ ಸಮುದ್ರಸೇತು-2 ಕಾರ್ಯಾಚರಣೆಯ ಭಾಗವಾಗಿ ‘ಐಎನ್‌ಎಸ್ ಶಾರ್ದೂಲ’ ನೌಕೆ ಕುವೈತ್‌ನಿಂದ 190 ಟನ್ ದ್ರವೀಕೃತ ಆಮ್ಲಜನಕ ಹಾಗೂ 1,200 ಆಮ್ಲಜನಕ ಸಿಲಿಂಡರ್ ಸೇರಿದಂತೆ ವಿವಿಧ ಪರಿಕರಗಳನ್ನು ಹೊತ್ತು ಮಂಗಳವಾರ ಇಲ್ಲಿನ ನವಮಂಗಳೂರು ಬಂದರು ಮಂಡಳಿ (ಎನ್‌ಎಂಪಿಟಿ) ತಲುಪಿದೆ.

ಇಲ್ಲಿಗೆ ಆಮ್ಲಜನಕ ತರುತ್ತಿರುವ 5ನೇ ನೌಕೆ ಇದು. ತಲಾ 20 ಮೆಟ್ರಿಕ್ ಟನ್ ದ್ರವೀಕೃತ ಆಮ್ಲಜನಕವಿದ್ದ 7 ಕಂಟೇನರ್‌ಗಳು, ತಲಾ 25 ಟನ್ ತೂಕದ ಆಮ್ಲಜನಕದ ಟ್ರೇಲರ್‌ಗಳು, 60 ಸಿಲಿಂಡರ್ ಪೆಲ್ಲೆಟ್‌ಗಳು ನೌಕೆಯಿಂದ ಇಳಿಸಲಾಗಿದೆ.

ಬಿಜೆಪಿ ಶಾಸಕ ಸತೀಶ್ ರೆಡ್ಡಿ ಆಪ್ತ ಸೆರೆ

ಒಂದನೇ ಪುಟದಿಂದ

ವಾರ್‌ರೂಮ್‌ಗೆ ನಿತ್ಯದ ಅತಿಥಿ: ‘ಸತೀಶ್ ರೆಡ್ಡಿ ತಮ್ಮ ಕ್ಷೇತ್ರದ ಸೋಂಕಿತರಿಗೆ ಹಾಸಿಗೆ ಕೊಡಿಸಲು ಯತ್ನಿಸುತ್ತಿದ್ದರು. ಶಾಸಕರ ಆಪ್ತ ಎಂದು ಹೇಳಿಕೊಂಡು ವಾರ್‌ರೂಮ್‌ಗೆ ಹೋಗಿ ಬರುತ್ತಿದ್ದ ಬಾಬು ಅಲ್ಲಿನ ಸಿಬ್ಬಂದಿಯನ್ನು ಪರಿಚಯಿಸಿಕೊಂಡು ವ್ಯವಸ್ಥೆ ಬಗ್ಗೆ ತಿಳಿದುಕೊಂಡಿದ್ದ. ಈ ಬಗ್ಗೆ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳು ಲಭ್ಯವಾಗಿವೆ’ ಎಂದೂ ಅಧಿಕಾರಿ ವಿವರಿಸಿದರು.

‘ವಾರ್ ರೂಮ್‌ನಲ್ಲಿ ಬಾಬು ಇರುತ್ತಿದ್ದುದನ್ನು ಪ್ರೊಬೇಷನರಿ ಐಎಎಸ್ ಅಧಿಕಾರಿ ವಿ. ಯಶವಂತ್ ಪ್ರಶ್ನಿಸಿದ್ದರು. ಅದೇ ಕಾರಣಕ್ಕೆ ಏಪ್ರಿಲ್ 30ರಂದು ಬಾಬು ಹಾಗೂ ಆತನ ಸಹಚರರು ವಾರ್ ರೂಮ್‌ಗೆ ನುಗ್ಗಿ ಗಲಾಟೆ ಮಾಡಿದ್ದರು. ಈ ಸಂಬಂಧ ಎಚ್‌ಎಸ್‌ಆರ್ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು’ ಎಂದೂ ಹೇಳಿದರು.

ಮಧ್ಯವರ್ತಿಗಳನ್ನು ಸೃಷ್ಟಿಸಿದ್ದ: ‘ಜಯನಗರದ ಖಾಸಗಿ ಆಸ್ಪತ್ರೆಯೊಂದರ ಎರಡು ಹಾಸಿಗೆಗಳನ್ನು ತಲಾ ₹ 50 ಸಾವಿರಕ್ಕೆ ಮಾರಿದ ಬಗ್ಗೆ ಪೊಲೀಸರಿಗೆ ಮಾಹಿತಿ ಸಿಕ್ಕಿತ್ತು. ಕಾರ್ಯಾಚರಣೆ ನಡೆಸಿದ್ದ ಪೊಲೀಸರು, ಬೇಗೂರಿನ ನೇತ್ರಾವತಿ ಹಾಗೂ ಆಕೆಯ ಸ್ನೇಹಿತ ರೋಹಿತ್‌ಕುಮಾರ್‌ನನ್ನು ಬಂಧಿಸಿದ್ದರು. ಆರೋಪಿ ಆ ಇಬ್ಬರನ್ನೂ ಹಾಸಿಗೆ ಮಾರಾಟ ಮಾಡಲು ಮಧ್ಯವರ್ತಿಗಳನ್ನಾಗಿ ಮಾಡಿಕೊಂಡಿದ್ದ ಸಂಗತಿ ತನಿಖೆಯಿಂದ ಬಹಿರಂಗವಾಗಿದೆ’ ಎಂದು ಅಧಿಕಾರಿ ತಿಳಿಸಿದರು.

ಆಸ್ಪತ್ರೆಗಳಿಂದ ಮಾಹಿತಿ: ‘ಮೃತಪಟ್ಟವರು ಹಾಗೂ ಗುಣಮುಖರಾದ ಸೋಂಕಿತರ ಮಾಹಿತಿಯನ್ನು ಖಾಸಗಿ ಆಸ್ಪತ್ರೆಯ ಕೆಲ ನೌಕರರು ಬಾಬುಗೆ ತಿಳಿಸುತ್ತಿದ್ದರು. ಅವರ ಮಾಹಿತಿಯನ್ನು ವಾರ್‌ರೂಮ್ ಸಿಬ್ಬಂದಿಗೆ ತಲುಪಿಸುತ್ತಿದ್ದ ಬಾಬು, ಹಾಸಿಗೆಗಳನ್ನು ಬ್ಲಾಕ್ ಮಾಡಿಸುತ್ತಿದ್ದ. ಆಸ್ಪತ್ರೆ ನೌಕರರನ್ನು ಈಗಾಗಲೇ ಬಂಧಿಸಲಾಗಿದೆ’ ಎಂದೂ ಅಧಿಕಾರಿ ವಿವರಿಸಿದರು.

‘ನೇತ್ರಾವತಿ, ರೋಹಿತ್‌ಕುಮಾರ್ ಸೇರಿ ಹಲವು ಮಧ್ಯವರ್ತಿಗಳನ್ನು ಸಂಪರ್ಕಿಸುತ್ತಿದ್ದ ಬಾಬು, ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳು ಇವೆ. ಸೋಂಕಿತರನ್ನು ಕರೆತನ್ನಿ ಎನ್ನುತ್ತಿದ್ದ. ಸೋಂಕಿತರಿಗಾಗಿ ಮಾಡಿದ್ದ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಸಂದೇಶ ಕಳುಹಿಸುತ್ತಿದ್ದ ಮಧ್ಯವರ್ತಿಗಳು, ಖಾಸಗಿ ಆಸ್ಪತ್ರೆಗಳಿಗೆ ನೇರ ಹೋದರೆ ₹ 2 ಲಕ್ಷದಿಂದ ₹ 3 ಲಕ್ಷ ಆಗಬಹುದು. ಬದಲಿಗೆ ₹ 50 ಸಾವಿರ ಕೊಟ್ಟರೆ ನೀವು ಕೇಳಿದ ಆಸ್ಪತ್ರೆಯಲ್ಲಿ ಹಾಸಿಗೆ ಕೊಡಿಸುತ್ತೇವೆ ಎನ್ನುತ್ತಿದ್ದರು’ ಎಂದೂ ಅಧಿಕಾರಿ ಹೇಳಿದರು.

ಕೋವಿಡ್–19 ಲಸಿಕೆ ಪಡೆಯುವ ಸಲುವಾಗಿ ಪಂಜಾಬ್‌ನ ಪಟಿಯಾಲಾದಲ್ಲಿ ಇರುವ ಸರ್ಕಾರಿ ಶಾಲೆಯೊಂದರ ಎದುರು ಮಂಗಳವಾರ ಜನರು ಸರದಿಯಲ್ಲಿ ನಿಂತಿದ್ದರು –ಪಿಟಿಐ ಚಿತ್ರ

ಕೋವಿಡ್‌ನಿಂದ 577 ಮಕ್ಕಳು ಅನಾಥ

ದೆಹಲಿ (ಪಿಟಿಐ): ‘ಕೋವಿಡ್–19 ದೇಶದಲ್ಲಿ 577 ಮಕ್ಕಳ ಅನಾಥರನ್ನಾಗಿಸಿದೆ. ತಂದೆ ತಾಯಿಯರನ್ನು ಕಳೆದುಕೊಂಡ ಆ ಮಕ್ಕಳು ತಮ್ಮ ಹತ್ತಿರದ ಸಂಬಂಧಿಗಳ ಆರೈಕೆಯಲ್ಲಿದ್ದಾರೆ,’ ಎಂದು ಕೇಂದ್ರ ಸರ್ಕಾರದ ಉನ್ನತ ಮೂಲಗಳು ಮಾಹಿತಿ ನೀಡಿವೆ.

‘ಈ ಮಕ್ಕಳನ್ನು ಸಂಬಂಧಿಸಿದ ರಾಜ್ಯ ಸರ್ಕಾರಗಳು ಕೈಬಿಟ್ಟಿಲ್ಲ. ಮಕ್ಕಳು ಜಿಲ್ಲಾ ಅಧಿಕಾರಿಗಳ ರಕ್ಷಣೆಯಲ್ಲಿದ್ದಾರೆ. ಆ ಮಕ್ಕಳಿಗೆ ಆಪ್ತಸಮಾಲೋಚನೆ ಅಗತ್ಯವಿದ್ದರೆ ನಿಮ್ಹಾನ್ಸ್ ಸಂಸ್ಥೆಯ ತಂಡ ಸದಾ ಸಿದ್ಧವಿದೆ,’ ಎಂದೂ ಮೂಲಗಳು ಸ್ಪಷ್ಟಪಡಿಸಿವೆ.

‘ಈ ಮಕ್ಕಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಯಾ ಜಿಲ್ಲೆಗಳೊಂದಿಗೆ ನಿರಂತರ ಸಂಪರ್ಕದಲ್ಲಿವೆ. ಅನಾಥರಾದ ಮಕ್ಕಳ ಕಲ್ಯಾಣಕ್ಕಾಗಿ ಹಣದ ಕೊರತೆಯೂ ಇಲ್ಲ. ಅವರ ಶ್ರೇಯೋಭಿವೃದ್ಧಿಗಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯವು ಯುನಿಸೆಫ್ ಸೇರಿದಂತೆ ಹಲವು ಸಂಸ್ಥೆಗಳೊಂದಿಗೆ ಸಭೆ ನಡೆಸಿದೆ’ ಎಂದು ಮೂಲಗಳು ತಿಳಿಸಿವೆ.

ವಿಜಯೇಂದ್ರ ವಿರುದ್ಧ ಕ್ರಮ ಏನು: ಹೈಕೋರ್ಟ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿ ನಂಜನಗೂಡು ದೇವಸ್ಥಾನದಲ್ಲಿ ಪೂಜೆ ನೆರವೇರಿಸಿದ್ದ ಮುಖ್ಯಮಂತ್ರಿ ಯಡಿಯೂರಪ್ಪ ಪುತ್ರ ಬಿ.ವೈ. ವಿಜಯೇಂದ್ರ ವಿರುದ್ಧ ಕೈಗೊಂಡ ಕ್ರಮಗಳ ಕುರಿತು ವಿವರಣೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಲೆಟ್ಜ್‌ಕಿಟ್ ಫೌಂಡೇಷನ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ‘ಒಬ್ಬ ವ್ಯಕ್ತಿಯ ಅನುಕೂಲಕ್ಕಾಗಿ ದೇವಾಲಯ ತೆರೆದು ಪೂಜೆ ನೆರವೇರಿಸಲಾಗಿದೆ. ಸರ್ಕಾರದ ಮಾರ್ಗಸೂಚಿ ಉಲ್ಲಂಘನೆಯಾಗಿದ್ದು, ಕ್ರಮ ಕೈಗೊಂಡಿರುವ ಬಗ್ಗೆ ಜೂ.3ರೊಳಗೆ ವರದಿ ಸಲ್ಲಿಸಬೇಕು’ ಎಂದು ಸೂಚಿಸಿತು.

ಬಿ.ವೈ.ವಿಜಯೇಂದ್ರ ಕುಟುಂಬ ಸಮೇತರಾಗಿ ಮೇ 18ರಂದು ನಂಜುಂಡೇಶ್ವರ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ನಡೆಸಿದ್ದರು ಎಂದು ವಿಚಾರಣೆ ವೇಳೆ ವಕೀಲ ಜಿ.ಆರ್. ಮೋಹನ್ ಮೆಮೊ ಸಲ್ಲಿಸಿದರು.

ಬೆಳಗಾವಿ ಸಮಾವೇಶ; ಅಸಮಾಧಾನ: ಕೋವಿಡ್ ನಿಯಮ ಉಲ್ಲಂಘಿಸಿ ಜನವರಿ 17ರಂದು ಬೆಳಗಾವಿಯಲ್ಲಿ

ನಡೆಸಿರುವ ಬಿಜೆಪಿ ಸಮಾವೇಶದ ಆಯೋಜಕರ ವಿರುದ್ಧ ಕ್ರಮ ಕೈಗೊಳ್ಳದಿರುವ ಬಗ್ಗೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತು.

ತಪ್ಪಿತಸ್ಥರ ವಿರುದ್ಧ ದಂಡ ವಿಧಿಸಲಾಗಿದೆ ಎಂದು ಪೊಲೀಸ್ ಆಯುಕ್ತರು ಸಲ್ಲಿಸಿದ್ದ ಪ್ರಮಾಣ ಪತ್ರ ಪರಿಶೀಲಿಸಿದ ಪೀಠ, ‘ಪೊಲೀಸ್ ಆಯುಕ್ತರಿಗೆ ಕಾಯ್ದೆಯ ಬಗ್ಗೆ ಅರಿವಿದ್ದಂತೆ ಕಾಣಿಸುತ್ತಿಲ್ಲ. ಆಯೋಜಕರ ವಿರುದ್ಧ ಎಫ್‌ಐಆರ್ ದಾಖಲಿಸಿಲ್ಲ. ಕಾಯ್ದೆಯ ನಿಯಮಗಳನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ. ಈ ಪ್ರಮಾಣ ಪತ್ರವನ್ನು ಒಪ್ಪಲು ಆಗುವುದಿಲ್ಲ. ಜೂ.3ರೊಳಗೆ ಹೊಸದಾಗಿ ಪ್ರಮಾಣ ಪತ್ರ ಸಲ್ಲಿಸಬೇಕು’ ಎಂದು ತಿಳಿಸಿತು.

ಸಮಾರಂಭದಲ್ಲಿ ಭಾಗಿಯಾಗಿದ್ದ ಪ್ರತಿಯೊಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಈ ಹಿಂದೆ ನೀಡಿದ್ದ ಆದೇಶ ಪಾಲಿಸಿರುವ ಬಗ್ಗೆ ಅನುಪಾಲನಾ ವರದಿ ಸಲ್ಲಿಸಬೇಕು ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಜೂ.4ಕ್ಕೆ ಮುಂದೂಡಿತು.

ಕೋವಿಡ್: ಮರಣ ಪ್ರಮಾಣ ಶೇ 2.58 ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆಯಲ್ಲಿ ಇಳಿಕೆ ಕಂಡರೂ ಸೋಂಕಿನ ತೀವ್ರತೆಗೆ ಮೃತಪಡುವವರ ಸಂಖ್ಯೆ ನಿಯಂತ್ರಣಕ್ಕೆ ಬಂದಿಲ್ಲ. ಇದರಿಂದಾಗಿ ಮರಣ ಪ್ರಮಾಣ ದರ ಶೇ 2.58ಕ್ಕೆ ಏರಿಕೆಯಾಗಿದೆ.

ಕಾಯಿಲೆ ಎದುರಿಸುತ್ತಿರುವವರಲ್ಲಿ ಬೆಂಗಳೂರಿನಲ್ಲಿ 350 ಮಂದಿ ಸೇರಿದಂತೆ ರಾಜ್ಯದಲ್ಲಿ 588 ಮಂದಿ ಸಾವಿಗೀಡಾಗಿರುವುದು ಮಂಗಳವಾರ ದೃಢಪಟ್ಟಿದೆ. ಮೃತಪಟ್ಟವರು ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆಯನ್ನು (ಸಾರಿ) ಎದುರಿಸಿದ್ದಾರೆ.

ನಾಯಕತ್ವ ಬದಲಾವಣೆಗೆ ಶಾಸಕಾಂಗ ಸಭೆ ನಾಂದಿ ?

ಒಂದನೇ ಪುಟದಿಂದ

‘ಸರ್ಕಾರದ ಈ ನಿರ್ಧಾರದಿಂದ ಶಾಸಕರು ಎಲ್ಲೂ ತಲೆ ಎತ್ತಿಕೊಂಡು ಓಡಾಡದ ಹಾಗೆ ಆಗಿದೆ. ನೈತಿಕವಾಗಿ ಒಂದು ವಿಚಾರದ ಬಗ್ಗೆ ವಿರೋಧ ಪಕ್ಷದಲ್ಲಿದ್ದಾಗ ಹೋರಾಟ ಮಾಡಿ, ನಮ್ಮದೇ ಸರ್ಕಾರ ಬಂದಾಗ ಪರಭಾರೆ ಮಾಡಿದ್ದು ಎಷ್ಟರ ಮಟ್ಟಿಗೆ ಸರಿ? ನಮ್ಮ ಬೇಡಿಕೆ ಒಂದೇ, ಸಂಪುಟದ ನಿರ್ಣಯವನ್ನು ಹಿಂದಕ್ಕೆ ಪಡೆಯಬೇಕು. ಪರಭಾರೆ ಆದೇಶವನ್ನು ರದ್ದುಪಡಿಸಬೇಕು ಅಷ್ಟೇ’ ಎಂದು ಅವರು ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ಚರ್ಚೆ: ‘ಜೂನ್ ಕೊನೆಯೊಳಗೆ ಹೊಸ ಮುಖ್ಯಮಂತ್ರಿ ಆಯ್ಕೆ ನೂರಕ್ಕೆ ನೂರು ಖಚಿತ’ ಎಂದು ಯಡಿಯೂರಪ್ಪ ವಿರೋಧಿ ಬಣದಲ್ಲಿ ಗುರುತಿಸಿಕೊಂಡಿರುವ ಶಾಸಕರು ಪ್ರತಿಪಾದಿಸುತ್ತಿದ್ದಾರೆ.

‘ಇದು ಬರೀ ಊಹಾಪೋಹ. ಕೋವಿಡ್ ಸಂಕಷ್ಟದಲ್ಲಿ ಅಂತಹ ನಿರ್ಣಯ ತೆಗೆದುಕೊಳ್ಳುವ ಸಾಧ್ಯತೆಗಳಿಲ್ಲ’ ಎಂದು ಯಡಿಯೂರಪ್ಪ ಬಣದ ಶಾಸಕರೊಬ್ಬರು ಹೇಳಿದರು.

‘ಸಿಬಿಐ ನಿರ್ದೇಶಕರ ಆಯ್ಕೆ ಪ್ರಕ್ರಿಯೆಯಲ್ಲಿ ಲೋಪ’

ನವದೆಹಲಿ (ಪಿಟಿಐ): ಸಿಬಿಐಗೆ ಹೊಸ ನಿರ್ದೇಶಕರನ್ನು ಆಯ್ಕೆ ಮಾಡುವಲ್ಲಿ ಸರ್ಕಾರ ಗಂಭೀರವಾಗಿಲ್ಲ ಮತ್ತು ನಿರ್ಲಕ್ಷ್ಯದ ವಿಧಾನವನ್ನು ಅನುಸರಿಸುತ್ತಿದೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಗುಂಪಿನ ನಾಯಕ ಅಧೀರ್ ರಂಜನ್ ಚೌಧರಿ ಆರೋಪಿಸಿದ್ದಾರೆ. ಅಂತಿಮ ಪಟ್ಟಿಯನ್ನು (ಶಾರ್ಟ್‌ಲಿಸ್ಟ್) ಸಿದ್ಧಪಡಿಸುವ ಪ್ರಕ್ರಿಯೆಯನ್ನು ಪ್ರಶ್ನಿಸಿರುವ ಅವರು, ಇದು ಸಮಿತಿಯ ಆಯ್ಕೆಯ ನಿರ್ಧಾರಕ್ಕೆ ವಿರುದ್ಧವಾಗಿದೆ ಎಂದಿದ್ದಾರೆ.

ಲೋಕಸಭೆಯ ಅತಿದೊಡ್ಡ ವಿರೋಧ ಪಕ್ಷದ ನಾಯಕರಾಗಿರುವ ಚೌಧರಿ ಅವರು ಸಿಬಿಐ ನಿರ್ದೇಶಕರ ನೇಮಕಾತಿಯ ಮೂವರು ಸದಸ್ಯರ ಉನ್ನತಾಧಿಕಾರ ಸಮಿತಿಯಲ್ಲಿ ಒಬ್ಬರಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಉಳಿದ ಇಬ್ಬರು ಸದಸ್ಯರು.

‘ಈ ಹುದ್ದೆಗೆ ಅರ್ಹರು ಎಂದು ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಸಿದ್ಧಪಡಿಸಿದ 109 ಮಂದಿಯ ಪಟ್ಟಿಯಲ್ಲಿ ಹಲವರು ಈಗಾಗಲೇ ನಿವೃತ್ತರಾಗಿದ್ದಾರೆ. ಹೀಗಾಗಿ ನಾನು ಅದರ ಬಗ್ಗೆ ಧ್ವನಿ ಎತ್ತಿದೆ’ ಎಂದು ಚೌಧರಿ ಹೇಳಿದ್ದಾರೆ.

‘ಆಯ್ಕೆ ಪ್ರಕ್ರಿಯೆಯಲ್ಲಿ ಆಗಿರುವ ಲೋಪವನ್ನು ನಾನು ಪ್ರಶ್ನಿಸಿದ್ದೇನೆ. ಸಿಬಿಐ ನಿರ್ದೇಶಕರ ಹುದ್ದೆಗೆ ಆಯ್ಕೆ ಮಾಡುವ ಅಥವಾ ಕೈಬಿಡುವ ನಿರ್ಧಾರವನ್ನು ಸಮಿತಿ ತೆಗೆದುಕೊಳ್ಳುತ್ತದೆ. ಹೀಗಿರುವಾಗಿ ಸಿಬ್ಬಂದಿ ಮತ್ತು ತರಬೇತಿ ಸಚಿವಾಲಯವು ಕಿರುಪಟ್ಟಿ (ಶಾರ್ಟ್‌ಲಿಸ್ಟ್) ಮಾಡಲು ಹೇಗೆ ಸಾಧ್ಯ’ ಎಂಬುದು ಅರ್ಥವಾಗುತ್ತಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.

ಆಯ್ಕೆಗೆ ಅಳವಡಿಸಿಕೊಂಡ ಕಾರ್ಯವಿಧಾನವನ್ನು ಸೋಮವಾರ ನಡೆದ ಸಭೆಯಲ್ಲಿ ಚೌಧರಿ ಅವರು ಪ್ರಶ್ನಿಸಿದರು. ಸಂಭವನೀಯರ ಹೆಸರನ್ನು ಆಯ್ಕೆ ಮಾಡುವುದು ಅಥವಾ ಬಿಡುವುದು ಸಮಿತಿಯ ನಿರ್ಧಾರ ಎಂದು ಪ್ರತಿಪಾದಿಸಿದರು.

ರಷ್ಯಾದ ಸ್ಪುಟ್ನಿಕ್ ಲಸಿಕೆ ಪೂರೈಸುವ ಭರವಸೆ

2 ಕೋಟಿ ಲಸಿಕೆಗೆ ಒಐಟಿ: 2 ಕಂಪನಿ ಮಾತ್ರ ಬಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆಗಾಗಿ ಹಾಹಾಕಾರ ಉಂಟಾಗಿರುವ ನಡುವೆ, ಬಹು ಡೋಸ್‌ಗಳಿರುವ ಎರಡು ಕೋಟಿ ವಯಲ್ಸ್ ಲಸಿಕೆ ಪೂರೈಕೆಗಾಗಿ ಆಹ್ವಾನಿಸಿದ್ದ ‘ಮುಕ್ತ ಅಂತರರಾಷ್ಟ್ರೀಯ ಟೆಂಡರ್’ಗೆ (ಒಐಟಿ) ಕೇವಲ ಎರಡು ಕಂಪನಿಗಳು ಬಿಡ್ ಸಲ್ಲಿಸಿವೆ.

ಜಾಗತಿಕಮಟ್ಟದಲ್ಲಿ ಟೆಂಡರ್ ಆಹ್ವಾನಿಸಿದ್ದರೂ ಎರಡು ಭಾರತೀಯ ಕಂಪನಿಗಳು ಮಾತ್ರ ಭಾಗವಹಿಸಿದ್ದು, ರಷ್ಯಾದ ಸ್ಪುಟ್ನಿಕ್ ಲಸಿಕೆ ಪೂರೈಸುವ ಭರವಸೆ ನೀಡಿದೆ ಎಂದು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ (ಕೆಎಸ್‌ಎಂಎಸ್‌ಸಿಎಲ್) ಮೂಲಗಳು ಹೇಳಿವೆ.

‘ಸ್ಪುಟ್ನಿಕ್ ವಿ ಲಸಿಕೆಯನ್ನು ಸರಬರಾಜು ಮಾಡುವುದಾಗಿ ಮುಂಬೈಯ ಬಲ್ಕ್ ಎಂಆರ್‌ಒ ಇಂಡಸ್ಟ್ರೀಯಲ್ ಸಪ್ಲೈ ಕಂಪನಿ ತಿಳಿಸಿದೆ. ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ತುಳಸಿ ಸಿಸ್ಟಮ್ಸ್ ಕಂಪನಿ ಸ್ಪುಟ್ನಿಕ್ + ಸಿಂಗಲ್ ಡೋಸ್ ಲಸಿಕೆ ಪೂರೈಸುವುದಾಗಿ ತಿಳಿಸಿದೆ. ಈ ಕಂಪನಿಗಳು ಸಲ್ಲಿಸಿರುವ ದಾಖಲೆಗಳ ಪರಿಶೀಲನೆ ನಡೆಯುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಲಸಿಕೆ ಪೂರೈಕೆಗೆ ಕೆಎಸ್‌ಎಂಎಸ್‌ಸಿಎಲ್ ಮೇ 14ರಂದು ಟೆಂಡರ್ ಕರೆದಿತ್ತು. ಬಿಡ್ ಸಲ್ಲಿಸಲು ಸೋಮವಾರ (ಮೇ 24) ಕೊನೆಯ ದಿನವಾಗಿತ್ತು. ಬುಧವಾರ ಬೆಳಿಗ್ಗೆ ಬಿಡ್ ತೆರೆಯಲಾಗಿದೆ.

‘ಟೆಂಡರ್ ಆಹ್ವಾನಿಸುವಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಎಚ್‌ಎಂ) ನಿರ್ದೇಶಕರು ಕೆಎಸ್‌ಎಂಎಸ್‌ಸಿಎಲ್‌ಗೆ ಸೂಚಿಸಿದ್ದರು. ಸಲ್ಲಿಕೆಯಾದ ಬಿಡ್‌ಗಳ ಬಗ್ಗೆ ಎನ್‌ಎಚ್‌ಎಂಗೆ ಮಾಹಿತಿ ನೀಡಲಾಗಿದೆ. ಮುಂದಿನ ಕ್ರಮಗಳನ್ನು ಎನ್‌ಎಚ್‌ಎಂ ತೆಗೆದುಕೊಳ್ಳಲಿದೆ. ಜಾಗತಿಕ ಟೆಂಡರ್ ಆಹ್ವಾನಿಸಿ ಲಸಿಕೆ ಖರೀದಿಸಲು ರಾಜ್ಯ ಸರ್ಕಾರ ₹ 843 ಕೋಟಿ ಮೀಸಲಿಟ್ಟಿದೆ. ಬಿಡ್ ಸಲ್ಲಿಸಲು ಕೇವಲ 10 ದಿನಗಳ ಕಾಲಾವಕಾಶ ಮಾತ್ರ ನೀಡಲಾಗಿತ್ತು. ಈ ಅಲ್ಪ ಅವಧಿಯಲ್ಲಿ ಕೆಲವು ಕಂಪನಿಗಳಿಗೆ ಭಾಗವಹಿಸಲು ಸಾಧ್ಯವಾಗದೇ ಇರಬಹುದು. ಹೀಗಾಗಿ, ಮತ್ತೆ ಟೆಂಡರ್ ಕರೆಯುವ ಬದಲು ಇನ್ನಷ್ಟು ಕಾಲಾವಕಾಶ ನೀಡುವ ಬಗ್ಗೆ ಚಿಂತನೆ ನಡೆದಿದೆ ಎಂದೂ ಮೂಲಗಳು ತಿಳಿಸಿವೆ.

ಟೆಂಡರ್‌ನಲ್ಲಿ ಭಾಗವಹಿಸಿದ ಬಗ್ಗೆ ಪ್ರತಿಕ್ರಿಯಿಸಿದ ಬಲ್ಕ್ ಎಂಆರ್‌ಒ ಇಂಡಸ್ಟ್ರೀಯಲ್ ಸಪ್ಲೈ ಕಂಪನಿಯ ಸಹ ಸಂಸ್ಥಾಪಕ ದೇವಾಂಗ್ ಶಾ, ‘ಸ್ಪುಟ್ನಿಕ್ ಲಸಿಕೆ ಸರಬರಾಜು ಮಾಡಲು ನಮ್ಮ ಕಂಪನಿ ಪರವಾನಗಿ ಒಪ್ಪಂದ ಮಾಡಿಕೊಂಡಿದೆ. ಇತರ ಉತ್ಪಾದಕ ಕಂಪನಿಗಳ ಜೊತೆಗೂ ಮಾರಾಟ ಒಪ್ಪಂದ ಮಾಡಿಕೊಳ್ಳಲು ಮಾತುಕತೆ ನಡೆಯುತ್ತಿದೆ’ ಎಂದರು.

‘ಸೋಲಾರ್ ಮತ್ತು ಎಲ್‌ಇಡಿ ಪರಿಕರಗಳನ್ನು ಪೂರೈಸುವ ನಮ್ಮ ಕಂಪನಿ, ಕಳೆದ ಒಂದು ವರ್ಷದಿಂದ ಕೋವಿಡ್ ನಿರ್ವಹಣೆಯ ಪರಿಕರಗಳನ್ನೂ ಪೂರೈಸುತ್ತಿದೆ’ ಎಂದು ತುಳಸಿ ಸಿಸ್ಟಮ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಟಿ.ಎಸ್. ಶ್ರೀನಿವಾಸ್ ಹೇಳಿದರು.

ಏಳು ರಾಜ್ಯಗಳಲ್ಲಿ 143 ಕೇಂದ್ರಗಳು; ₹ 14.30 ಕೋಟಿ ವೆಚ್ಚ

ರಾಜ್ಯದಲ್ಲಿ 31 ಖೇಲೊ ಇಂಡಿಯಾ ಕೇಂದ್ರ

ನವದೆಹಲಿ (ಪಿಟಿಐ): ಕರ್ನಾಟಕ ಸೇರಿದಂತೆ ಏಳು ರಾಜ್ಯಗಳಲ್ಲಿ ಒಟ್ಟು 143 ಖೇಲೊ ಇಂಡಿಯಾ ಕೇಂದ್ರಗಳನ್ನು ಸ್ಥಾಪಿಸಲು ಕೇಂದ್ರ ಕ್ರೀಡಾ ಇಲಾಖೆ ನಿರ್ಧರಿಸಿದ್ದು ಇದಕ್ಕಾಗಿ ₹ 14.30 ಕೋಟಿ ವೆಚ್ಚ ಮಾಡಲಿದೆ.

ತಳಮಟ್ಟದಲ್ಲಿ ಕ್ರೀಡಾ ಸೌಲಭ್ಯಗಳನ್ನು ಹೆಚ್ಚಿಸುವ ಉದ್ದೇಶದಿಂದ ಈ ಕೇಂದ್ರಗಳ ಸ್ಥಾಪನೆಗೆ ನಿರ್ಧರಿಸಲಾಗಿದೆ. ಕರ್ನಾಟಕದ 31 ಜಿಲ್ಲೆಗಳಲ್ಲೂ ಕೇಂದ್ರಗಳು ತಲೆ ಎತ್ತಲಿವೆ. ಮಹಾರಾಷ್ಟ್ರ, ಮಿಜೋರಾಂ, ಗೋವಾ, ಮಧ್ಯಪ್ರದೇಶ, ಅರುಣಾಚಲಪ್ರದೇಶ ಮತ್ತು ಮಣಿಪುರ ಆಯ್ಕೆಯಾಗಿರುವ ಇತರ ರಾಜ್ಯಗಳು. ಪ್ರತಿ ಕೇಂದ್ರದಲ್ಲೂ ಒಂದು ಕ್ರೀಡೆಯಲ್ಲಿ ವಿಶೇಷವಾಗಿ ತರಬೇತಿ ನೀಡಲು ನಿರ್ಧರಿಸಲಾಗಿದೆ.

'2028ರ ಒಲಿಂಪಿಕ್ಸ್ ವೇಳೆಗೆ ಕ್ರೀಡಾ ಕ್ಷೇತ್ರದಲ್ಲಿ ಭಾರತ ಪ್ರಮುಖ 10 ರಾಷ್ಟ್ರಗಳ ಪಟ್ಟಿಯಲ್ಲಿ ಕಾಣಿಸಿಕೊಳ್ಳಬೇಕೆಂಬುದು ಸರ್ಕಾರದ ಉದ್ದೇಶ. ಇದು ಸಾಧ್ಯವಾಗಬೇಕಾದರೆ ಸಣ್ಣ ವಯಸ್ಸಿನಲ್ಲೇ ಪ್ರತಿಭೆಗಳನ್ನು ಗುರುತಿಸಿ ತರಬೇತಿ ನೀಡಬೇಕು. ಖೇಲೊ ಇಂಡಿಯಾ ಕೇಂದ್ರಗಳು ಇದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಲಿವೆ' ಎಂದು ಕ್ರೀಡಾ ಸಚಿವ ಕಿರಣ್ ರಿಜಿಜು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಜಿಲ್ಲಾ ಮಟ್ಟದ ಖೇಲೊ ಇಂಡಿಯಾ ಕೇಂದ್ರಗಳಲ್ಲಿ ಸಮರ್ಥ ಕೋಚ್‌ಗಳು ಮತ್ತು ಉತ್ತಮ ಸೌಲಭ್ಯಗಳು ಲಭ್ಯವಾದರೆ ಪ್ರತಿಭಾ ಶೋಧ ಸುಲಭವಾಗಿ ನಡೆಯಲಿದೆ' ಎಂದು ಅವರು ಹೇಳಿದ್ದಾರೆ.

ದೇಶದ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ಖೇಲೊ ಇಂಡಿಯಾ ಕೇಂದ್ರ ಸ್ಥಾಪಿಸುವ ಉದ್ದೇಶದಿಂದ ನಾಲ್ಕು ವರ್ಷಗಳಲ್ಲಿ ಒಂದು ಸಾವಿರ ಕೇಂದ್ರಗಳನ್ನು ತೆರೆಯುವುದಾಗಿ 2020ರ ಜೂನ್‌ನಲ್ಲಿ ಕ್ರೀಡಾ ಇಲಾಖೆ ಹೇಳಿತ್ತು. ವಿವಿಧ ರಾಜ್ಯಗಳಲ್ಲಿ ಈಗಾಗಲೇ 217 ಕೇಂದ್ರಗಳನ್ನು ಆರಂಭಿಸಲಾಗಿದೆ. ಈಶಾನ್ಯ ರಾಜ್ಯಗಳು, ಜಮ್ಮು ಮತ್ತು ಕಾಶ್ಮೀರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ, ಲಕ್ಷದ್ವೀಪ, ಲಡಾಖ್‌ನ ಪ್ರತಿ ಜಿಲ್ಲೆಯಲ್ಲಿ ಎರಡು ಕೇಂದ್ರಗಳ ಸ್ಥಾಪನೆಯಾಗಿದೆ.

ಮಹಾರಾಷ್ಟ್ರದಲ್ಲಿ 36 ಕೇಂದ್ರಗಳು: ಈ ಬಾರಿ ಮಹಾರಾಷ್ಟ್ರದ 30 ಜಿಲ್ಲೆಗಳಲ್ಲಿ 36 ಕೇಂದ್ರಗಳನ್ನು ತೆರೆಯಲು ಮತ್ತು ಅರುಣಾಚಲಪ್ರದೇಶದ 26 ಜಿಲ್ಲೆಗಳಲ್ಲಿ 52 ಕೇಂದ್ರಗಳನ್ನು ತೆರೆಯಲು ನಿರ್ಧರಿಸಲಾಗಿದೆ. ಇವೆರಡು ರಾಜ್ಯಗಳನ್ನು ಬಿಟ್ಟರೆ ಕರ್ನಾಟಕಕ್ಕೆ ಹೆಚ್ಚು ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. ಕೋಚ್‌ಗಳನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳಿಗೆ ವಹಿಸಲಾಗಿದೆ.

ಕೋಚ್‌ಗಳ ಶೀಘ್ರ ನೇಮಕಕ್ಕೆ ಸೂಚನೆ: ಪ್ರತಿ ಕೇಂದ್ರಗಳಿಗೂ ಆಯಾ ವಿಭಾಗದಲ್ಲಿ ಸಾಧನೆ ಮಾಡಿರುವವರನ್ನು ಕೋಚ್ ಅಥವಾ ಪೋಷಕರನ್ನಾಗಿ ನೇಮಕ ಮಾಡಲು ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರದಲ್ಲಿ ಖೇಲೊ ಇಂಡಿಯಾ ಯೋಜನೆಯ ಹಿರಿಯ ನಿರ್ದೇಶಕ ಸತ್ಯನಾರಾಯಣ ಮೀನಾ ಸೂಚಿಸಿದ್ದಾರೆ. ಪ್ರತಿ ಕೇಂದ್ರದಲ್ಲೂ ಪುರುಷ ಮತ್ತು ಮಹಿಳಾ ತರಬೇತುದಾರರಿಗೆ ಸಮಾನ ಪ್ರಾತಿನಿಧ್ಯ ನೀಡಬೇಕು ಎಂದು ಸೂಚಿಸಲಾಗಿದೆ.

ಸ್ಥಾಪನೆಯಾಗುವ ಕೇಂದ್ರಗಳ ವಿವರ

ರಾಜ್ಯ	ಕೇಂದ್ರ	ಮೊತ್ತ
ಅರುಣಾಚಲಪ್ರದೇಶ	52	4.12 ಕೋಟಿ
ಮಹಾರಾಷ್ಟ್ರ	36	3.60 ಕೋಟಿ
ಕರ್ನಾಟಕ	31	3.10 ಕೋಟಿ
ಮಣಿಪುರ	16	1.60 ಕೋಟಿ
ಮಧ್ಯಪ್ರದೇಶ	4	40 ಲಕ್ಷ
ಮಿಜೋರಾಂ	2	20ಲಕ್ಷ
ಗೋವಾ	2	20 ಲಕ್ಷ

(ಮೊತ್ತ ₹ಗಳಲ್ಲಿ)

ಡಬ್ಲ್ಯುಎಫ್‌ಐನಿಂದ ಸುಶೀಲ್ 'ಔಟ್'?

ನವದೆಹಲಿ (ಪಿಟಿಐ): ಕೊಲೆ ಆರೋಪದಲ್ಲಿ ಬಂಧನದಲ್ಲಿರುವ, ಎರಡು ಒಲಿಂಪಿಕ್ಸ್ ಪದಕ ವಿಜೇತ ಸುಶೀಲ್ ಕುಮಾರ್ ಅವರನ್ನು ಭಾರತ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ವಾರ್ಷಿಕ ಗುತ್ತಿಗೆ ಪಟ್ಟಿಯಿಂದ ಕೈಬಿಡುವ ಸಾಧ್ಯತೆಯಿದೆ. ಪೂಜಾ ಧಂಡಾ ಅವರನ್ನೂ ಪರಿಗಣಿಸದಿರಲು ನಿರ್ಧರಿಸಲಾಗಿದೆ ಎಂದು ತಿಳಿದುಬಂದಿದೆ.

ಸುಶೀಲ್ ಕುಮಾರ್

ಮುಂದಿನ ತಿಂಗಳು ನಡೆಯುವ ಫೆಡರೇಷನ್‌ನ ಸಭೆಯಲ್ಲಿ ಈ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.

ಡಬ್ಲ್ಯುಎಫ್‌ಐ ಮತ್ತು ಪ್ರಾಯೋಜಕ ಕಂಪನಿ ಟಾಟಾ ಮೋಟರ್ಸ್ ನಡುವಣ ಸಭೆ ಹೋದ ವರ್ಷವೇ ನಡೆಯಬೇಕಿತ್ತು. ಆದರೆ ಕೋವಿಡ್–19 ಹಿನ್ನೆಲೆಯಲ್ಲಿ ಮುಂದೂಡಲಾಗಿತ್ತು.

ಸುಶೀಲ್ ಅವರು ಉತ್ತಮ ಸಾಮರ್ಥ್ಯ ತೋರದ ಕಾರಣ ಕೈಬಿಡಲಾಗುತ್ತಿದೆಯೇ ಹೊರತು ಕೊಲೆ ಪ್ರಕರಣದ ಆರೋಪಕ್ಕೂ ಇದಕ್ಕೂ ಸಂಬಂಧವಿಲ್ಲ ಎಂದು ಡಬ್ಲ್ಯುಎಫ್‌ಐ ಮೂಲಗಳು ಹೇಳಿವೆ. ಛತ್ರಸಾಲ ಕ್ರೀಡಾಂಗಣದಲ್ಲಿ ನಡೆದ ಘಟನೆಯಲ್ಲಿ ಯುವ ಕುಸ್ತಿಪಟು ಸಾಗರ್ ಕೊಲೆಯಾಗಿತ್ತು. ಈ ಪ್ರಕರಣದಲ್ಲಿ ಸುಶೀಲ್ ಕೈವಾಡವಿದೆಯೆಂದು ಅವರನ್ನು ಬಂಧಿಸಲಾಗಿದೆ.

'ಗುತ್ತಿಗೆ ಪಟ್ಟಿಗೆ ಸೇರಿದಾಗಿನಿಂದ ಸುಶೀಲ್ ಹಾಗೂ ಪೂಜಾ ಅವರ ಸಾಮರ್ಥ್ಯದಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿಲ್ಲ. ಮುಂದಿನ ತಿಂಗಳು ನಡೆಯುವ ಪರಿಶೀಲನಾ ಸಭೆಯಲ್ಲಿ ಅವರನ್ನು ಪಟ್ಟಿಯಿಂದ ಕೈಬಿಡುವ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ' ಎಂದು ಡಬ್ಲ್ಯುಎಫ್‌ಐ ಅಧಿಕಾರಿಯೊಬ್ಬರು ಹೇಳಿದ್ದಾರೆ.

ರೈಲ್ವೆ ಇಲಾಖೆಯಿಂದ ಅಮಾನತು

ಪ್ರಕರಣದಲ್ಲಿ ಭಾಗಿಯಾಗಿ ಬಂಧನಕ್ಕೆ ಒಳಗಾಗಿರುವುದರಿಂದ ಸುಶೀಲ್ ಕುಮಾರ್ ಅವರನ್ನು ಉತ್ತರ ರೈಲ್ವೆ ಅಮಾನತು ಮಾಡಿದೆ. ರೈಲ್ವೆಯಲ್ಲಿ ಹಿರಿಯ ವಾಣಿಜ್ಯ ವ್ಯವಸ್ಥಾಪಕರಾಗಿದ್ದ ಅವರನ್ನು 2015ರಿಂದ ದೆಹಲಿ ಸರ್ಕಾರದ ಸೇವೆಗಾಗಿ ನಿಯೋಜನೆ ಮಾಡಲಾಗಿತ್ತು. ಶಾಲಾ ಮಟ್ಟದಲ್ಲಿ ಕ್ರೀಡೆಯ ಬೆಳವಣಿಗೆಗಾಗಿ ಅವರನ್ನು ಛತ್ರಸಾಲ ಕ್ರೀಡಾಂಗಣದಲ್ಲಿ ಅಧಿಕಾರಿಯಾಗಿ ನೇಮಕ ಮಾಡಲಾಗಿತ್ತು. ಕಳೆದ ವರ್ಷ ಮಾತೃ ಇಲಾಖೆಗೆ ವಾಪಸ್ ಕಳುಹಿಸಲಾಗಿತ್ತು.

ಟೆನಿಸ್: 2ನೇ ಸುತ್ತಿಗೆ ರಾಮಕುಮಾರ್

ಪ್ಯಾರಿಸ್ (ಪಿಟಿಐ): ಭಾರತದ ರಾಮಕುಮಾರ್ ರಾಮನಾಥನ್ ಅವರು ಫ್ರೆಂಚ್ ಓಪನ್ ಟೆನಿಸ್ ಅರ್ಹತಾ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಎರಡನೇ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ. ಆದರೆ ಪ್ರಜ್ಞೇಶ್ ಗುಣೇಶ್ವರನ್ ಅವರಿಗೆ ಮೊದಲ ತಡೆ ದಾಟಲು ಸಾಧ್ಯವಾಗಲಿಲ್ಲ.

ರಾಮಕುಮಾರ್ ಮೊದಲ ಸುತ್ತಿನಲ್ಲಿ 2–6, 7–6, 6–3ರಿಂದ ಅಮೆರಿಕದ ಮೈಕೆಲ್ ಮೊಹ್ ಸವಾಲು ಮೀರಿದರು. ಪ್ರಜ್ಞೇಶ್ ಅವರು ಮೊದಲ ಪಂದ್ಯದಲ್ಲಿ 2–6, 2–6ರಿಂದ ಜರ್ಮನಿಯ ಆಸ್ಕರ್ ಒಟ್ಟೆ ಎದುರು ಸೋತರು.

ಸೆಪ್ಟೆಂಬರ್‌ನಲ್ಲಿ ಐಪಿಎಲ್?

ನವದೆಹಲಿ (ಪಿಟಿಐ): ಕೋವಿಡ್–19ರಿಂದಾಗಿ ಮುಂದೂಡಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಉಳಿದಿರುವ 31 ಪಂದ್ಯಗಳನ್ನು ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಯುಎಇಯಲ್ಲಿ ನಡೆಸಲು ನಿರ್ಧರಿಸಲಾಗಿದೆ ಎಂದು ಬಿಸಿಸಿಐನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೆಪ್ಟೆಂಬರ್ 18 ಅಥವಾ 19ರಂದು ಟೂರ್ನಿ ಪುನರಾರಂಭಗೊಳ್ಳಲಿದ್ದು ಮೂರು ವಾರಗಳಲ್ಲಿ ಪೂರ್ಣಗೊಳಿಸಲಾಗುವುದು. 10 ದಿನ ತಲಾ ಎರಡು ಪಂದ್ಯಗಳು (ಡಬಲ್ ಹೆಡರ್) ಇರುತ್ತವೆ. ಫೈನಲ್ ಪಂದ್ಯವನ್ನು ಅಕ್ಟೋಬರ್ 9 ಅಥವಾ 10 ರಂದು ನಡೆಸುವ ಸಾಧ್ಯತೆ ಇದೆ. ಕೆಲವು ಆಟಗಾರರಲ್ಲಿ ಕೋವಿಡ್ ದೃಢಪಟ್ಟ ಹಿನ್ನೆಲೆಯಲ್ಲಿ ಮೇ 4ರಂದು ಟೂರ್ನಿಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿತ್ತು.

'ಟೂರ್ನಿಗೆ ಸಿದ್ಧರಾಗಿರಲು ಬಿಸಿಸಿಐ ನಮಗೆ ತಿಳಿಸಿದೆ. ಸೆಪ್ಟೆಂಬರ್ 15ರಿಂದ 20ರ ಅವಧಿಯನ್ನು ನಮಗೆ ನೀಡಲಾಗಿದೆ'ಎಂದು ತಂಡವೊಂದರ ಅಧಿಕಾರಿ ತಿಳಿಸಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿ ರದ್ದು: ಸೆಪ್ಟೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ನಡೆಯಬೇಕಾಗಿದ್ದ ಟಿ20 ಸರಣಿಯನ್ನು ರದ್ದುಗೊಳಿಸಲು ಬಿಸಿಸಿಐ ನಿರ್ಧರಿಸಿದೆ. ಟಿ20 ವಿಶ್ವಕಪ್ ಟೂರ್ನಿಯ ಸಿದ್ಧತೆಗೆ ಈ ಸರಣಿ ಅನುಕೂಲ ಎಂದೆನಿಸಲಾಗಿತ್ತು.

'ವಿಶ್ವಕಪ್ ಸಿದ್ಧತೆಗೆ ಐಪಿಎಲ್‌ಗಿಂತ ಉತ್ತಮ ಟೂರ್ನಿ ಯಾವುದೂ ಇಲ್ಲ. ಆಫ್ರಿಕಾ ವಿರುದ್ಧದ ಸರಣಿಯನ್ನು ಮುಂದೆ ಯಾವತ್ತಾದರೂ ಆಯೋಜಿಸಬಹುದು' ಎಂದು ಅಧಿಕಾರಿ ಹೇಳಿದ್ದಾರೆ.

ಏಷ್ಯನ್ ಬಾಕ್ಸಿಂಗ್: ಸೆಮಿಫೈನಲ್‌ಗೆ ಶಿವ

ದುಬೈ (ಪಿಟಿಐ): ಭಾರತದ ಶಿವ ಥಾಪಾ ಇಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 64 ಕೆಜಿ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಶಿವ ಥಾಪಾ

ಮಂಗಳವಾರ ನಡೆದ ಎಂಟರ ಘಟ್ಟದ ಬೌಟ್‌ನಲ್ಲಿ ಅವರು ಕುವೈತ್‌ನ ನದೇರ್ ಒದಾ ಎದುರು 5–0 ಅಂತರದ ಗೆಲುವು ಸಾಧಿಸಿದರು.

ಪದಕ ಗೆದ್ದರೆ ಸತತ ಐದು ಬಾರಿ ಈ ಸಾಧನೆ ಮಾಡಿದ ಭಾರತದ ಏಕೈಕ ಬಾಕ್ಸರ್ ಎಂಬ ಹೆಗ್ಗಳಿಕೆ ಅವರದಾಗಲಿದೆ. 56 ಕೆಜಿ ವಿಭಾಗದ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಮೊಹಮ್ಮದ್ ಹಸಮುದ್ದೀನ್ ಉಜ್ಬೆಕಿಸ್ತಾನದ ಮಿರಾಜಿಜ್ಬೆಕ್ ಮಿರ್ಜಹಲಿಲೊವ್‌ಗೆ 1–4ರಲ್ಲಿ ಮಣಿದರು.

ಕ್ರಿಕೆಟ್: ಜೂನ್ 2ರಂದು ಇಂಗ್ಲೆಂಡ್‌ಗೆ ತೆರಳುವ ಸಾಧ್ಯತೆ

ಭಾರತ ತಂಡಗಳ ಕ್ವಾರಂಟೈನ್ ಆರಂಭ

ಮುಂಬೈ (ಪಿಟಿಐ): ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿರುವ ಭಾರತದ ಪುರುಷ ಮತ್ತು ಮಹಿಳಾ ಕ್ರಿಕೆಟ್ ತಂಡಗಳ ಎಂಟು ದಿನಗಳ ಕಠಿಣ ಕ್ವಾರಂಟೈನ್ ಮಂಗಳವಾರ ಆರಂಭವಾಗಿದೆ. ವಿಮಾನನಿಲ್ದಾಣ ಸಮೀಪದ ಗ್ರ್ಯಾಂಡ್ ಹಯಾತ್ ಹೋಟೆಲ್‌ನಲ್ಲಿ ತಂಡಗಳು ಬಯೊಬಬಲ್ ಪ್ರವೇಶಿಸಿವೆ.

ಎಲ್ಲ ಆಟಗಾರರು ಮತ್ತು ಸಿಬ್ಬಂದಿಯನ್ನು ಮೂರು ಬಾರಿ ಪರೀಕ್ಷೆಗೆ ಒಳಪಡಿಸಲಾಗುವುದು. ಮೂರೂ ಪರೀಕ್ಷೆಗಳ ವರದಿ ನೆಗೆಟಿವ್ ಬಂದವರು ಇಂಗ್ಲೆಂಡ್‌ಗೆ ತೆರಳುವರು. ಜೂನ್ ಎರಡರಂದು ತಂಡಗಳು ವಿಮಾನವೇರುವ ಸಾಧ್ಯತೆ ಇದೆ.

ಇಂಗ್ಲೆಂಡ್‌ನಲ್ಲಿ ಕ್ವಾರಂಟೈನ್ ದಿನಗಳನ್ನು ಕಡಿಮೆ ಮಾಡುವ ಕುರಿತು ಮಾತುಕತೆ ನಡೆಯುತ್ತಿದೆ. ಹೋಟೆಲ್ ಕೊಠಡಿಗಳಲ್ಲೇ ಕುಳಿತುಕೊಳ್ಳಬೇಕಾಗಿರುವ ಕಠಿಣ ಕ್ವಾರಂಟೈನ್‌ನಿಂದ ವಿನಾಯಿತು ಸಿಗುವ ಸಾಧ್ಯತೆ ಇದೆ ಎನ್ನಲಾಗಿದೆ.

ರೋಹಿತ್ ಶರ್ಮಾ, ಅಜಿಂಕ್ಯ ರಹಾನೆ ಮತ್ತು ವಿರಾಟ್ ಕೊಹ್ಲಿ– ಎಎಫ್‌ಪಿ ಚಿತ್ರ

ವಿರಾಟ್ ಕೊಹ್ಲಿ ನಾಯಕತ್ವದ ಭಾರತ, ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನ್ನು ಜೂನ್ 18ರಿಂದ ನ್ಯೂಜಿಲೆಂಡ್ ಎದುರು ಆಡಲಿದೆ. ನಂತರ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಪಾಲ್ಗೊಳ್ಳಲಿದೆ.

ಮಿಥಾಲಿ ರಾಜ್ ಸಾರಥ್ಯದ ಮಹಿಳಾ ತಂಡದವರು ಜೂನ್ 16ರಿಂದ ನಡೆಯಲಿರುವ ಏಕೈಕ ಟೆಸ್ಟ್ ಪಂದ್ಯದೊಂದಿಗೆ ಅಭಿಯಾನ ಆರಂಭಿಸಲಿದ್ದಾರೆ. ಟೆಸ್ಟ್ ನಂತರ ತಲಾ ಮೂರು ಪಂದ್ಯಗಳ ಏಕದಿನ ಸರಣಿ ಮತ್ತು ಟಿ20 ಸರಣಿಗಳು ನಡೆಯಲಿವೆ.

ವೇಟ್‌ಲಿಫ್ಟಿಂಗ್: ಜೆರೆಮಿ ಕೈತಪ್ಪಿದ ಕಂಚು

ತಾಷ್ಕೆಂಟ್ (ಪಿಟಿಐ): ಭಾರತದ ಜೆರೆಮಿ ಲಾಲ್‌ರಿನ್ನುಂಗಾ ವಿಶ್ವ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕೂದಲೆಳೆ ಅಂತರದಿಂದ ಪದಕ ತಪ್ಪಿಸಿಕೊಂಡರು. 67 ಕೆಜಿ ವಿಭಾಗದಲ್ಲಿ ಮಂಗಳವಾರ ನಾಲ್ಕನೇ ಸ್ಥಾನ ಗಳಿಸಿದರು.

ಜೆರೆಮಿ, ಒಟ್ಟು 300 ಕೆಜಿ (ಸ್ನ್ಯಾಚ್ 135 ಮತ್ತು ಕ್ಲೀನ್ ಆ್ಯಂಡ್ ಜೆರ್ಕ್ 165) ಭಾರ ಎತ್ತಿದರು. ಟರ್ಕಿಯ ಜೋಡಿ ಮುಹಮ್ಮದ್ ಫುರ್ಕಾನ್ ಒಜ್ಬೆಕ್ ಮತ್ತು ಯುಸೂಫ್ ಫೆಹ್ಮಿ ಜೆಂಕ್ ಕ್ರಮವಾಗಿ ಚಿನ್ನ ಮತ್ತು ಕಂಚಿನ ಪದಕ ಗೆದ್ದರು. ಕಜಕಸ್ತಾನದ ಅಕ್ಮೊಲ್ದಾ ಸೈರಾಮ್ಬೆಕ್ ಬೆಳ್ಳಿ ಪದಕ ಗಳಿಸಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,197
ಇಂದಿನ ಅಂತ್ಯ	15,208
▲	11
ದಿನದ ಗರಿಷ್ಠ	15,294

ವಿನಿಮಯ ದರ

$ ಡಾಲರ್	72.80
£ ಪೌಂಡ್	103.18
€ ಯುರೊ	89.18
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹547

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹1415 (1402)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1305 (1310)

ಕುಸ್ತಿಪಟು ಬಸವರಾಜ ನಿಧನ

ಹುಬ್ಬಳ್ಳಿ: ಕುಸ್ತಿಪಟು, ಧಾರವಾಡ ತಾಲ್ಲೂಕಿನ ಇಟಿಗಟ್ಟಿ ಗ್ರಾಮದ ಬಸವರಾಜ ಗಾಯಕವಾಡ (60) ಮಂಗಳವಾರ ನಿಧನರಾದರು.

ಬಸವರಾಜ ಗಾಯಕವಾಡ

ಅವರು ಇಟಗಟ್ಟಿ ಬಸಣ್ಣ ಎಂದೇ ಹೆಸರಾಗಿದ್ದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಕುಸ್ತಿ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ಬಸವರಾಜ, ಮೈಸೂರು ದಸರಾದಲ್ಲಿ ಕುಮಾರ ಪ್ರಶಸ್ತಿ ಪಡೆದಿದ್ದರು. ಬಾಲಾ ರಫೀಕ್, ಅನ್ವರ್ ರಫೀಕ್ ಸೇರಿದಂತೆ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದ ಅನೇಕ ಪೈಲ್ವಾನರನ್ನು ಸೋಲಿಸಿ ಕುಸ್ತಿ ಪ್ರೇಮಿಗಳ ಮೆಚ್ಚುಗೆ ಗಳಿಸಿದ್ದರು.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಚಂದ್ರಮೋಹನ್, ಊರುಬೇಡ

- **ಪ್ರಶ್ನೆ: ನಾನು ಸರ್ಕಾರಿ ವೃತ್ತಿಯಿಂದ ವಿಆರ್‌ಎಸ್ ಪಡೆದಿದ್ದೇನೆ. ಈಗ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ತಿಂಗಳಿಗೆ ₹ 10 ಸಾವಿರ ಉಳಿಸಬಹುದು. ಈ ಹಣ ಆರ್.ಡಿ. ಅಥವಾ ಮ್ಯೂಚುವಲ್ ಫಂಡ್ 'ಎಸ್‌ಐಪಿ'ಯಲ್ಲಿ ಇರಿಸಬೇಕೆಂದಿದ್ದೇನೆ. ಒಂದು ವೇಳೆ 'ಎಸ್‌ಐಪಿ'ಯಲ್ಲಿ ಹಣ ಹೂಡುವುದಾದರೆ ಭದ್ರತೆ ಇರುವ ಯೋಜನೆ ಇದ್ದರೆ ತಿಳಿಸಿ. ನಾನು ನಿಮ್ಮ ಸಲಹೆಗಳಿಂದ ಪ್ರಭಾವಿತನಾಗಿದ್ದೇನೆ.**

ಉತ್ತರ: ನೀವು ಮ್ಯೂಚುವಲ್ ಫಂಡ್‌ನ 'ಎಸ್‌ಐಪಿ'ಯಲ್ಲಿ ₹ 10 ಸಾವಿರ ಹೂಡಲು ಬಯಸಿದ್ದೀರಿ. 'ಎಲ್ಲಾ ಮೊಟ್ಟೆಗಳನ್ನೂ ಒಂದೇ ಬುಟ್ಟಿಯಲ್ಲಿ ಇಡಬೇಡಿ' ಎನ್ನುವ ಗಾದೆ ನೆನಪಿಸಿಕೊಂಡು ₹ 5 ಸಾವಿರ 'ಎಸ್‌ಐಪಿ'ಯಲ್ಲಿ ಹಾಗೂ ₹ 5 ಸಾವಿರ ಆರ್.ಡಿ.ಯಲ್ಲಿ ಹೂಡಿಕೆ ಮಾಡಿ. 'ಎಸ್‌ಐಪಿ' ಆರಿಸಿಕೊಳ್ಳುವಾಗ ಡೆಟ್ ಫಂಡ್ (ಸರ್ಕಾರಿ ಸಾಲಪತ್ರಗಳಲ್ಲಿ ಹಣ ತೊಡಗಿಸುವುದು) ಆರಿಸಿಕೊಳ್ಳಿ. ಇದರಲ್ಲಿ ನಷ್ಟ ಆಗುವ ಸಾಧ್ಯತೆ ಇರುವುದಿಲ್ಲ ಜೊತೆಗೆ ಉತ್ತಮ ವರಮಾನ ಬರುವ ಸಾಧ್ಯತೆಯೂ ಇದೆ. ಇನ್ನುಳಿದ ₹ 5 ಸಾವಿರವನ್ನು ಆರ್.ಡಿ. ಮಾಡಿ. ಇವೆರಡೂ ಪ್ರತಿ ತಿಂಗಳೂ ತುಂಬುವ ಯೋಜನೆ ಆಗಿದ್ದು, ಆರ್ಥಿಕ ಶಿಸ್ತು ಕಾಪಾಡಿಕೊಳ್ಳಲು ಬಹು ಉಪಯೋಗಿ ಆಗಿವೆ. ಹೀಗೆ ಆರ್.ಡಿ. ಮತ್ತು 'ಎಸ್‌ಐಪಿ' ಮಾಡುವಾಗ ತಿಂಗಳ ಕಂತು ಭರಿಸಲು ನಿಮ್ಮ ಉಳಿತಾಯ ಖಾತೆಯಿಂದ ಈ ಎರಡೂ ಯೋಜನೆಗಳಿಗೆ ಪ್ರತಿ ತಿಂಗಳೂ ಹಣ ವರ್ಗಾಯಿಸಲು ಬ್ಯಾಂಕ್‌ಗೆ ನಿರ್ದೇಶನ (ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್) ಕೊಡಿ. ಈ ಸೇವೆ ಶುಲ್ಕ ರಹಿತವಾಗಿದೆ.

ವಿಜಯೇಂದ್ರ, ಮೈಸೂರು

- **ಪ್ರಶ್ನೆ: ಎಲ್.ಐ.ಸಿ.ಯವರ 'ಜೀವನ್ ಅಕ್ಷಯ್' ಪಾಲಿಸಿ ವಿಚಾರದಲ್ಲಿ ಸಂಪೂರ್ಣ ಮಾಹಿತಿ ಕೊಡಿ. ಈ ಯೋಜನೆಯಲ್ಲಿ ತೆರಿಗೆ ವಿನಾಯಿತಿ, ವಿಮೆ ಸವಲತ್ತುಗಳಿವೆಯೇ?**

ಉತ್ತರ: ಈ ಯೋಜನೆಯಲ್ಲಿ ಕನಿಷ್ಠ ₹ 1 ಲಕ್ಷ (ಗರಿಷ್ಠ ಮಿತಿ ಇಲ್ಲ) ತೊಡಗಿಸಿ ಪ್ರತೀ ತಿಂಗಳೂ ಪಿಂಚಣಿ ರೂಪದಲ್ಲಿ ವರಮಾನ ಪಡೆಯಬಹುದು. ಇಲ್ಲಿ ಹಣ ಹೂಡಿಕೆ ಮಾಡಲು 30 ವರ್ಷ ವಯಸ್ಸಿನಿಂದ 100 ವರ್ಷ ವಯಸ್ಸಿನವರೆಗಿನ ವ್ಯಕ್ತಿಗಳು ಅರ್ಹರು. ಓರ್ವ ವ್ಯಕ್ತಿ ₹ 10 ಲಕ್ಷ ಹಣ ಹೂಡಿದರೆ ವಾರ್ಷಿಕ ₹ 65,850 (ಮಾಸಿಕ ₹ 5,487) ನಿರಂತರವಾಗಿ ಪಡೆಯಬಹುದು. ಪಿಂಚಣಿ ರೂಪದಲ್ಲಿ ಪಡೆಯುವ ಈ ಯೋಜನೆಯಲ್ಲಿ ಪ್ರಸ್ತುತ ಶೇ 6ಕ್ಕೂ ಹೆಚ್ಚಿನ ಬಡ್ಡಿ ಬಂದಂತಾಗುತ್ತದೆ. ಇದೊಂದು ಜೀವಿತಾವಧಿ ಹೂಡಿಕೆಯಾಗಿದ್ದು, ಮಾರಣಾಂತಿಕ ಕಾಯಿಲೆ ಹೊರತುಪಡಿಸಿ ಮಧ್ಯದಲ್ಲಿ ವಾಪಸು ಪಡೆಯುವಂತಿಲ್ಲ. ಜೀವನದ ಸಂಜೆಯಲ್ಲಿ ನಿಶ್ಚಿತ ವರಮಾನ ಪಡೆದು ಸುಖವಾಗಿ ಬಾಳಲು ಈ ಯೋಜನೆ ಉಪಯುಕ್ತ. ಹೆಚ್ಚಿನ ಮಾಹಿತಿಗೆ ಕರೆ ಮಾಡಿ.

ರಾಮಚಂದ್ರ, ಬೆಳಗಾವಿ

- **ಪ್ರಶ್ನೆ: ನಾನು ಖಾಸಗಿ ಬ್ಯಾಂಕ್‌ನಲ್ಲಿ ₹ 45 ಲಕ್ಷ ಗೃಹಸಾಲ ಪಡೆದಿದ್ದೇನೆ. ಗೃಹಸಾಲ ಪಡೆಯುವಾಗ ನನ್ನೊಡನಿರುವ ಎಲ್.ಐ.ಸಿ. ಮನಿ ಬ್ಯಾಕ್ ಪಾಲಿಸಿ ಬ್ಯಾಂಕ್‌ನಲ್ಲಿ ಅಡವಿಟ್ಟಿದ್ದೇನೆ. ಇದರಿಂದಾಗಿ ಈ ಪಾಲಿಸಿಯಿಂದ ಕಾಲಕಾಲಕ್ಕೆ ಬರುವ ಹಣವು ನನಗೆ ಬರುತ್ತಿಲ್ಲ. ನಾನು ಈ ಹಣ ವಾಪಸು ಪಡೆಯುವ ಬಗೆ ಹೇಗೆ? ಸಾಲ ತೀರಿಸಿದ ನಂತರ ಹಿಂದಿರುಗಿಸುವರೇ?**

ಉತ್ತರ: ಗೃಹ ಸಾಲ ಪಡೆಯುವಾಗ ನಿವೇಶನ ಅಡಮಾನ ಇರಿಸುವುದರಿಂದ ಬ್ಯಾಂಕ್‌ಗಳಲ್ಲಿ ಎಲ್.ಐ.ಸಿ ಅಥವಾ ಬೇರೆ ಆಧಾರ ಕೇಳುವುದಿಲ್ಲ. ಆದರೆ, ಗೃಹಸಾಲ ದೀರ್ಘಾವಧಿ ಸಾಲ ಆಗಿರುವುದರಿಂದ ಸಾಲಗಾರ ಮಧ್ಯದಲ್ಲಿ ಮರಣ ಹೊಂದಿದರೆ ಸಾಲದ ಹೊರೆ ಕುಟುಂಬದ ಮೇಲೆ ಬೀಳಬಾರದು ಎನ್ನುವ ಕಾರಣಕ್ಕೆ ಕೆಲವು ಬ್ಯಾಂಕ್‌ಗಳು ಅವಧಿ ವಿಮೆ ಮಾಡಿಸುತ್ತವೆ. ನೀವು ಈಗಾಗಲೇ ಬ್ಯಾಂಕ್‌ನಲ್ಲಿ ಅಡವಿಟ್ಟ ಎಲ್.ಐ.ಸಿ. ಪಾಲಿಸಿಯಿಂದ ಬರುವ ಹಣ (Money back) ನಿಮ್ಮ ಗೃಹಸಾಲಕ್ಕೆ ಜಮಾ ಆಗುತ್ತದೆ. ಈ ವಿಚಾರ ಬ್ಯಾಂಕ್‌ನಲ್ಲಿ ದೃಢಪಡಿಸಿಕೊಳ್ಳಿ ಹಾಗೂ ಮಾಸಿಕ ಸಮಾನ ಕಂತು (ಇಎಂಐ) ಕಡಿತ ಮಾಡುವಂತೆ ತಿಳಿಸಿ. ಗೃಹಸಾಲ ತೀರಿದ ನಂತರ ಎಲ್‌ಐಸಿ ಪಾಲಿಸಿಯನ್ನು ಬ್ಯಾಂಕ್‌ನಿಂದ ನಿಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಳ್ಳಲು ಮರೆಯದಿರಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಉದ್ಯಮ: ಸರ್ಕಾರದ ಆರ್ಥಿಕ ನೆರವು ಸಾಧ್ಯತೆ

ನವದೆಹಲಿ (ಪಿಟಿಐ): ಕೋವಿಡ್‌ನ ಎರಡನೆಯ ಅಲೆಯು ಆರ್ಥಿಕ ಬೆಳವಣಿಗೆಗೆ ಅಡ್ಡಿಯಾಗಿರುವ ಕಾರಣ, ಅಗತ್ಯವಿರುವ ವಲಯಗಳಿಗೆ ಆರ್ಥಿಕ ನೆರವನ್ನು ಸೂಕ್ತ ಸಂದರ್ಭದಲ್ಲಿ ಒದಗಿಸುವ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲನೆ ನಡೆಸುವ ಸಾಧ್ಯತೆ ಇದೆ.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹ ಸೇರಿದಂತೆ ಕೆಲವು ಆರ್ಥಿಕ ಆರೋಗ್ಯ ಸೂಚಕಗಳು ವಿಶ್ವಾಸ ಮೂಡಿಸುವಂತೆ ಇವೆ. ಮುಂದಿನ ದಿನಗಳಲ್ಲಿ ದೊರೆಯಲಿರುವ ಇನ್ನೂ ಕೆಲವು ಅಂಕಿ–ಅಂಶಗಳು ಆರ್ಥಿಕ ಸ್ಥಿತಿ ಹೇಗಿದೆ ಎಂಬುದರ ಬಗ್ಗೆ ಇನ್ನಷ್ಟು ಸ್ಪಷ್ಟ ಚಿತ್ರಣ ನೀಡಲಿವೆ ಎಂದು ಮೂಲಗಳು ಹೇಳಿವೆ.

ಆತಿಥ್ಯ, ಪ್ರವಾಸೋದ್ಯಮ ಮತ್ತು ವಿಮಾನಯಾನ ಕ್ಷೇತ್ರಗಳಲ್ಲಿ ಚೇತರಿಕೆಯ ಲಕ್ಷಣಗಳು ಕಾಣಿಸುತ್ತಿದ್ದವು. ಆ ಸಂದರ್ಭದಲ್ಲೇ ಎರಡನೆಯ ಅಲೆಯು ಜೋರಾಗಿ ಅಪ್ಪಳಿಸಿತು. ಈ ವಲಯಗಳಿಗೆ ಸರ್ಕಾರದ ಕಡೆಯಿಂದ ತುರ್ತಾಗಿ ಬೆಂಬಲದ ಅವಶ್ಯಕತೆ ಇದ್ದಿರಬಹುದು ಎಂದು ಅಧಿಕಾರಿಯೊಬ್ಬರು ಹೇಳಿದರು.

ದೇಶದಲ್ಲಿ ಕೃಷಿ ವಲಯದ ನಂತರ ಅತಿಹೆಚ್ಚಿನ ಜನರಿಗೆ ಉದ್ಯೋಗ ಕಲ್ಪಿಸಿರುವ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ (ಎಂಎಸ್‌ಎಂಇ) ವಲಯದ ಮೇಲೆ ಎರಡನೆಯ ಅಲೆಯ ಪರಿಣಾಮವು ತೀವ್ರವಾಗಿದೆ. ಈ ವಲಯಕ್ಕೆ ಕೂಡ ಹಣಕಾಸಿನ ನೆರವಿನ ಅಗತ್ಯ ಇದೆ. ಈಗಾಗಲೇ ಜಾರಿಯಲ್ಲಿ ಇರುವ ತುರ್ತು ಸಾಲ ಖಾತರಿ ಯೋಜನೆಯ ಕೆಲವು ನಿಯಮಗಳಲ್ಲಿ ಬದಲಾವಣೆ ತಂದು, ಈ ವಲಯಕ್ಕೆ ತಕ್ಷಣದ ಸಹಾಯ ಒದಗಿಸುವ ಸಾಧ್ಯತೆ ಇದೆ ಎಂದು ಗೊತ್ತಾಗಿದೆ.

ಎಂಎಸ್‌ಎಂಇ ವಲಯದ 6.5 ಕೋಟಿ ಉದ್ಯಮಗಳು ದೇಶದ ಜಿಡಿಪಿಗೆ ಶೇಕಡ 30ರಷ್ಟು ಕೊಡುಗೆ ನೀಡುತ್ತಿವೆ. ಸ್ಥಳೀಯವಾಗಿ ಜಾರಿಗೆ ಬಂದಿರುವ ಲಾಕ್‌ಡೌನ್ ಕ್ರಮಗಳು ತೆರವಾದ ನಂತರ, ವಾಣಿಜ್ಯ ಚಟುವಟಿಕೆಗಳ ಮೇಲೆ ನಿರ್ಬಂಧಗಳು ಇಲ್ಲವಾದ ನಂತರ ಆರ್ಥಿಕ ಸಹಾಯ ಪ್ರಕಟಿಸಿದರೆ ಅದು ಉದ್ಯಮಗಳಿಗೆ ನೆರವಾಗಬಹುದು ಎಂದು ಮೂಲಗಳು ವಿವರಿಸಿವೆ.

ಅರ್ಥ ವ್ಯವಸ್ಥೆಯ ಯಾವ ವಲಯಗಳಿಗೆ ಆದ್ಯತೆ ನೀಡಬೇಕು, ಕೋವಿಡ್ ಎರಡನೆಯ ಅಲೆಯಿಂದಾಗಿ ತೊಂದರೆಗೆ ಒಳಗಾಗಿರುವ ಉದ್ಯಮ ವಲಯಗಳಿಗೆ ಸಂಬಂಧಿಸಿದಂತೆ ಬೇಡಿಕೆ ಹೆಚ್ಚಿಸುವುದು ಹೇಗೆ ಎಂಬ ಬಗ್ಗೆ ನೀತಿ ಆಯೋಗವು ಚರ್ಚೆ ನಡೆಸಿದೆ ಎಂದು ಗೊತ್ತಾಗಿದೆ. ನೀತಿ ಆಯೋಗವು ಒಂದು ಕಾರ್ಯಯೋಜನೆಯನ್ನು ಸಿದ್ಧಪಡಿಸಿದ ನಂತರ, ಮುಂದೆ ಕೈಗೊಳ್ಳಬೇಕಾದ ಕ್ರಮ ಏನು ಎಂಬುದನ್ನು ಹಣಕಾಸು ಸಚಿವಾಲಯವು ತೀರ್ಮಾನಿಸಲಿದೆ ಎನ್ನಲಾಗಿದೆ.

ಸಂಕ್ಷಿಪ್ತ ಸುದ್ದಿ

ಫ್ಲಿಪ್‌ಕಾರ್ಟ್: 23 ಸಾವಿರ ಉದ್ಯೋಗಿಗಳ ನೇಮಕ

ಬೆಂಗಳೂರು: ಇ–ಕಾಮರ್ಸ್ ವಲಯದ ವಹಿವಾಟು ಹೆಚ್ಚುತ್ತಿರುವುದರಿಂದ ಫ್ಲಿಪ್‌ಕಾರ್ಟ್ ಕಂಪನಿಯು ಮೂರು ತಿಂಗಳ ಅವಧಿಯಲ್ಲಿ 23 ಸಾವಿರ ಜನರಿಗೆ ಉದ್ಯೋಗ ನೀಡಿದೆ. ಈ ವರ್ಷದ ಮಾರ್ಚ್‌ನಿಂದ ಮೇ ತಿಂಗಳವರೆಗಿನ ಅವಧಿಯಲ್ಲಿ ದೇಶದಾದ್ಯಂತ ಡೆಲಿವರಿ ಕಾರ್ಯನಿರ್ವಾಹಕರು ಸೇರಿದಂತೆ ತನ್ನ ಪೂರೈಕೆ ವ್ಯವಸ್ಥೆಯ ವಿವಿಧ ಹಂತಗಳಲ್ಲಿ ಈ ನೇಮಕ ಮಾಡಿಕೊಂಡಿದೆ.

'ಫ್ಲಿಪ್‌ಕಾರ್ಟ್‌ನಲ್ಲಿ ನೌಕರರ ಸುರಕ್ಷತೆಯ ಜೊತೆಗೆ, ಗ್ರಾಹಕರ ಅಗತ್ಯಗಳನ್ನು ಪೂರೈಸುವುದಕ್ಕೂ ಆದ್ಯತೆ ಇದೆ. ದೇಶದಾದ್ಯಂತ ಇ-ಕಾಮರ್ಸ್ ಸೇವೆಗಳಿಗೆ ಬೇಡಿಕೆ ಹೆಚ್ಚುತ್ತಿದ್ದು, ಈ ಸಂದರ್ಭದಲ್ಲಿ ನಮ್ಮ ಪೂರೈಕೆ ವ್ಯವಸ್ಥೆಯನ್ನು ವಿಸ್ತರಿಸುವುದರಿಂದ ಸಾವಿರಾರು ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿವೆ' ಎಂದು ಫ್ಲಿಪ್‌ಕಾರ್ಟ್‌ನ ಪೂರೈಕೆ ವ್ಯವಸ್ಥೆ ವಿಭಾಗದ ಹಿರಿಯ ಉಪಾಧ್ಯಕ್ಷ ಹೇಮಂತ್ ಬಾದ್ರಿ ತಿಳಿಸಿದರು.

₹ 17 ಸಾವಿರ ದಾಟಿದ ಕೊಬ್ಬರಿ

ತಿಪಟೂರು: ಅರಸಿಕೆರೆ ಮಾರುಕಟ್ಟೆಯಲ್ಲಿ ಮಂಗಳವಾರ ಕ್ವಿಂಟಲ್ ಕೊಬ್ಬರಿ ಬೆಲೆ ₹ 17 ಸಾವಿರದ ಗಡಿ ದಾಟಿದೆ. ತಿಂಗಳುಗಳ ಕಾಲ ₹16 ಸಾವಿರದ ಆಸುಪಾಸಿನಲ್ಲಿದ್ದ ಕೊಬ್ಬರಿಯ ಬೆಲೆಯು ಕ್ವಿಂಟಲ್‌ಗೆ ₹ 17,106ಕ್ಕೆ ತಲುಪಿದೆ. ಬೆಲೆಯು ಶೀಘ್ರದಲ್ಲೇ ₹ 20 ಸಾವಿರದ ಗಡಿ ತಲುಪಬಹುದು ಎಂದು ವರ್ತಕರು ಅಂದಾಜಿಸಿದ್ದಾರೆ.

ಪೆಟ್ರೋಲ್, ಡೀಸೆಲ್ ದರ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಮಂಗಳವಾರ ಪೆಟ್ರೋಲ್ ದರವನ್ನು ಲೀಟರಿಗೆ 23 ಪೈಸೆ, ಡೀಸೆಲ್ ದರವನ್ನು 25 ಪೈಸೆಯಷ್ಟು ಹೆಚ್ಚಿಸಿವೆ.

ಮೇ ತಿಂಗಳಿನಲ್ಲಿ 13 ಬಾರಿ ದರ ಹೆಚ್ಚಳ ಮಾಡಿದಂತಾಗಿದೆ. ಇದರಿಂದಾಗಿ ದೇಶದಾದ್ಯಂತ ಇಂಧನ ದರಗಳು ಗರಿಷ್ಠ ಮಟ್ಟ ತಲುಪಿವೆ. 13 ಬಾರಿಯ ಹೆಚ್ಚಳದ ಪರಿಣಾಮವಾಗಿ ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 2.88 ಮತ್ತು ಡೀಸೆಲ್ ದರ ₹ 3.52ರಷ್ಟು ಹೆಚ್ಚಾಗಿದೆ. ಮಂಗಳವಾರ ಪೆಟ್ರೋಲ್ ದರ ಲೀಟರಿಗೆ ₹ 96.55 ಮತ್ತು ಡೀಸೆಲ್ ದರ ಲೀಟರಿಗೆ ₹ 89.39ಕ್ಕೆ ತಲುಪಿದೆ.

ದೆಹಲಿಯಲ್ಲಿ ಪೆಟ್ರೋಲ್ ಲೀಟರಿಗೆ ₹ 93.44 ಮತ್ತು ಡೀಸೆಲ್ ಲೀಟರಿಗೆ ₹ 84.32ರಂತೆ ಮಾರಾಟವಾಗಿದೆ. ಮಹಾರಾಷ್ಟ್ರ, ರಾಜಸ್ಥಾನ ಮತ್ತು ಮಧ್ಯಪ್ರದೇಶದ ಹಲವು ನಗರಗಳಲ್ಲಿ ಪೆಟ್ರೋಲ್ ದರವು ಈಗಾಗಲೇ ₹ 100ರ ಗಡಿ ದಾಟಿದೆ. ಮುಂಬೈನಲ್ಲಿ ₹ 100ರ ಸಮೀಪ ಬಂದಿದೆ. ಮಂಗಳವಾರ ಪೆಟ್ರೋಲ್ ದರವು ₹ 99.71ಕ್ಕೆ ತಲುಪಿದೆ. ಡೀಸೆಲ್ ದರ ₹ 91.57ರಷ್ಟಿದೆ.

ಮುಂಬೈ ಧಾರಣೆ

ಶೇಂಗಾ 25-5-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	9350-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	1410 (1390)
ಪಾಮ್ ವಾರದ ಡೆಲಿವರಿ	1303 (1305)
ಸೂರ್ಯಕಾಂತಿ ಎಣ್ಣೆ ಕಚ್ಚಾ	1610 (1610)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,400 (48,400)
ಬೆಳ್ಳಿ ಕೆ.ಜಿ 70,750 (71,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಹೊಸತು	23500-40000
ಹಳತು	42500-50000
ಕಾರ್ಕಳ	
ಹೊಸತು	36000-40000
ಹಳತು	46000-50000
ಯಲ್ಲಾಪುರ	
ಬಿಳಿಗೋಟು	29790-31040
ಚಾಲಿ	32550-36610
ಪುತ್ತೂರು	
ಹೊಸತು	28000-39500
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	223-342
ದ್ವಿತಳಿ (ಬಿ.ವಿ)	292-400

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	10450
ಎಸಿ	4340
ಆರ್‌ಪಿ	5100
ಆರ್‌ಸಿ	3100